ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಫೆಲೋಶಿಪ್‌ಗಾಗಿ ಸಲ್ಲಿಸಿದ ಪ್ರಬಂಧ)







ಸಂಶೋಧಕರು

ಜಿ. ವಿ. ಶಶಿಕಲಾ

ಚಿತ್ರದುರ್ಗ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ

ಜೆ. ಸಿ. ರಸ್ತೆ ಬೆಂಗಳೂರು

೨೦೧೬

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಫೆಲೋಶಿಪ್‌ಗಾಗಿ ಸಲ್ಲಿಸಿದ ಪ್ರಬಂಧ)

ಸಂಶೋಧಕರು

ಜಿ.ವಿ.ಶಶಿಕಲಾ

ಚಿತ್ರದುರ್ಗ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ

ಜೆ.ಸಿ.ರಸ್ತೆ ಬೆಂಗಳೂರು

೨೦೧೬

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು

ಪರಿವಿಡಿ

ಪ್ರಸ್ತಾವನೆ

ಕಲೆಯ ಉದ್ದೇಶವು ಸೌಂದರ್ಯದ ಗ್ರಹಣ ಮತ್ತು ಭಾವನಾತ್ಮಕ ಪ್ರಚೋದನೆ ಅದು ಅವರವರ ಅಭ್ಯಾಸ, ಜಾಣ್ಮೆ ಮತ್ತು ಸೃಜನಶೀಲತೆ ಹಾಗೂ ಪ್ರತಿಭೆಗಳನ್ನುದರಿಸಿದೆ. ಒಂದು ಕಲೆ ಮೇಲು, ಇನ್ನೊಂದು ಕೀಳು ಎಂದೇನಿಲ್ಲ. ಮಾನವನು ತನ್ನ ಸುತ್ತಣ ಪ್ರಕೃತಿಯ ರಮಣೀಯತೆಯಿಂದ ಹೃದಯ ಕಲಕಿ ತನ್ನಿಂದ ನಿರ್ಮಿಸಲ್ಪಟ್ಟ ಕಲಾಕೃತಿಗಳಲ್ಲಿ ಅದರ ಬಗೆಗಿನ ಮೆಚ್ಚುಗೆಯನ್ನು ಅಭಿವ್ಯಕ್ತಿ ಪಡಿಸಿದ್ದಾನೆ. ಇದು ಆದಿ ಮಾನವನಾಗಿದ್ದಾಗಿನ ಕಾಲದಿಂದಲೂ ನಡೆದು ಬಂದಿದೆ. ಕಲೆ ಇಲ್ಲದೆ ಯಾವ ಬದುಕು ಬೆಳೆಯುವುದಕ್ಕೆ ಸಾಧ್ಯವಿಲ್ಲ.

ಪುರಾತನ ಭಾರತೀಯ ಚಿತ್ರ ಮತ್ತು ಶಿಲ್ಪಕಲೆಗಳು ಸಾವಿರಾರು ವರ್ಷಗಳಿಂದ ಇಂದಿನವರೆಗೂ ಮುಂದುವರಿಯುತ್ತಾ ಬಂದಿದೆ. ಗ್ರಾಮಕಲೆ ಹುಟ್ಟುವ ಮೊದಲು ಬುಡಕಟ್ಟು ಜನಾಂಗದ ಅಲೆಮಾರಿ ತಂಡಗಳು ಒಂದು ಸ್ಥಳದಲ್ಲಿ ನೆಲೆಸಲು ಪ್ರಾರಂಭಿಸಿದ ದಿನದಿಂದ ಕರಕುಶಲ ಕಲೆಗಳು ಹುಟ್ಟಿಕೊಂಡವು ಎನ್ನಬಹುದು. ಭಾರತದ ಪ್ರತಿಯೊಂದ ರಾಜ್ಯವೂ ತನ್ನದೇ ಆದ ಸಾಂಸ್ಕೃತಿಕ ಚರಿತ್ರೆಯನ್ನು ಹೊಂದಿದೆ. ಭಾರತೀಯ ಜನಪದ ಕಲೆಯ ಸಮಗ್ರ ಚಿತ್ರವನ್ನು ರೂಪಿಸಲು ಭಾರತೀಯ ಕಲೆ ಪೂರ್ಣವಾಗಿ ಬೆಳದು ಬಂದ ಪ್ರಮುಖ ಮಾರ್ಗಗಳ ವಿಸ್ತರಣೆಯೊಂದಿಗೆ, ಇಂದಿಗೂ ಉಳಿದಿರುವ ಕುಶಲಕಲೆಗಳೊಂದಿಗೆ, ದಾಖಲೆಗಳಾಗಿ ಅಳಿದು ಉಳಿದಿರುವ ಹಳೆಯ ಶಿಲಾ ವರ್ಣಚಿತ್ರಗಳು, ಮಡಿಕೆಗಳನ್ನು ನಾವು ಪರಿಗಣಿಸಬಹುದು. ಬುಡಕಟ್ಟಿನ ಮತ್ತು ರೈತಾಪಿ ಕುಶಲ ಕರ್ಮಿಗಳಿಂದ ರಚಿತವಾದ ಕಲೆಯು, ರೂಪ ಮತ್ತು ವಿಷಯಕ್ಕಾಗಿ ರಚಿಸಿದ್ದರೂ ಅವು ಬಹಳಷ್ಟು ಅಲ್ಪಕಾಲಿಕವಾಗಿವೆ. ಹಾಗೂ ಬಹು ಸುಲಭವಾಗಿ ನಾಶವಾಗುವಂಥದ್ದು, ಸಾರ್ವಜನಿಕ ಉತ್ಸವಗಳಿಗೆ ರಚಿಸಿದ ಶಿಲ್ಪಗಳು ಹಾಗೂ ವರ್ಣ ಚಿತ್ರಗಳು ಮುಕ್ತಾಯಗೊಂಡ ಮೇಲೆ ಅವುಗಳನ್ನು ವಿಸರ್ಜನೆ ಮಾಡಲಾಗುತ್ತಿತ್ತು. ಈ ರೀತಿಯಾಗಿ ಪುನಾರಾವರ್ತನೆ ಹಾಗೂ ಪುನರ್ ರಚನೆ ನಡೆಯುತ್ತಿದ್ದವು.

ಮೊದಲನೆಯದಾಗಿ ವೃತ್ತಿ ಕುಶಲ ಕಲೆಗಳು ಹಾಗೂ ಇನ್ನೊಂದು ಗುಂಪು ಹವ್ಯಾಸಿ ವ್ಯಕ್ತಿಯೇತರ ಕಲಾವಿದರು. ಅವರಲ್ಲಿ ಬಹಳಷ್ಟು ಜನ ಮಹಿಳೆಯರು ಇವರು ಕಲೆಯ ಚೌಕಟ್ಟಿನಲ್ಲಿ ತಮ್ಮ ಸಂಪದ್ರಾಯಗಳನ್ನು ಮತಾಚರಣೆಯನ್ನು ಅನುಸರಿದವರು. ಭಾರತೀಯ ಕಲೆಯ ಚರಿತ್ರೆಯ ಉಲ್ಲೇಖಗಳಲ್ಲಿ ಚಿತ್ರ, ವಾಸ್ತು, ಶಿಲ್ಪಗಳಲ್ಲಿ ಕಾಣಬಹುದು. ಹಿಂದಿನ ಮತ್ತು ಇಂದಿನ ನಡುವಿನ ಅತ್ಯಂತ ಪ್ರಮುಖ ಕಲಾತ್ಮಕ ಸಂಬಂಧವು ಅಸಂಖ್ಯಾತ ಅಲಂಕಾರಿಕ ಆಶಯಗಳು, ಲಾಂಛನಗಳು ಮತ್ತು ಸಂಕೇತಗಳನ್ನು ನೋಡಬಹುದಾಗಿದೆ. ಕರ್ನಾಟಕದಲ್ಲಿ ಜನಪದ ಚಿತ್ರಕಲೆ ಸೌಂದರ್ಯ ಮೂಲ ಅಭಿವ್ಯಕ್ತಿಯ ಸಾಧನವಾಗಿ ಗ್ರಹಲಂಕರಣಗಳಲ್ಲಿ, ನೆಲ, ಗೋಡೆ ರಂಗೋಲಿ, ಹಾಲಕ್ಕಿಗಳ ಹಲಿ, ಗದ್ದಿಗೆ, ಜಗಲಿ, ತುಳಸಿಯಕಟ್ಟೆ ಮುಂತಾದವುಗಳಲ್ಲಿ ಬಿಡಿಸುವ ವಿವಿಧ ಬಗೆಯ ಚಿತ್ರಗಾರಿಕೆ ಹಾಗೂ ದೇಹದ ವಿವಿಧ ಭಾಗಗಳ ಚರ್ಮದ ಮೇಲೆ ಬಿಡಿಸುವ ಹಚ್ಚೆ, ಮದರಂಗಿ, ದಾರದ ಸಾಧನವಾದ ಹೊಲಿಗೆ, ಹೆಣಿಗೆ, ನೆಯ್ಗೆ, ತೊಗಲುಗೊಂಬೆ, ಚನ್ನಪಟ್ಟಣದ ಗೊಂಬೆ, ಸೂತ್ರದಗೊಂಬೆ, ಕೀಲುಗೊಂಬೆ, ಯಕ್ಷಗಾನ ದೊಡ್ಡಟ ನೃತ್ಯಗಳಲ್ಲಿ ಬಳಸುವ ಕಲಾವಿನ್ಯಾಸ, ವೇಷಭೂಷಣ, ಮುಖವರ್ಣಿಕೆ, ಗಂಜೀಫಾ ಆಟ, ಕೈಲಾಸಪಟ್ಟ್, ಹುಲಿಕಟ್ಟು ಹೀಗೆ ಹಲವು ಬಗೆಯ ಜಾನಪದ ಜನಪದರ ಜೀವನ ವಿಧನ ಬದುಕಿನ ರೀತಿ ನೀತಿಗಳನ್ನು ಪ್ರತಿಬಿಂಬಿಸುತ ಜೀವಂತ ಸಂಸ್ಕೃತಿ, ಜನಾಂಗದ ಬದುಕಿನೊಂದಿಗೆ ಬೆಳೆದು ಬಂದಿರುವ ಪರಂಪರಾನುಗತ ಜನಪದ ಕಲೆಗಳು, ಆಯಾ ಸಂಸ್ಕತಿಯ ಮೂಲ ಸಂವೇದನೆಗಳೆನಿಸಿವೆ.

ಭಾರತದ ಆಯಾ ರಾಜ್ಯಗಳಲ್ಲಿ ಕಲಾ ಚಟುವಟಿಕೆಗಳನ್ನು ಕುರಿತು, ಸಾಮೂಹಿಕ ಸಂಘಟನೆ, ಉಳಿವು ಬೆಳವಣಿಗೆಯನ್ನು ಯೋಚಿಸಿ ಪ್ರಾರಂಭವಾದ ಯಾವುದೇ ಆಕರಗಳಿಲ್ಲ. ದೇಶಿಯ ಗುಣ, ವೈಶಿಷ್ಟ್ಯತೆಯನ್ನು ಹೊಂದಿದ್ದ ಭಾರತೀಯ ಪ್ರಾದೇಶಿಕ ಹಾಗೂ ಗ್ರಾಮೀಣ ಕಲೆಗಳು ಕುಶಲ ಕರ್ಮಿಗಳು ಸ್ವಾತಂತ್ರ್ಯ ನಂತರದ ಅನೇಕ ವರ್ಷಗಳಲ್ಲಿಯೂ ಬೆಳೆಯದೇ ಹೋದದ್ದು ವಿಪರ್ಯಾಸ ಸರಿ, ಆದರೆ ಇತ್ತೀಚಿಗೆ ಗ್ರಾಮೀಣ ಕಲೆಗಳನ್ನು ಗುರುತಿಸಿ, ಕುಶಲಕರ್ಮಿಗಳಿಗೆ, ಕುಶಲಕಲಾ ಪ್ರಕಾರಗಳಿಗೆ ಸಾಕಷ್ಟು ಪ್ರೋತ್ಸಾಹ ಮತ್ತು ಪ್ರಚಾರಗಳಾಗುತ್ತಿವೆ. ಪ್ರಾದೇಶಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಕರಕುಶಲ ಮೇಳಗಳು, ಪ್ರದರ್ಶನಗಳು ನಡೆಯುತ್ತಿವೆ. ನುರಿತ ಕುಶಲಕರ್ಮಿಗಳು ದೇಶ–ವಿದೇಶಿಗರ ಗಮನ ಸೆಳೆಯುತ್ತಿದ್ದಾರೆ. ಶ್ರೀಗಂಧ, ದಂತ ಕೆತ್ತನೆ, ಕರಕುಶಲ ವಸ್ತುಗಳು, ಲೋಹಶಿಲ್ಪಗಳು ಬನಾರಸ್, ಪುಣೆ, ಸುರತ್ಕಲ್, ಬೆಂಗಳೂರು ಮತ್ತು

ಮೈಸೂರುಗಳ ಕಲಾಬತ್ತಿನ ರೇಷ್ಮೆ ಸೀರೆಗಳು, ನೆಯ್ಗೆಯ ಬಟ್ಟೆಗಳು, ಉಡುಪುಗಳೂ ಪ್ರಸಿದ್ಧವಾಗಿದೆ. ಈ ಪ್ರಸಿದ್ಧಿ ಮತ್ತು ಗ್ರಾಮೀಣ ಭಾಗದ ಕಲೆಗಳ ಬೆಳವಣಿಗೆಗೆ ಪೂರಕವಾಗುವಂತೆ ಭಾರತೀಯ ಕಲೆ ಮತ್ತು ಕುರಕುಶಲ ಕಲಾ ನಿಗಮವನ್ನು ಸ್ಥಾಪಿಸಿ, ಪ್ರೋತ್ಸಾಹಿಸಿದ ಕೀರ್ತಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರಿಗೆ ಸಲ್ಲುತ್ತದೆ.

ಸಾಹಿತ್ಯ, ಕಲೆಗಳ ಸರ್ವತೋಮುಖ ಅಭಿವೃದ್ಧಿ ವಿವಿಧ ಕಲೆಗಳ ಚಟುವಟಿಕೆಗಳ ಸಮನ್ವಯ ರಾಜ್ಯದ ಹಾಗೂ ರಾಷ್ಟ್ರದ ಸಾಂಸ್ಕೃತಿಕ ಏಳಿಗೆಗಾಗಿ ಶ್ರಮಿಸುವುದು, ಅಲ್ಲದೇ ಅಧ್ಯಯನ, ಸಂಶೋಧನೆಗಳ ಪ್ರೋತ್ಸಾಹ ವಿವಿಧ ಪ್ರದೇಶಗಳ ನಡುವೆ ವಿಚಾರ ವಿನಿಮಯ ನಡೆಸುವುದು, ಪುಸ್ತಕಗಳನ್ನು ಪ್ರಕಟಿಸುವುದು ಪ್ರತಿಭಾವಂತ ಶಿಲ್ಪಕಲಾವಿದರಿಗೆ ಮತ್ತು ಸಂಸ್ಥೆಗಳಿಗೆ ಮನ್ನಣೆ ಹಾಗೂ ನೆರವು ನೀಡುವುದರ ಜೊತೆಗೆ ರಾಜ್ಯದ ವಿವಿಧ ಭಾಗಗಳ ನಾನಾ ರೀತಿಯ ಕಲೆಗಳ ಸಂಗ್ರಹ, ರಕ್ಷಣೆ ಪ್ರೋತ್ಸಾಹ ಕೊಡುವುದು, ಇಲ್ಲಿಗಾಲೇ ಸಾಕಷ್ಟು ಕಲಾಪ್ರದರ್ಶನಗಳು, ಕಲಾವಿದರು ಸಲ್ಲಿಸಿರುವ ಸೇವೆಗೆ ಪ್ರಶಸ್ತಿ, ಶಿಷ್ಯವೇತನ, ಪ್ರವಾಸಾನುಧಾನ ಮುಂತಾದ ಧ್ಯೇಯೋದ್ದೇಶಗಳನ್ನು ಕರ್ನಾಟಕದ ಶಿಲ್ಪಕಲಾ ಅಕಾಡೆಮಿ ಮಾಡುತ್ತಾ ಬಂದಿದೆ. ೨೦೧೬ರ ಸಾಲಿನಲ್ಲಿ ಕರೆಯಲಾಗಿದೆ. ಫೀಲೋಶಿಪ್ ಪ್ರಬಂಧಕ್ಕಾಗಿ ನಾನು ಆಯ್ಕೆ ಮಾಡಿಕೊಂಡಿದ್ದ ವಿಷಯ 'ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು' ಎಂಬ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಲು ನನ್ನನ್ನು ಆಯ್ಕೆ ಮಾಡಿ ಅವಕಾಶ ಕಲ್ಪಿಸಿದ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷರಾದ ಶ್ರೀ ಶಿಲ್ಪಿ ಮಹಾದೇವಪ್ಪ ಮತ್ತು ರಿಜಿಸ್ಟ್ರಾರ ಹೆಚ್.ವಿ ಇದ್ರಮ್ಮ ಹಾಗೂ ಸಮಯಕ್ಕೆ ಸರಿಯಾಗಿ ಅಕಾಡೆಮಿಯ ಸಲಹೆ ಸೂಚನೆಗಳನ್ನು ನೀಡಿದಂತಹ ಮಹೇಂದ್ರ ಹಾಗೂ ಸಿಬ್ಬಂದಿ ವರ್ಗದವರಿಗೂ ವಂದನೆಗಳು.

ಸೌಂದರ್ಯ ದೃಷ್ಟಿಯಿಂದ ಕಲಾ ಪ್ರಜ್ಞೆ ಎಂಥದು, ಎಷ್ಟು ವಿಧಾನಗಳಿಂದ ಪ್ರಕಟಗೊಳ್ಳಲು ಸಾಧ್ಯವಿದೆಯಾ? ನಮ್ಮ ಕರ್ನಾಟಕದ ಚನ್ನಪಟ್ಟಣದ ಚಿತ್ತಾರ ಗೊಂಬೆಗಳು ದೇಶ ವಿದೇಶಗಳಲ್ಲಿ ಸಾಕಷ್ಟು ಪ್ರಸಿದ್ಧಿಯನ್ನು ಪಡೆದು ಮನೆಗಳಲ್ಲದೆ ಮ್ಯುಸಿಯಿಂಗಳಲ್ಲಿ ಸಹ ಸ್ಥಳವನ್ನು ಆಕ್ರಮಿಸಿಕೊಂಡು ನಮ್ಮ ನಾಡಿನ ಹೆಸರನ್ನು ಬಹು ಎತ್ತರಕ್ಕೆ ಕೊಂಡೊಯ್ಯುದಿದೆ ಎಂಬುದನ್ನು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾದ ಕಿರು ಪರಿಚಯವನ್ನು ನಾನು ನೋಡಿ ಗಾಢವಾಗಿ ಚಿಂತನೆಗೆ ತೊಡಗಿದೆ. ಶಿಲ್ಪಕಲೆಯನ್ನು ಕುರಿತು ಕ್ರಾಂತಿ ಹಳೆಯ ಸರಹದ್ದುಗಳ ಮುಂದುವರೆಸಿಕೊಂಡು, ಚಿತ್ರಕಲೆ, ಸಂಗೀತಗಳಂತೆಯೇ ಸ್ವಂತ ಗುರಿ, ತನ್ನದೆ ಆದ ಸ್ಥಾನ, ಪ್ರಸಿದ್ಧಿ ಗಳಿಸಿ ಬೆಳೆಸುತ್ತಿರುವ

ಧೀರ ಕಲಾವಿದರ ಕಲಾ ನೈಪುಣ್ಯತೆ ನನ್ನನ್ನು ಚಕಿತಗೊಳಿಸಿರುವುದನ್ನು ನಾನು ತಿಳಿದುಕೊಂಡು ಇನ್ನು ಸಾಕಷ್ಟು ಜನರಿಗೆ ತಿಳಿಸುವ ಪ್ರಬಂಧ ರಚನೆಯ ವೇಳೆ ಜ್ಞಾನ ಸಂಪತ್ತು, ಕಲಾ ಸಂಪತ್ತುಗಳ ವಿಷಯದಲ್ಲಿ ಸಾಕಷ್ಟು ತಿಳಿಯದೆಯೂ ಬಡಬಡಿಸುವ ವಾತಾವರಣದಲ್ಲಿ ಡಾ.ಚೂಡಾಮಣಿ ನಂದಗೋಪಾಲ್ ಬೆಂಗಳೂರು ಇವರು ನನಗೆ ಮಾರ್ಗದರ್ಶಕರಾಗಿ ವಿಷಯದ ಬಗ್ಗೆ ಎಲ್ಲಾ ರೀತಿಯಾಗಿ ಸಹಕರಿಸಿ ಮಾರ್ಗದರ್ಶನವನ್ನು ಕೊಟ್ಟಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತವಾದ ಸಲಹೆಗಳನ್ನು ನೀಡಿ ಸಹಕರಿಸಿರುವುದಕ್ಕೆ ನಾನು ತುಂಬು ಹೃದಯದಿಂದ ನೆನೆಯುತ್ತೇನೆ.

ಈ ಅಧ್ಯಯನಕ್ಕೆ ನಾನು ಕೆಲವು ಸ್ಥಳೀಯ ಕಲಾವಿದರನ್ನು ಭೇಟಿ ಮಾಡಿದಾಗ ಅವರು ಸೂಕ್ತ ರೀತಿಯ ಒಪ್ಪಿಗೆ ಸಲಹೆಗಳನ್ನು ಮತ್ತು ಮಾಹಿತಿಯನ್ನು ನೀಡಿ ಸಹಕರಿಸಿದ್ದಾರೆ ಅವರನ್ನು ಈ ಸಂದರ್ಭದಲ್ಲಿ ನೆನೆಯುತ್ತೇನೆ. ಪ್ರಬಂಧ ರಚನೆಯಲ್ಲಿ ಮುಖ್ಯವಾದ ಕಾರ್ಯವೆಂದರೆ ಕ್ಷೇತ್ರಕಾರ್ಯ. ಇಂತಹ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನನ್ನ ಜೊತೆಗಿದ್ದು ವಿಷಯ ಸಂಗ್ರಹಣೆ ಸಹರಿಸಿದ. ಅಭಿ, ಹೇಮಂತ್, ಅಭಿಲಾಷ್, ಚೇತನ್, (ಮಂಡ್ಯ) ಇವರಿಗೂ ಅಭಾರಿಯಾಗಿದ್ದೇನೆ. ಈ ಅಧ್ಯಯನ್ನಕ್ಕೆ ಸಹಕರಿಸಿದ ನನ್ನ ಸ್ನೇಹಿತರಾದ ನಟರಾಜ್ ಶಿಲ್ಪಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ನನ್ನ ಮೇಲೆ ಬಹು ನಿರೀಕ್ಷೆ ಇಟ್ಟುಕೊಂಡು ಸದಾ ನನ್ನ ಏಳಿಗೆಗೆ ಬೆನ್ನು ತಟ್ಟಿ ಆಶೀರ್ವದಿಸುತ್ತಿರುವ ನನ್ನ ತಂದೆ ತಾಯಿಗಳ ಪಾದಗಳಿಗೆ ಪ್ರಣಾಮವನ್ನು ಸಲ್ಲಿಸುತ್ತೇನೆ. ಈ ಅಧ್ಯಯನದ ಸಂದರ್ಭದಲ್ಲಿ ಸಹಕರಿಸಿದ ನನ್ನ ಗೆಳತಿಯರಾದ ಸೌಭಾಗ್ಯ, ಗುರಜೀತ್ ಹಾಗೂ ಸರಿತಾ ಮತ್ತು ಅವರ ಕುಟುಂಬದವರಿಗೂ ನನ್ನ ಕೃತಜ್ಞತೆಗಳನ್ನು ತಿಳಿಸುವೆ.

ಪ್ರಸ್ತುತ ಅಧ್ಯಯನಕ್ಕೆ ಛಾಯಾಚಿತ್ರಗಳ ಜೋಡಣೆಯನ್ನು ಮಾಡಿಕೊಟ್ಟ ನನ್ನ ಸ್ನೇಹಿತನಾದ ರಾಹುಲ್‌ಗೆ ಹಾಗೂ ಪ್ರಸ್ತುತ ಅಧ್ಯಯನಕ್ಕೆ ಅಕ್ಷರ ಜೋಡಣೆಯನ್ನು (ಡಿ.ಟಿ.ಪಿ) ಮಾಡಿದಂತಹ ಸತೀಶ (ಬಾಬಾ ಗ್ರಾಫಿಕ್ಸ್, ಕುಸನೂರ ರಸ್ತೆ, ಕಲಬುರಗಿ) ರವರಿಗೂ ಈ ಸಂದರ್ಭದಲ್ಲಿ ನೆನೆಯುತ್ತೇನೆ.

ಈ ಸಂಶೋಧನ ಪ್ರಬಂಧ ಕಲಾಪ್ರಪಂಚಕ್ಕೆ ಇದೊಂದು ತೆರೆದ ಕಿರುದಾರಿ ಎನ್ನುವುದು ಸೂಕ್ತವಾದೀತು. ಕಲಾಸಕ್ತಿಯಿಂದ, ಕಲಾಭಿರುಚಿಯನ್ನು ಉಳಿಸಿ, ಬಳಸಿ, ಬೆಳೆಸಿಕೊಂಡು ಕಲಾರಸಿಕರಲ್ಲಿ ಕಳಕಳಿಯ ಬಿನ್ನಹವನ್ನು ಮಾಡುತ್ತೇನೆ. ಈ ಸಂಶೋಧನ ಪ್ರಬಂಧ ಮುಂದಿನ

ಆಸಕ್ತ ಸಂಶೋಧಕರಿಗೂ ಹಾಗೂ ವಿದ್ಯಾರ್ಥಿಗಳಿಗೆ ಸಾರ್ಥಕವಾಗಲಿ. ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲಿ ಇಂತಹ ಸಂಶೋಧನ ಪ್ರಬಂಧಗಳ ರಚನೆಯ ಅವಕಾಶ ಕಲ್ಪಿಸಿಕೊಟ್ಟಿದೆ. ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತೇನೆ. ಇಂತಹ ಕಾರ್ಯಗಳಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಅವಕಾಶಗಳನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಜಿ.ವಿ.ಶಶಿಕಲಾ, ಚಿತ್ರದುರ್ಗ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿ

ಮಾನವನ ವಿಕಾಸದ ಚರಿತ್ರೆಯನ್ನು ಅವಲೋಕಿಸಿದಾಗ ಮಾನವನ ಬೌದ್ಧಿಕ ಬೆಳವಣಿಗೆಯಾದಂತೆ ತಾನು ಬದುಕುತ್ತಿದ್ದ ಸಮಾಜ ಮತ್ತು ಪರಿಸರವನ್ನು ತನ್ನದೇ ರೀತಿಯಲ್ಲಿ ಪುನರ್ ಮನನ ಮಾಡಿಕೊಳ್ಳತೊಡಗಿದ. ಈ ಪುನರ್ ಮನನದ ಹತ್ತು ಹಲವು ದಾರಿಗಳನ್ನು ಕಂಡುಕೊಂಡಿದ್ದು, ಮಾನವನ ಇತಿಹಾಸದಲ್ಲಿ ಅವಿಸ್ಮರಣೀಯ ಬೆಳವಣಿಗೆಯ ಹಂತವಾಗಿದೆ ಕಲೆಯ ಪ್ರತಿಯೊಂದು ಮನುಷ್ಯನ ಅಂತರ್ಯದಲ್ಲಿ ಈ ಕಲಾಶಕ್ತಿ ವಿವಿಧ ಪ್ರಮಾಣದಲ್ಲಿ ಸುಪ್ತವಾಗಿ ಅಡಗಿರುತ್ತದೆ. ಕೆಲವರನ್ನು ಶ್ರೇಷ್ಠ ಚಿತ್ರಕಲಾವಿದನ್ನಾಗಿ, ಶ್ರೇಷ್ಠ ಶಿಲ್ಪಕಲಾವಿದನ್ನಾಗಿ, ಶ್ರೇಷ್ಠ ಚಿಂತಕನ್ನಾಗಿ ಹಾಗೂ ಶ್ರೇಷ್ಠ ವ್ಯಕ್ತಿಯನ್ನಾಗಿ ರೂಪಿಸುತ್ತ ಹೋಗುತ್ತದೆ. ಒಂದೊಂದು ವಿಷಯವೂ ಲೋಕದಲ್ಲಿ ಮಾತ್ರವಲ್ಲದೆ ಪ್ರಕೃತಿ ಮಾತೆಯ ಲೋಕದಲ್ಲಿಯೂ ತನ್ನ ಅನಂತ ಸ್ವರೂಪವನ್ನು ಅತ್ಯಂತ ವಿನೂತನವಾಗಿ ಪಡಿಮೂಡಿಸುತ್ತಾ ಇಡೀ ಲೋಕವನ್ನು ಅಸ್ವಾದನೀಯವಾಗಿ ಮಾಡಿ ಬಿಟ್ಟದೆ.

ಮಾನವನಲ್ಲಿ ಆವಿಷ್ಕರಗೊಂಡ ಕಲೆಯ ಅತನ ಅಂತರಿಕ ಮತ್ತು ಬಾಹ್ಯ ಬದುಕನ್ನು ಸುಂದರಗೊಳಿಸುವ ನಿಟ್ಟಿನಲ್ಲಿ ಆನೇಕ ಕವಲುಗಳಾಗಿ ವಿಂಗಡನೆಗೊಂಡಿವೆ. ಮೂರ್ತಿಕಲೆ, ಚಿತ್ರಕಲೆ, ವಾಸ್ತುಕಲೆ, ಸಂಗೀತ, ನಾಟ್ಯ ಮುಂತಾದವುಗಳು ಮನುಷ್ಯ ಕುಲಕ್ಕೆ ಆನಂದ ಕೋಡುವ ಸಾಧನಗಳಾಗಿ ರೂಪಾಂತರಗೊಂಡವು. ಮುಂದಿನ ದಿನಗಳಲ್ಲಿ ನಾಗರೀಕತೆಯ ಬದುಕಿನಿಂದಾಗಿ ಈ ಕಲಾ ಪ್ರಕಾರಗಳು ಶಿಸ್ತುಬದ್ಧವಾದ ಮಾರ್ಗದ ಚೌಕಟ್ಟಿನ ಒಳಪಟ್ಟು ಸೀಮಿತವಾದಂತಹ

ಉದ್ದೇಶಗಳನ್ನು ಹೋದಿದ್ದವು. ಆದರೆ ಅವುಗಳ ಜೊತೆಗೆ ಜನಪದರು ದೇಶಿ ಪರಂಪರೆಯಲ್ಲಿ ಕಲಾ ಪ್ರಕಾರಗಳನ್ನು ಅಳವಡಿಸಿಕೊಂಡು ಪ್ರತ್ಯೇಕವಾದ ಶೈಲಿಯನ್ನು ಅನುಸರಿಸಿಕೊಂಡು ಬಂದರು ಜನಪದರು ಅನುಸರಿಸಿಕೊಂಡು ಬಂದ ಕಲಾ ಪ್ರಕಾರಗಳಲ್ಲಿ ಮುಖ್ಯವಾಗಿ ಚಿತ್ರಕಲೆ, ಶಿಲ್ಪಕಲೆ, ಹಾಡುಗಾರಿಕೆ ಮತ್ತು ನೃತ್ಯ ಮುಂತಾದವುಗಳ ಒಳಗೊಳ್ಳುತ್ತವೆ ಇವುಗಳಲ್ಲಿ ಮೂರ್ತಿಶಿಲ್ಪ ಮತ್ತು ಚಿತ್ರಕಲೆಯ ಪ್ರಕಾರಗಳ ಸಂಗಮವಾದ ಗೊಂಬೆ ತಯಾರಿಕೆಯ ವಿಶಿಷ್ಟವಾಗಿದ್ದು ಕಲಾತ್ಮಕವಾಗಿ ಮತ್ತು ಸೌಂದರ್ಯದ ಹಿನ್ನೆಲೆಯ ಜೊತೆಗೆ ಮಕ್ಕಳ ಮನೋರಂಜನಾ ಸಾಧನವಾಗಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಗೊಂಬೆ ತಯಾರಿಕೆಯಲ್ಲಿ ಹಲವಾರು ಪ್ರಕಾರಗಳಿದ್ದು ತೊಗಲು ಗೊಂಬೆ, ಸೂತ್ರದ ಗೊಂಬೆ, ಕಿಟ್ಟದ ಗೊಂಬೆ, ಕಟ್ಟಿಗೆ ಗೊಂಬೆ ಹೀಗೆ ಹಲವು ರೀತಿಯ ಗೊಂಬೆಗಳ ತಯಾರಿಕೆಯು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ತನ್ನದೆ ಪ್ರಸಿದ್ಧ ಪ್ರಖ್ಯಾತಗೊಂಡಿದೆ. ಇವುಗಳಲ್ಲಿ ಬೆಂಗಳೂರು ಗ್ರಾಮಂತರ ಜಿಲ್ಲೆಯ ಚನ್ನಪಟ್ಟಣವು ಚಿತ್ತಾರದ ಗೊಂಬೆಗಳಿಗೆ ನಾಡಿನಾದ್ಯಂತ ಪ್ರಸಿದ್ಧಿಯನ್ನು ಪಡೆದಿದ್ದು ಅಲ್ಲದೇ ಚನ್ನಪಟ್ಟಣವು ಬಣ್ಣದ ಗೊಂಬೆಯ ತಯಾರಿಕೆಯಲ್ಲಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ಗೊಂಬೆಗಳ ತಯಾರಿಕೆ ಒಂದು ಬೃಹತ್ ಉದ್ಯಮವಾಗಿ ಬೆಳೆದಿದ್ದು ಸುಮಾರು ಮಂದಿಗೆ ಜೀವನೋಪಾಯವನ್ನು ಕಲ್ಪಿಸುವ ಸಾಧನವಾಗಿದೆ. ಈ ಊರಿನಲ್ಲಿ ಬಹುಮಟ್ಟಿಗೆ ಹೆಚ್ಚಿನ ಕುಟುಂಬಗಳು ಗೊಂಬೆ ತಯಾರಿಕೆಯಲ್ಲಿ ತೊಡಗಿಕೊಂಡಿವೆ. ಒಂದು ಅಂದಾಜಿನ ಪ್ರಕಾರ ೧೦ ರಿಂದ ೧೫ ಸಾವಿರ ಕಾರ್ಮಿಕರು ಈ ಕಲೆಯನ್ನು ಅವಲಂಭಿಸಿ ಬದುಕನ್ನು ನಡೆಸುತ್ತಿದ್ದಾರೆ. ಅಲ್ಲದೇ ಗೊಂಬೆಗಳನ್ನು ತಯಾರಿಸುವ ಸ್ವಯಂ ಸೇವ ಸಂಘಗಳಾದ 'ಶಿಲ್ಪಾ ಟ್ರಸ್ಟ್' ಮತ್ತು 'ಮಾಯ ಸ್ವಯಂ ಸೇವಾ ಸಂಘ' ಇಲ್ಲಿನ ಕುಶಲಕರ್ಮಿಗಳಿಗೆ ತರಬೇತಿ ನೀಡಿ ಉದ್ಯಮಿ ಬೆಳವಣಿಗೆಗೆ ಶ್ರಮಿಸುತ್ತವೆ. ವಾರ್ಷಿಕ ಕೋಟಿ ರೂಪಾಯಿ ವಹಿವಾಟು ನಡೆಸುತ್ತಿವೆ. ಅಲ್ಲದೇ ಗೊಂಬೆಗಳನ್ನು ತಯಾರಿಸುವ ನೂರಕ್ಕೂ ಹೆಚ್ಚು ಕಾರ್ಖಾನೆಗಳು ಇಂದಿಗು ಕಾರ್ಯ ನಿರ್ವಹಿಸುತ್ತದೆ. ಪ್ರಾಚೀನ ಪರಂಪರೆಯನ್ನು ಹೊಂದಿದ ಸುಂದರವಾದ ಬಣ್ಣಗಳಿಂದ ಕೂಡಿದ ಈ ಚಿತ್ತಾರದ ಗೊಂಬೆಗಳು ಕೆಲವು ಪ್ರಯೋಜನದ ದೃಷ್ಟಿಯಿಂದ ಮಾತ್ರ ಮಹತ್ವ ಪಡೆದುಕೊಂಡಿವೆ ಕಲಾತ್ಮಕ ದೃಷ್ಟಿಕೋನದಿಂದಲೂ ಪ್ರಾಮುಖ್ಯತೆ ಪಡೆದುಕೊಂಡಿವೆ. ಆದರೆ ಇವುಗಳ ಬಗ್ಗೆ ಇದುವರೆಗೆ ಕಲಾತ್ಮಕ ಹಿನ್ನೆಲೆಯಲ್ಲಿ ಯಾವುದೇ

ರೀತಿಯ ಗಂಭೀರ ಅಧ್ಯಾಯನಗಳು ನಡೆಯದೇ ಇರುವುದನ್ನು ಪರಿಗಣಿಸಿ ಪ್ರಸ್ತುತ ಅಧ್ಯಾಯನವನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಚನ್ನಪಟ್ಟಣವು ರಾಜಕೀಯ, ಸಾಂಸ್ಕೃತಿಕವಾಗಿ ಮತ್ತು ಕಲಾತ್ಮಕವಾಗಿ ಭವ್ಯ ಪರಂಪರೆಹೊಂದಿದೆ. ಮೈಸೂರಿನ ಒಡೆಯರ, ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನಿನ ಕಾಲದ ಜೊತೆಗೆ ಬ್ರಿಟಿಷ್ ಕಾಲದಲ್ಲಿಯೂ ಸಹಿತ ಇಲ್ಲಿನ ಕಲಾ ಪರಂಪರೆ ಅವಿಚ್ಛಿನ್ನವಾಗಿ ನಡೆದುಕೊಂಡು ಬಂದಿದೆ. ಆದರೆ ಕಾಲ ಕಾಲಕ್ಕೆ ಅನುಸಾರವಾಗಿ ಚನ್ನಪಟ್ಟಣದ ಗೊಂಬೆಗಳ ತಯಾರಿಕೆಯ ವಿಧಾನಗಳು ಪರಿಕರಗಳ ರಚನೆ ಉದ್ದೇಶಗಳು ಮತ್ತು ಪ್ರಭಾವ ಪ್ರೇರಣೆಗಳು ಹೇಗೆ ಬಂದವು ಎಂಬುದನ್ನು ಅಧ್ಯಾಯನಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ. ಜೊತೆಗೆ ಚನ್ನಪಟ್ಟಣದ ಪರಿಸರದ ಶಿಲ್ಪಕಲೆ, ಚಿತ್ರಕಲೆ, ವಾಸ್ತುಕಲೆ, ಸಂಗೀತ, ಸಾಹಿತ್ಯ ಮತ್ತು ನೃತ್ಯ ಮುಂತಾದ ಲಲಿತಕಲೆಗಳು ಈ ಗೊಂಬೆಗಳ ಕಲಾಪರಂಪರೆಯ ಮೇಲೆ ಯಾವ ರೀತಿ ಪೂರಕವಾಗಿ ಕೆಲಸ ನಿರ್ವಹಿಸಿವೆ ಎಂಬುದನ್ನು ತಿಳಿದುಕೊಳ್ಳುವ ಉದ್ದೇಶವನ್ನು ಹೊಂದಲಾಗಿದೆ.

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ತಯಾರಿಕೆಗೆ ಹಲವಾರು ರೀತಿಯ ಪರಿಕರಗಳು ಬೇಕಾಗುತ್ತವೆ. ಪ್ರಾಚೀನ ಕಾಲದಲ್ಲಿ ಒಂದು ರೀತಿಯ ಪರಿಕರಗಳು ಉಪಯೋಗಿಸಿ ಗೊಂಬೆಗಳನ್ನು ತಯಾರಿಸುತ್ತಿದ್ದರು. ಇಂದಿನ ದಿನಗಳಲ್ಲಿ ಮತ್ತೊಂದು ಬಗೆಯ ಯಂತ್ರೋಪಕರಣಗಳು ಮತ್ತು ಪರಿಕರಗಳು ಬೇಕಾಗುತ್ತವೆ. ಇಲ್ಲಿ ಬಳಕೆಗೊಳ್ಳುವ ಪರಕರಗಳ ವಿವಿಧ ಮರಗಳ ಕಟ್ಟಿಗೆಗಳು ಅವುಗಳನ್ನು ತಾವು ತಯಾರಿಸುವ ಗೊಂಬೆಗಳ ಆಕಾರದ ಅಳತೆಗೆ ಬೇಕಾದ ಆಕಾರಕ್ಕೆ ಕೊರೆಯಲು ಮತ್ತು ಕೆತ್ತಲು ಕಬ್ಬಿಣದ ಉಪಕರಣಗಳು, ನುಣುಪುಗೊಳಿಸುವ ಸಾಧನಗಳು ಪ್ರಾಕೃತಿಕವಾಗಿ ಸಿದ್ಧಗೊಳಿಸಿಕೊಂಡ ಬಣ್ಣಗಳು ಹೀಗೆ ಅನೇಕ ಪರಿಕರಗಳ ಬಗ್ಗೆ ಹೇಳಿ ಪ್ರಸ್ತುತ ದಿನಗಳಲ್ಲಿ ಯಾವ ಪರಿಕರಗಳು ಇವುಗಳ ತಯಾರಿಕೆಗೆ ಬೇಕಾಗುತ್ತವೆ ಎಂಬುದನ್ನು ರಚನೆ ವಿಧಾನದ ಹಿನ್ನಲೆಯಲ್ಲಿ ತಿಳಿಸಲಾಗಿದೆ ಮತ್ತು ರಚನೆ ವಿಧಾನವನ್ನು ಅಲ್ಲಿ ಕೈಗೊಳ್ಳುವ ಕ್ರಮಗಳನ್ನು ಅನುಸರಿಸಿ ಮೂರು ಹಂತಗಳಲ್ಲಿ ವಿಂಗಡಿಸಿಕೊಂಡು ವಿವರಿಸಲಾಗಿದೆ.

ಚನ್ನಪಟ್ಟಣಗಳ ಚಿತ್ತಾರದ ಗೊಂಬೆಗಳ ವಸ್ತು ವೈವಿಧ್ಯತೆಯು ಈ ಪ್ರಕಾರವಾಗಿದೆ. ಇಲ್ಲಿ ದೇವತ ಮೂರ್ತಿಗಳು, ಸ್ತ್ರೀ ಪುರುಷ ಗೊಂಬೆಗಳು, ಪ್ರಾಣಿ ಪಕ್ಷಿಗಳ ಗೊಂಬೆಗಳು, ಮನೆಯಲ್ಲಿ ಉಪಯೋಗಿಸುವ ಅಲಂಕಾರಿಕ ವಸ್ತುಗಳು ಮಕ್ಕಳ ಆಟಿಕೆ ಸಾಮಾನುಗಳು, ಬಳೆಗಳು, ಕಿವಿ

ಓಲೆಗಳು, ನೆಕಲೆಸ್, ಚೂಡಿದಾರ್ ಮೇಲೆ ಬಳಸುವ ಅಲಂಕಾರದ ವಸ್ತುಗಳು, ಮಕ್ಕಳಾಟದ ಜೀಕುವ ಕುದುರೆಗಳು, ಕ್ರಿಸ್ ಮಸ್ ಗಿಡ, ನರ್ತಿಸುವ ಗೊಂಬೆಗಳು ಹೀಗೆ ವಿವಿಧ ರೀತಿಯಲ್ಲಿದ್ದು ಇವುಗಳನ್ನು ವಿಷಯಾನುಸಾರ ವಿಂಗಡಿಸಿಕೊಂಡು ಅಧ್ಯಾಯನಕ್ಕೆ ಒಳಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

ಚನ್ನಪಟ್ಟಣದ ಚಿತ್ತಾರ ಗೊಂಬೆಗಳ ತಯಾರಿಕೆಯಲ್ಲಿ ಈ ಪ್ರದೇಶದ ಹಲವಾರು ಕುಟುಂಬಗಳು ತೊಡಗಿಸಿಕೊಂಡಿವೆ. ಗ್ರಾಮೀಣ ಭಾಗದಲ್ಲಿ ಪಾರಂಪರಿಕವಾಗಿ ಇದೇ ವೃತ್ತಿಯನ್ನು ಮಾಡಿಕೊಂಡು ಬಂದ ಕುಟುಂಬಗಳು ಗೊಂಬೆ ತಯಾರಿಕೆಯಲ್ಲಿ ತೊಡಗಿದ್ದಾರೆ. ನಗರ ಪ್ರದೇಶಕ್ಕೆ ಬಂದಂತೆ ಮುಸ್ಲಿಂರನ್ನೊಳಗೊಂಡ ವಿವಿಧ ಸಮುದಾಯದ ಜನರು ಈ ಗೊಂಬೆಗಳ ರಚನೆ ಕಾರ್ಯದಲ್ಲಿ ನಿರತರಾಗಿದ್ದಾರೆ. ಇವರ ಆರ್ಥಿಕ ಹಿನ್ನೆಲೆ, ಕಲಾ ಪರಂಪರೆ ಗೊಂಬೆಗಳ ತಯಾರಿಕೆಯ ವಿಧಿವಿಧಾನಗಳು, ಪ್ರತಿಯೊಬ್ಬ ಕಲಾವಿದರು ಎಂತಹ ಗೊಂಬೆಗಳನ್ನು ತಯಾರಿಸುವಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ ಎಂಬುದನ್ನು ಹೇಳಲಾಗಿದೆ. ಜೊತೆಗೆ ಕಲವು ಕಲಾವಿದರಿಗೆ ಅವರ ಕಲಾಸೇವೆಗೆ ಬಂದಿರುವ ಮಾನ ಸನ್ಮಾನಗಳು, ಪ್ರಸಿದ್ಧಿ ಗೌರವಗಳು ಮುಂತಾದವುಗಳನ್ನು ಸಹಿತ ಅಧ್ಯಾಯನಕ್ಕೆ ಒಳಪಡಿಸಲಾಗಿದೆ. ಅಲ್ಲದೇ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಮಾರಾಟ ವ್ಯವಸ್ಥೆಯನ್ನು ಪ್ರಾಚೀನ ಕಾಲಕ್ಕೂ ಇಂದಿನ ಕಾಲಕ್ಕೂ ತೌಲನಿಕವಾಗಿ ಬಿಂಬಿಸುವ ಮೂಲಕ ಸದ್ಯದ ಸ್ಥಿತಿಗತಿಯನ್ನು ಕಟ್ಟಿಕೊಡಲಾಗಿದೆ. ಹಾಗೂ ಈ ಗೊಂಬೆಗಳ ಕೈಗಾರಿಕೆಯಲ್ಲಿ ಕಲಾವಿದರ ಆರ್ಥಿಕ ಸ್ಥಿತಿ ಗತಿ ಸುಧಾರಣೆಗೊಳ್ಳಲು ಬೇಕಾದ ಕ್ರಮಗಳನ್ನು ಕುರಿತು ಚರ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಸ್ವರೂಪ :

ಪ್ರಸ್ತುತ ಅಧ್ಯಾಯನವನ್ನು ಆರು ಅಧ್ಯಾಯನವಾಗಿ ವಿಂಗಡಿಸಿಕೊಂಡು ವಿಶ್ಲೇಷಣೆ ಮಾಡಲ್ಪಟ್ಟಿದೆ. ಪ್ರತಿಯೊಂದು ಅಧ್ಯಾಯನದಲ್ಲಿ ಚರ್ಚಿಸುತ್ತ ವಿಷಯಗಳ ಸಂಕ್ಷಿಪ್ತ ರೂಪವು ಕೆಳಗಿನಂತಿವೆ.

- ಮೊದಲನೇಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಗಳನ್ನು ಕುರಿತು ಹೇಳಲಾಗಿದೆ.

- ಎರಡನೇಯ ಅಧ್ಯಾಯದಲ್ಲಿ ಚನ್ನಪಟ್ಟಣ ಸಾಂಸ್ಕೃತಿಕ ಪರಿಸರ ಮತ್ತು ಕಲಾ ಹಿನ್ನೆಲೆಯನ್ನು ಬಿಂಬಿಸಲಾಗಿದೆ.
- ಮೂರನೇಯ ಅಧ್ಯಾಯದಲ್ಲಿ ಚನ್ನಪಟ್ಟಣ ಚಿತ್ತಾರದ ಗೊಂಬೆಗಳ ಪರಿಕರಗಳು ಮತ್ತು ತಯಾರಿಕೆಯ ವಿಧಾನವನ್ನು ಕುರಿತು ಚರ್ಚಿಸಲಾಗಿದೆ.
- ನಾಲ್ಕನೇಯ ಅಧ್ಯಾಯದಲ್ಲಿ ಚನ್ನಪಟ್ಟಣ ಚಿತ್ತಾರದ ಗೊಂಬೆಗಳ ವಸ್ತು ವೈವಿಧ್ಯತೆಗಳನ್ನು ಕುರಿತು ಹೇಳಲಾಗಿದೆ.
- ಐದನೇಯ ಅಧ್ಯಾಯದಲ್ಲಿ ಕಲಾವಿದರ ಪರಿಚಯ ಹಾಗೂ ಕಲಾವಂತಿಕೆಯ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.
- ಆರನೇಯ ಅಧ್ಯಾಯದಲ್ಲಿ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಮಾರಾಟ ವ್ಯವಸ್ಥೆಯ ಬಗ್ಗೆ ಹಾಗೂ ಸ್ಥಿತಿಗತಿಯ ಬಗ್ಗೆ ವಿವರಿಸಲಾಗಿದೆ.
- ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು ಮೇಲಿನ ಎಲ್ಲಾ ಅಧ್ಯಾಯಗಳ ಫಲಿತಾಂಶವನ್ನು ಒಳಗೊಂಡಿದೆ.

ವಿಧಾನ :

ಈ ಅಧ್ಯಯನಕ್ಕೆ ಎರಡು ರೀತಿಯ ಆಕಾರಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕಾರ ಸಾಮಾಗ್ರಿ.

೨. ಅನುಷಂಗಿಕ ಆಕಾರ ಸಾಮಾಗ್ರಿ.

➢ **ಮೂಲ ಆಕಾರ ಸಾಮಾಗ್ರಿ :**

ಸಂಶೋಧನೆಯ ಮೂಲ ಆಕಾರ ಸಾಮಾಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯದ ಮೂಲಕ ಸಂದರ್ಶನ, ಚರ್ಚಿಸಿ ಗೊಂಬೆಗಳ ಛಾಯಾ ಚಿತ್ರಣ ಮಾಡುವುದು ಹಾಗೂ ಕಾರ್ಮಿಕ ಸ್ಥಿತಿ–ಗತಿ ಹಾಗೂ ಮಾರುಕಟ್ಟೆ ವ್ಯವಸ್ಥೆಯನ್ನು ಗೊಂಬೆಗಳಿಗೆ ಬಳಸುವಂತಹ ಮರದ ಬಗ್ಗೆ ಹಾಗೂ ಬಣ್ಣಗಾರಿಕೆಯ ಬಗ್ಗೆ ಕುರಿತು ಸಂದರ್ಶನಗಳಿಂದ ವಿಷಯಗಳನ್ನು ಸಂಗ್ರಹಿಸಿ ಅಧ್ಯಯನವು ವೈಶಿಷ್ಟ್ಯ ಪೂರ್ಣಗೊಳಿಸಲಾಗಿದೆ.

➢ **ಅನುಷಂಗಿಕ ಆಕಾರ ಸಾಮಾಗ್ರಿ :**

ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ, ಅಪ್ರಕಟಿತ ಕೃತಿಗಳು, ನಿಘಂಟುಗಳು, ಗೆಜೆಟೀಯರ್‌ಗಳು, ಪತ್ರಿಕೆಗಳು, ಅಂತರ್‌ಜಾಲ ಮುಖಾಂತರ ಹಾಗೂ ಕುಶಲಕರ್ಮಿಗಳನ್ನು ಸಂದರ್ಶಿಸಿ, ಇವರ ಕುಟುಂಬಗಳ ಸ್ಥಿತಿ–ಗತಿ ಬೊಂಬೆಗಳ ತಯಾರಿಕೆಯಲ್ಲಿ ಉಪಯೋಗಿಸುವ ಮರ, ಬಣ್ಣಗಳ ಬಳಕೆ, ಮಾರುಕಟ್ಟೆಯ ವ್ಯವಸ್ಥೆಯನ್ನು ಚನ್ನಪಟ್ಟಣದ ಸುತ್ತ–ಮುತ್ತ ನಗರಕ್ಕೆ ಹೋಗಿ ಕೆಲವು ಹಿರಿಯ ಕಲಾವಿದರನ್ನು ಭೇಟಿ ಮಾಡಿ ಈ ವೃತ್ತಿಯನ್ನು ಅವಲಂಬಿಸಿರುವ ಕುಶಲ ಕರ್ಮಿ ಕುಟುಂಬ ವರ್ಗದವರೊಂದಿಗೆ ಸಂದರ್ಶಿಸಿ ಚನ್ನಪಟ್ಟಣದ ಗೊಂಬೆಗಳ ಬಗ್ಗೆ ಮಾಹಿತಿಯನ್ನು ಪಡೆದು ಈ ಕಿರು ಪ್ರಬಂಧವನ್ನು ಸಿದ್ದಪಡಿಸಲಾಗಿದೆ.

ಸಂದರ್ಶನ :

ವಿಶೇಷವಾಗಿ ಇಲ್ಲಿ ಕೆಲ ಕುಶಲ ಕಾರ್ಮಿಗಳನ್ನು ಸಂದರ್ಶಿಸಿ ಅವರ ಸಾಂಸ್ಕೃತಿಕ ಪರಿಸರ, ಇವರ ಶಿಕ್ಷಣ, ಶೈಲಿ, ಸುತ್ತಲಿನ ವಾತಾವರಣ ಗೊಂಬೆಗಳ ತಯಾರಿಕೆಯಲ್ಲಿ ಇವರ ಆಸಕ್ತಿ ಅಭಿರುಚಿ ಕಲಾವಿದರ ಸ್ನೇಹಿತರನ್ನು, ಕಲಾ ಗುರುಗಳನ್ನು ಅಲ್ಲಿ ಅವರು ತಯಾರಿಸುವ ಗೊಂಬೆಗಳು, ಕಲಾ ಚಟುವಟಿಕೆಗಳು, ಅಲ್ಲಿಯ ವಾತಾವರಣದಿಂದ ಪಡೆದ ಅನುಭವಗಳು, ಪ್ರೇರಣೆ ನೀಡಿದ ಗುರುಗಳು, ಕರಕುಶಲ ಕರ್ಮಿಗಳ ವೃತ್ತಿ ಜೀವನ ಇಲ್ಲಿಯವರೆಗೂ ಇವರು ರಚಿಸಿದಂತಹ ಹಲವು ರೀತಿಯ ಬೊಂಬೆಗಳು, ಆಟಿಕೆ ಸಾಮಾನುಗಳು, ಶಾಲಾ ಕಲಿಕಾ ಸಾಮಾಗ್ರಿಗಳಲ್ಲದೆ ಅನೇಕ ಮಾದರಿಯ ಸಾಮಾಗ್ರಿಗಳ ರಚನೆ, ಆಟಿಕೆ ಬೊಂಬೆಗಳ ರಚನಾ ತಂತ್ರ, ವಸ್ತು ವಿಷಯ, ವರ್ಣಗಾರಿಕೆ ಹೀಗೆ ಗೊಂಬೆ ತಯಾರಿಕೆಗೆ ಸಂಬಂಧಪಟ್ಟಂತಹ ಹತ್ತು ಹಲವು ವಿಷಯಗಳನ್ನು ಮುಖಾ–ಮುಖಿ ಸಂದರ್ಶಿಸಿ ವೀಕ್ಷಿಸಲಾಯಿತು. ಕಲಾವಿದರ ಸ್ಥಿತಿ–ಗತಿ ಮಾರುಕಟ್ಟೆಯ ವ್ಯವಸ್ಥೆಯ ಬಗ್ಗೆ ನಾನು ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಕಾರ್ಮಿಕ ವರ್ಗದವರಲ್ಲದೆ ಹಿರಿಯರಿಂದಲೂ ಹಾಗೂ ಇವರ ತಂದೆ–ತಾಯಿ ಹಾಗೂ ಅಣ್ಣ ತಮ್ಮಂದಿರೊಂದಿಗೆ ಇವರ ಮೂಲಕ ಸಂದರ್ಶಿಸಿ ಅವರಿಂದಲೂ ಮಾಹಿತಿಯನ್ನು ಸಂಗ್ರಹಿಸಿಕೊಂಡು ಅಧ್ಯಯನಕ್ಕೆ ಬಳಸಲಾಗಿದೆ.

ಛಾಯಚಿತ್ರಣ :

ಕರಕುಶಲ ಕಾರ್ಮಿಗಳ ಫ್ಯಾಕ್ಟರಿಗಳಿಗೆ, ಮನೆಗಳಿಗೆ ಹೋಗಿ ಅವರು ತಯಾರಿಸಿದಂತಹ ಅನೇಕ ಹಲವು ಬಗೆಯ ಬಣ್ಣದ ಗೊಂಬೆಗಳು ಆಟಿಕೆಗಳು, ಶಾಲಾ ಮಕ್ಕಳ ಕಲಿಕೆಯ ಸಾಮಾನುಗಳು ಹತ್ತು ಹಲವು ರೀತಿಯ ತಯಾರಾದ ಬಣ್ಣದ ಪ್ರಾಣಿ- ಪಕ್ಷಿಗಳು ಅನೇಕ ಅಲಂಕಾರಿಕ ಸಾಮಾನುಗಳು, ಬಳೆ, ಸರ, ಹಾಗೂ ಪ್ರಶಸ್ತಿ ಫಲಕಗಳು ಹೀಗೆ ಹತ್ತು ಹಲವು ರೀತಿಯ ವಸ್ತುಗಳನ್ನು ಛಾಯಾಚಿತ್ರಣ ಮಾಡಿಕೊಂಡು ಗೊಂಬೆಗಳ ತಯಾರಿಕೆಯಲ್ಲಿ ಬಳಸುವ ಹಳೆಯದಾದ ಪಟ್ರಿಯ ಬಳಕೆ ಹಾಗೂ ಆಧುನಿಕ ರೀತಿಯ ವಿದ್ಯುತ್‌ಯಂತ್ರದ ಛಾಯಾಚಿತ್ರವನ್ನು ತೆಗೆದುಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಲ್ಲಿ ತಯಾರಾದ ವಸ್ತುಗಳ ಮೂಲಕ ಮಳಿಗೆ(ಎಂಪೋರಿಯಮ್)ಗಳಿಗೂ ಸಹ ಭೇಟಿ ಕೊಟ್ಟು ಛಾಯಚಿತ್ರವನ್ನು ಸಂಗ್ರಹಿಸಿ ಗೊಂಬೆಗಳಿಗೆ ಅಲಂಕಾರಿಕ ನಕ್ಷಾ ಚಿತ್ರಗಳನ್ನು ಬಿಡಿಸುವ ಕೆಲವು ಕಲಾವಿದರನ್ನು ಮತ್ತು ಗೊಂಬೆಗಳ ತಯಾರಿಕೆಗೆ ಬಳಸುವಂತಹ ಪರಿಕರಗಳ ಛಾಯಚಿತ್ರಣವನ್ನು ಮಾಡಿಕೊಳ್ಳಲಾಯಿತು.

ವ್ಯಾಪ್ತಿ :

ಪ್ರಸ್ತುತ ಅಧ್ಯಯನವು ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಕುರಿತಾಗಿದ್ದು ಈ ಅಧ್ಯಯನದ ಹರವು (ಹಂಚಿಕೊಂಡಿರುವುದು) ವ್ಯಾಪಕವಾಗಿದೆ. ಚನ್ನಪಟ್ಟಣದ ಗೊಂಬೆಗಳು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದವರೆಗೂ ವ್ಯಾಪಕ ದೃಷ್ಟಿಯಿಂದ ಪ್ರಸಿದ್ಧಿಯನ್ನು ಹಾಗೂ ಬೇಡಿಕೆಯನ್ನು ಹೆಚ್ಚಿಸಿದೆ. ಈ ಗೊಂಬೆಗಳು ಹಲವಾರು ಕಡೆಗೆ ಸಂಗ್ರಹಗೊಂಡಿದ್ದು, ಅವೆಲ್ಲವುಗಳನ್ನು ಈ ಅಧ್ಯಯನದ ವ್ಯಾಪ್ತಿಗೆ ತಂದುಕೊಳ್ಳಲು ಸಾಧ್ಯವಾಗಿಲ್ಲ ಮತ್ತು ಈ ಗೊಂಬೆಗಳ ರಚನಾ ಪರಂಪರೆಯು ಅತ್ಯಂತ ಪ್ರಾಚೀನ ಕಾಲದಿಂದಲೂ ತೊಡಗಿಸಿಕೊಂಡಿದ್ದಾರೆ. ಈ ಅಧ್ಯಯನಕ್ಕೆ ಸಂಬಂಧ ಪಟ್ಟಂತೆ ಕ್ಷೇತ್ರಕಾರ್ಯಕ್ಕೆ ತೊಡಗಿಸಿಕೊಂಡಾಗ ಇಂದಿನ ಸದ್ಯದ ಸಂದರ್ಭದಲ್ಲಿ ದೊರಕಿದಂತಹ ಮಾಹಿತಿಯನ್ನು ಮಾತ್ರ ಪರಿಗಣಿಸಲಾಗಿದೆ. ಅಲ್ಲದೆ ಅಧ್ಯಯನದ ಸೀಮಿತ ವ್ಯಾಪ್ತಿ ಮತ್ತು ಚೌಕಟ್ಟಿನಿಂದಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಲಭ್ಯವಾದ ಗೊಂಬೆ ಕಲಾಕೃತಿಗಳು ಮತ್ತು ಕಲಾವಿದರನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳುವ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಒಂದು ವ್ಯಾಪ್ತಿಯನ್ನು ಅಳವಡಿಸಿಕೊಳ್ಳಲಾಗಿದೆ.

ಅಧ್ಯಾಯ – ಎರಡು

ಚನ್ನಪಟ್ಟಣದ ಸಾಂಸ್ಕೃತಿಕ ಪರಿಸರ, ಕಲಾ ಹಿನ್ನೆಲೆ

ಅಧ್ಯಾಯ – ಎರಡು

ಚನ್ನಪಟ್ಟಣದ ಸಾಂಸ್ಕೃತಿಕ ಪರಿಸರ, ಕಲಾ ಹಿನ್ನೆಲೆ

ವಿಶ್ವದ ಚಿತ್ರಕಲಾ ಇತಿಹಾಸ ನೋಡುತ್ತಾ ಹೋದಂತೆ, ಅದರ ಬೆಳವಣಿಗೆವ ವಿಕಾಸ, ಕಾಲ ಕಾಲಕ್ಕೆ ಬದಲಾವಣೆಯ ಜೊತೆ ಸಂಸ್ಕೃತಿ, ನಾಗರೀಕತೆಯ ವಿಕಾಸವನ್ನೂ ಮೂಡಿಸುತ್ತಾ ತನ್ನ ಅಸ್ತಿತ್ವನ್ನು ಉಳಿಸಿಕೊಂಡು ಬಂದಿದೆ. 'ಸಂಸ್ಕೃತಿಕ' ಎಂಬ ಶಬ್ದ ಈಚೆಗೆ ಬಹುಮುಖವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಬಂದಿದೆ. ಮಾನವ ಸಮುದಾಯದ ಸಂಪ್ರದಾಯಗಳಿಂದ ಹಿಡಿದು, ವೈಯಕ್ತಿಕವಾದ ಆಚರಣೆಗಳರೆಗೂ ಅದರ ವ್ಯಾಪ್ತಿ ಹಬ್ಬಿದೆ. ಮಾನವನ ಜನಾಂಗಗಳ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಇನ್ನೊಂದು ಪದ 'ನಾಗರೀಕತೆ' ಎಂಬುದು ಆಂಗ್ಲಭಾಷೆಯಲ್ಲಿ ಅವುಗಳನ್ನು "Culture" ಮತ್ತು "Civilization" ಎಂದು ಕರೆಯಲಾಗಿದೆ. ಆಹಾರವನನು ತಿಂದು, ಮನೆಯನ್ನು ಕಟ್ಟಿ, ಬಾಳುವ ಅನ್ನಮಯ ವ್ಯಾಪಾರದಿಂದ ಆತನಿಗೆ ಸಂಪೂರ್ಣ ತೃಪ್ತಿ ಲಭಿಸಲಿಲ್ಲ. ಇವುಗಳಿಂದ ತೃಪ್ತವಾಗದ ಇನ್ನೇನನ್ನೋ ಆತನ ಮನೋಮಯ, ಪ್ರಾಣಮಯ, ಆನಂದಮಯ, ಆಕಾಂಕ್ಷೆಗಳನ್ನು ಬಯಸಿದವು. ತಾನು ತಿನ್ನುವ ತಟ್ಟೆ ಸುಂದರವಾಗಿರಬೇಕು, ವಾಸಿಸುವ ಮನೆ ಅಲಂಕೃತವಾಗಿರಬೇಕು ಎಂಬ ಸೌಂದರ್ಯದ ಆಕಾಂಕ್ಷೆ ಆತನ ನಿತ್ಯಜೀವನದಲ್ಲಿ ಬೆಳೆಯಿತು. ಬಹುರೂಪಧಾರಿಣಿಯಾದ ಪ್ರಕೃತಿಯೂ ಸೌಂದರ್ಯದ ಉಪಾಸನೆ ಸಹಕಾರಿಯಾಯಿತು. ಇದರಿಂದ ಪ್ರಚೋದಿಸುವ ಮನಸ್ಸು ಇನ್ನೂ ಹೆಚ್ಚು ಅಂತರ್ ಮುಖಿಯಾಗಿ ಎಲ್ಲ ಸೌಂದರ್ಯಕ್ಕೂ ಕಾರಣನಾದ ಮೂಲ ಸೌಂದರ್ಯವನ್ನು ಕಾಣುವ ಹಂಬಲದಲ್ಲಿ ತೊಡಗಿತು. ಅದು ನಾನಾ ರೂಪಗಳನ್ನು ತಳೆಯಿತು. ಅವನ ಅಂತರಂಗದ

ಜೀವನವನ್ನು ಬೆಳಸಿತು. 'ನಾಗರಿಕತೆ' ಆತನ ಬಹಿರಂಗ ಜೀವನಕ್ಕೆ ಸಹಕಾರಿಯಾದ ಅಂಶವನ್ನು ನಿರ್ದೇಶಿಸಿದರೆ, ಸಂಸ್ಕೃತಿ ಆತನ ಅಂತರಂಗ ಜೀವನಕ್ಕೆ ಕನ್ನಡಿಯಾಗಿ ಪರಿಣಮಿಸುತ್ತದೆ.

ಕರ್ನಾಟಕದಲ್ಲಿರುವ ವಾಸ್ತುಶಿಲ್ಪ ಮತ್ತು ಚಿತ್ರಕಲೆ ಹಾಗೂ ಪರಂಪರಾಗತವಾಗಿ ಬಂದುಳಿದ ಜಾನಪದ ಕಲೆ ಕಲಾವೈಭವರ ಒಂದು ಪ್ರಧಾನ ಭಾಗವಾಗಿದೆ. ಕರ್ನಾಟಕದಲ್ಲಿ ಪ್ರಾಮುಖ್ಯವಾಗಿ ಕಂಡು ಬರುವ ಕಲಾಕೃತಿಗಳು ಕ್ರಿ.ಶ. ಸುಮಾರು ಎರಡನೇ ಶತಮಾನದಿಂದ ಕ್ರಿ.ಶ. ಏಳನೆಯ ಶತಮಾನದವರೆಗಿನ ದೀರ್ಘಾವಧಿಯಲ್ಲಿ ರಚಿಸಲ್ಪಟ್ಟ ಅಜಂತದ ಭಿತ್ತಿ ಚಿತ್ರಗಳಂತೂ ಕಲಾವಿದ, ಕಲಾವಿಮರ್ಶರ ಹಾಗೂ ರಸಿಕ ಜನರನ್ನೂ ಮುಗ್ಧಗೊಳಿಸಿದೆ.

ಭರತ ಖಂಡದ ಸಂಸ್ಕೃತಿಯ ಚೌಕಟ್ಟಿನಲ್ಲಿ ಸುಂದರವಾಗಿ ಅರಳಿರುವ ಸಂಸ್ಕೃತಿ ಕುಸಮಗಳಲ್ಲಿ ಕರ್ನಾಟಕದ ಸ್ಥಾನ ಬಹಳ ಹಿರಿದು ಮತ್ತು ವಿಶಿಷ್ಟವಾದದು. ಸಾಮ್ರಾಜ್ಯಗಳ ನಿರ್ಮಾಣ ಮತ್ತು ಅವುಗಳ ವ್ಯವಸ್ಥೆಯಲ್ಲಿ ಧಾರ್ಮಿಕ ದರ್ಶನದ ದಿವ್ಯದೃಷ್ಟಿಯಲ್ಲಿ, ಸಾಹಿತ್ಯ ಸೃಷ್ಟಿಯ ರಸಮಾರ್ಗದಲ್ಲಿ ಶಿಲ್ಪ ಸಂಗೀತಾದಿಗಳ ಕಲೋಪಾಸನೆಯಲ್ಲಿ ಒಟ್ಟಾರೆ ಎಲ್ಲಾ ರಂಗಗಳಲ್ಲಿಯೂ ಕರ್ನಾಟಕದ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಸಂಸ್ಕೃತಿಗೆ ತನ್ನದೇ ಉಜ್ವಲ ಪರಂಪರೆಯನ್ನಿತ್ತು ಅದನ್ನು ಬೆಳೆಸಿಕೊಂಡು ಬಂದಿದೆ.

ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯ ಹಾಗೂ ಮೈಸೂರು ಅರಸರು ರಾಜ್ಯ ಭಾರವನ್ನು ಮಾಡಿ ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹವನ್ನು ನೀಡಿ ವಾಸ್ತುಶಿಲ್ಪ ಭಿತ್ತಿ ಚಿತ್ರಗಳನ್ನು ಅವರವರ ಸ್ವತಂತ್ರ ಶೈಲಿಯಿಂದ ನಿರ್ಮಿಸಿದ್ದಾರೆ. ಬಾದಾಮಿ ಪಟ್ಟದಕಲ್ಲು, ಐಹೊಳೆ, ಬೇಲೂರು, ಹಳೇಬೀಡು, ಹಂಪಿ ಇನ್ನೂ ಅನೇಕ ಕಡೆಗಳಲ್ಲಿ ನೋಡಬಹುದಾಗಿದೆ.

ಆಟಿಕೆಗಳು ಮತ್ತು ಗೊಂಬೆಗಳು:

ಮಕ್ಕಳಿಗಾಗಿ ಮಾತ್ರವಲ್ಲ ಪ್ರಜೆಗಾಗಿಯೂ ಅಲಂಕಾರಕ್ಕಾಗಿಯೂ ಇರುತ್ತವೆ. ಇವುಗಳನ್ನು ಬೇಯಿಸಿದ ಆವೆ ಮಣ್ಣು, ಮರ ಮತ್ತು ಲೋಹಾದಿಗಳಿಂದ ತಯಾರಿಸುವುದುಂಟು. ಸಿಂಧೂ ಕಣಿವೆಯ ನಾಗರೀಕತೆಯ ಕಾಲಾವಧಿಯಲ್ಲಿ ಚಿಕ್ಕ ಎತ್ತಿನಗಾಡಿಗಳ ಮಣ್ಣಿನ ನಮೂನೆಗಳಲ್ಲಿ ಹಕ್ಕಿಗಳು, ಮನುಷ್ಯರು, ಪ್ರಾಣಿ ರೂಪಗಳನ್ನು ಮಣ್ಣಿನ ಆಟಿಕೆಗಳಲ್ಲಿ ತಯಾರಿ ಮಾಡಿದ್ದುಂಟು

ಎಂಬುದು ನಮಗೆ ದೊರೆತ ಉತ್ಖನನಗಳಿಂದ ತಿಳಿದು ಬರುತ್ತದೆ. ಹರಪ್ಪದಲ್ಲಿ ಒಂದು ತಾಮ್ರದ ಜಟಕಾ ಬಂಡಿಯು ದೊರೆತಿದೆ. ಕೆಲವು ಕುಬ್ಜಾಕಾರಗಳು, ಆನೆಗಳು, ಮರದಲ್ಲಿ ಕುಳಿತ ಮಂಗಗಳು ಆವೆ ಮಣ್ಣಿನ ಪ್ರತಿಕೃತಿಗಳಲ್ಲಿ ಮೌರ್ಯರ ಕಾಲದಲ್ಲಿ ದೊರೆತಿವೆ. ಇಂತಹ ಆಟಿಕೆಗಳನ್ನು ಲೋಹದ ಎರಕದಲ್ಲಿ ಸಿದ್ಧಗೊಳಿಸುವುದು ಮುಂದೆ ನಡೆಯಿತು. ಭಾರತದಂತಹ ಆಟಿಕೆಗಳು ಕ್ರಿ.ಪೂರ್ವದಲ್ಲೇ ರೋಮ್ ಮುಂತಾದ ವಿದೇಶ ಪ್ರದೇಶಗಳಲ್ಲಿ ಕಾಣಸಿಗುತ್ತವೆ.

ಗೊಂಬೆಗಳನ್ನು ನವರಾತ್ರಿಯಂದು ಪ್ರದರ್ಶನಕ್ಕಿಟ್ಟಿರುವುದುಂಟು ದಿಲ್ಲಿಯಲ್ಲಿ ಮಕ್ಕಳ ಗೊಂಬೆಗಳ ಮ್ಯೂಸಿಯಂ ಇದ್ದು ದೇಶದೆಲ್ಲೆಡೆ ಇಂತಹ ವಸ್ತು ಪ್ರದರ್ಶನ ಕಾಣಬಹುದಾಗಿದೆ. ಗಣೇಶ ಚೌತಿಯ ಸಂದರ್ಭಧಲ್ಲಿ ಗಣಪತಿಯ ಮತ್ತು ದಸರೆಯ ಸಂದರ್ಭದಲ್ಲಿ ದುರ್ಗೆಯ ಪ್ರತಿಮೆಗಳನ್ನು ಮಾಡಿ ಪೂಜಿಸಿ ನೀರಿನಲ್ಲಿ ವಿಸರ್ಜಿಸುವ ಕ್ರಮವಿದೆ.

ಆಟಿಕೆಗಳಲ್ಲಿ ಹಣ್ಣು, ತರಕಾರಿಗಳು, ನರ್ತಕಿಯರು, ಸ್ಥೂಲಕಾಯರು, ಮಂದಿರಗಳು, ದನ–ಕರು, ನವಿಲು ಇತ್ಯಾದಿ ಪ್ರಸಿದ್ಧವಾಗಿವೆ. ಬನಾರಸಿನ ಹಿತ್ತಾಳೆಯ ಆಟಿಕೆಗಳು ಪ್ರಸಿದ್ಧವಿದೆ. ಮರಗಳಲ್ಲಿ ಮಾಡಿದ ಆಟಿಕೆಗಳಿಗೆ ಕಾಶ್ಮೀರ, ಆಂಧ್ರದ ಕೊಂಡಪಳ್ಳಿ ಕರ್ನಾಟಕದ ರಾಮನಗರ ಜಿಲ್ಲೆಯ ಚನ್ನಪಟ್ಟಣ ಎಲ್ಲವೂ ಪ್ರಸಿದ್ಧವೇ. ಗಂಧ ಚಂದನಗಳಲ್ಲೂ ಮರದ ಮಾನವಾಕೃತಿಯ ಆಟಿಕೆಗಳಲ್ಲಿ ವಿಭಿನ್ನವಾದ ದೇಶ–ಜಾತಿ–ಕಾಲಗಳ ವೇಷಗಳೂ ಮೈಕಟ್ಟು ಕೇಶಭೂಷಣ ನಗಾಭರಣ ಉಡುಗೆಗಳೂ ಕಾಣಿಸುತ್ತವೆ. ನಮ್ಮ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯ ಮಾಡಿಕೊಡುತ್ತದೆ. ಸೂರ್ಯ, ಹರಿ, ಹರ ಪಾರ್ವತಿ, ಗಣೇಶ, ಹನುಮಂತ, ರಾಮ, ಕೃಷ್ಣ, ಗೊಮ್ಮಟ ಮೊದಲಾದ ದೇವ ಪುರುಷರ ಪ್ರತಿಕೃತಿಗಳು ಕಲ್ಪನಾ ವಿಲಾಸದಿಂದ ಕಂಗೊಳಿಸುತ್ತವೆ. ಆಟಿಕೆಗಳಲ್ಲಿ ಕೂರ್ಮಗಳು, ಮೊಸಳೆಗಳು, ನಾಗಗಳು, ಕುದುರೆ ಸವಾರರು ಇತ್ಯಾದಿ ಕಾಣಸಿಗುತ್ತವೆ. ಇಂದಿಗೂ ಮೋಟಾರು, ಕಾರು, ಏರೋಪ್ಲೇನ್, ಹಡಗು, ರಾಕೆಟುಗಳನ್ನು ಬಗೆ–ಬಗೆಯ ಪ್ರಾಣಿ, ಪಕ್ಷಿ ಹಾಗೂ ವಿವಿಧ ರೀತಿಯ ಮಾನವಕೃತಿ ಗೊಂಬೆಗಳನ್ನು ಆಟಿಕೆಗಳಲ್ಲಿ ಮಾಡಿ ತೋರಿಸುವುದರಲ್ಲಿ ಚೆನ್ನಪಟ್ಟಣದ ಕುಶಲಕರ್ಮಿಗಳು ಸಿದ್ಧ ಹಸ್ತರಾಗಿದ್ದಾರೆ.

ಚನ್ನಪಟ್ಟಣವು ಮೊದಲು ವ್ಯಾಸತೀರ್ಥರ ಕಾಲದ ಸುಂದರ ತಾಣವಾದ ಸಂದರ್ಭದಲ್ಲಿ ಚಂದಪಟ್ಟಣವೆಂದು ಹೆಸರಾಯಿತೆಂದೂ ತದನಂತರ ಈಗೀನ ಚನ್ನಪಟ್ಟಣ ಎಂದಾಯಿತು ಎಂದು ಸ್ಥಳೀಯ ಮಾಹಿತಿ ಪ್ರಕಾರ ತಿಳಿದುಬಂದಿದೆ.

ಚನ್ನಪಟ್ಟಣ ಬೆಂಗಳೂರು ಗ್ರಾಮಾಂತರ ಜಿಲ್ಲೆ ನೈರುತ್ಯ ಭಾಗದಲ್ಲಿರುವ ತಾಲ್ಲೂಕು ಹಾಗೂ ಅದರ ಮುಖ್ಯ ಸ್ಥಳ ೧೮೭೩ರಲ್ಲಿ ಚನ್ನಪಟ್ಟಣ ಕ್ಲೋಸ್ ಪೇಟೆ ಇದು ಬ್ರಿಟಿಷ ಅಧಿಕಾರಿಯೊಬ್ಬರ ಹೆಸರು (ಈಗಿನ ರಾಮನಗರ ಜಿಲ್ಲೆ) ಉಪ ತಾಲ್ಲೂಕು ಈ ಪ್ರದೇಶದ ಮೇಲ್ಮೆ ಲಕ್ಷಣಗಳನ್ನು ಗಮನದಲ್ಲಿಟ್ಟು, ಈ ತಾಲೂಕನ್ನು ಎರಡು ಭಾಗವಾಗಿ ವಿಂಗಡಿಸಲಾಯಿತು. ಮೊದಲನೆಯದಾಗಿ ಉತ್ತರ ಮತ್ತು ವಾಯವ್ಯ ಭಾಗಗಳಲ್ಲಿ ಹಲವು ಬೆಟ್ಟಗಳ ಸಾಲಿದ್ದು, ಹೆಚ್ಚಾಗಿ ಬೆಂಗಾಡು ಹಾಗೂ ಕುರುಚಲು ಕಾಡುಗಳು ಕಂಡು ಬರುವವು. ಈ ಭಾಗದಲ್ಲಿ ನೀರಾವರಿ ಭೂಮಿಗಳು ಕಂಡು ಬರುವುದಿಲ್ಲ. ಎರಡನೇ ಭಾಗದಲ್ಲಿ ದಕ್ಷಿಣ ಮತ್ತು ನೈಋತ್ಯ ಭಾಗಗಳು ಮೈದಾನ ಪ್ರದೇಶವಾಗಿದ್ದು, ಜನಭರಿತ ಗ್ರಾಮಗಳಿಂದ ಹಾಗೂ ಹಲವು ಮುಖ್ಯ ಕೆರೆಗಳಿಂದ ಕೂಡಿದೆ.

ಕಣ್ವ ಇಲ್ಲಿಯ ಮುಖ್ಯ ನದಿಯಾಗಿದೆ. ಕಣ್ವ ಎಂಬ ಋಷಿಮುನಿ ತಪಸ್ಸನ್ನು ಈ ನದಿಯ ದಂಡೆಯ ಮೇಲೆ ಮಾಡಿದ್ದರಿಂದ **'ಕಣ್ವ'** ಎಂಬ ಹೆಸರು ಬಂದಿದೆ. ರಾಮನಗರ ಜಿಲ್ಲೆಯಿಂದ ಬರುವ ನದಿಯು ಗದ್ದೆ, ತೋಟಗಳಿಗೆ ಸಾಕಷ್ಟು ನೀರನ್ನು ಒದಗಿಸಿ ವಿಶಾಲ ಹಾಗೂ ಫಲವತ್ತಾದ ಕಣಿವೆಯ ಮೂಲಕ ಹರಿದು ಹೋಗುತ್ತದೆ. ಅಬ್ಬೂರಿನ ಹತ್ತಿರ ಇದಕ್ಕೆ ಒಂದು ಕಟ್ಟೆಯನ್ನು ಕಟ್ಟಿದ್ದು, ಇದರಿಂದಾಗಿ ನೀರಾವರಿ ಸೌಕರ್ಯ ಚೆನ್ನಾಗಿದೆ. ಆರ್ಥಿಕ ಬೆಳೆಗಳಾದ ರೇಷ್ಮೆ, ತೆಂಗು, ಬಾಳೆ, ಭತ್ತ, ಕಬ್ಬು, ಮಾವು, ಅಡಿಕೆ ಮತ್ತು ವೀಳ್ಯದೆಲೆ ಇಲ್ಲಿಯ ಪ್ರಮುಖ ಬೆಳೆಗಳಾಗಿವೆ. ಇಲ್ಲಿ ಮಣ್ಣು ಪಶಸ್ತವಾದರಿಂದ ಸಾಕಷ್ಟು ತೆಂಗಿನ ತೋಟಗಳು ಸುಂದರವಾಗಿ ಹಬ್ಬಿವೆ. ಖುಷ್ಕಿ ಜಮೀನಿನಲ್ಲಿ ರಾಗಿ, ಜೋಳ, ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಮೈಸೂರು ರಾಜ್ಯ ಆಳ್ವಿಕೆ ೧೩೯೭ರಲ್ಲಿ ಮೈಸೂರು ಒಡೆಯರ ಆಳ್ವಿಕೆ ಪ್ರಾರಂಭವಾಯಿತು. ಯದುವಂಶದ ಕೊನೆಯವರಾದ ಜೈ ಚಾಮರಾಜ ಒಡೆಯರು ಬೆಂಗಳೂರು ಹಾಗೂ ಮೈಸೂರು ಗಾರಿ ರಸ್ತೆ ನಿರ್ಮಾಣ ಮಾಡಿದರು. ಈಗಲೂ ಸಹ ಅಳಿದು ಉಳಿದ ಈ ಗಾರೆ ರಸ್ತೆಯನ್ನು ಚನ್ನಪಟ್ಟಣದಲ್ಲಿ ನಾವು ನೋಡಬಹುದಾಗಿದೆ. ರಾಮನಗರ ಜಿಲ್ಲೆಯ ಸುತ್ತ-ಮುತ್ತ ಒಟ್ಟು ೧೭೭೧ ಕೆರೆಗಳಿವೆ. ಕಟ್ಟೆಗಳು ೧೦೦ ಹಾಗೂ ಸಣ್ಣ-ಪುಟ್ಟ ಕೆರೆಗಳು ೩೦೦ ಗಳಿವೆ. ಕೆರೆ-ಕಟ್ಟೆಗಳನ್ನು ನಿರ್ಮಿಸಿದರೆ ಪುಣ್ಯದ ಕೆಲಸ ಎಂಬ ಜನಪದರ ನಂಬಿಕೆ. ಚನ್ನಪಟ್ಟಣದ ಜನಸಂಖ್ಯೆ ೭೫೦೦೦ದಿಂದ ೮೦೦೦೦ ಹೊಂದಿದೆ. ಈ ಪಟ್ಟಣವು ದಟ್ಟವಾದ ಜನವಸತಿ ಹೊಂದಿದ್ದು,

ಶುಕ್ರವಾರ ಪೇಟೆ ಇದು ಕೋಟೆ ಪ್ರದೇಶವು ಈಶಾನ್ಯದಲ್ಲಿದ್ದು, ಚನ್ನಪಟ್ಟಣವು ಒಂದು ವ್ಯಾಪಾರ ಕೇಂದ್ರವಾಗಿದೆ. ಮೃದುವಾದ ಹಾಲೆ ಮರದ ಬಣ್ಣದ ಸಾಮಾನುಗಳು ತಯಾರಾಗುವುದು ಇಲ್ಲೇ. ಇಂದಿಗೂ ಚನ್ನಪಟ್ಟಣದ ಗೊಂಬೆಗಳು ಎಂದು ವಿಶ್ವವಿಖ್ಯಾತವಾಗಿದ್ದು, ಅನೇಕ ಹೊರದೇಶಗಳಿಗೆ ರಫ್ತಾಗುತ್ತದೆ. ವೀಣೆ ತಂತಿಗಳು ಹಾಗೂ ಗಾಜಿನ ಬಳೆಗಳು ಹಿಂದೆ ಇಲ್ಲಿ ತಯಾರಾಗುತ್ತಿದ್ದವು. ಪ್ರಸ್ತುತ ಈ ಕೈಗಾರಿಕೆಗಳು ಕ್ಷೀಣಿಸಿವೆ. ಆದರೆ **'ತಂತಿ ಬೀದಿ'** ಎಂಬ ಹೆಸರು ಇಂದಿಗೂ ಪ್ರಸ್ತುತವಿರುವುದನ್ನು ಇಲ್ಲಿ ನಾವು ನೋಡಬಹುದಾಗಿದೆ.

ಚನ್ನಪಟ್ಟಣದ ಉತ್ತರಕ್ಕೆ ೪ ಕಿ.ಮೀ. ದೂರದಲ್ಲಿ ಕಣ್ವ ನದಿಯ ದಡದಲ್ಲಿರುವ ಅಬ್ಬೂರು ಪ್ರಸಿದ್ಧ ಮಧ್ವಮತ ಕೇಂದ್ರಗಳಲ್ಲೊಂದು, ಬ್ರಾಹ್ಮಣ್ಯ ತೀರ್ಥಂ ಬೃಂದಾವನವಿರುವುದು. ಕೃಷ್ಣ ದೇವರಾಯನ ಆಸ್ಥಾನದಲ್ಲಿ ಧಾರ್ಮಿಕ ನಾಯಕರಾಗಿ ಈ ವ್ಯಾಸರಾಯ ತೀರ್ಥ–ಮೂಲ ವ್ಯಾಸರಾಯ ಮಠ ಎನ್ನುವುದಾಗಿದೆ. ಇವರು ಶಿಷ್ಯರಾದ ಕನಕದಾಸ ಪುರಂದರ ದಾಸರಿಗೂ ದೀಕ್ಷೆಯನ್ನು ಸಹ ನೀಡಿದ್ದಾರೆ. ಇವರ ಗುರುಗಳಾದ ಪುರುಷೋತ್ತಮ ತೀರ್ಥರು ಇದರ ಬಳಿಯಲ್ಲಿ ಸಶರೀರವಾಗಿ ಗುಹಾ ಪ್ರವೇಶ ಮಾಡಿದರೆಂಬ ಹೇಳಿಕೆಯುಂಟು. ವ್ಯಾಸರಾಯರೂ ಇಲ್ಲೇ ನೆಲೆಸಿದ್ದರೆಂದು ಶ್ರೀಪಾದರಾಯರು ತಮ್ಮ ಬಾಲ್ಯವನ್ನು ಇಲ್ಲೇ ಕಳೆದರೆಂದೂ ಪ್ರತೀತಿ ಇದೆ. ಅಪ್ರಮೇಯ ದೇವಾಲಯವಿರುವ ದೊಡ್ಡಮಳೂರು ಐತಿಹಾಸಿಕ ಸ್ಥಳ. ಇಲ್ಲಿ ಚೋಳರ ಕಾಲದ ಕೆಲವು ದೇವಾಲಯಗಳಿವೆ. ಚನ್ನಪಟ್ಟಣಕ್ಕೆ ೬ ಕಿ.ಮೀ ದೂರದಲ್ಲಿರುವ ಮಾನಕುಂದ (ಪ್ರಾಚೀನ ಮಾಕುಂದ) ಗಂಗ ವಂಶದ ಭೂವಿಕ್ರಮ ಮತ್ತು ಶಿವಮಾರರ ರಾಜ್ಯಧಾನಿಯಾಗಿತ್ತು. ಜಗದೇವರಾಯನ ತಮ್ಮ ಯುವರಾಜ ಅಂಕುಶರಾಯ ಇಲ್ಲಿ ಸ್ವಲ್ಪ ಕಾಲ ಇದ್ದನಂತೆ ಇದಲ್ಲದೆ ತಮಿಳ್ ನಾಡಿನ ಚೋಳರ ಆಡಳಿತಕ್ಕೂ ಸಹ ಈ ಪ್ರದೇಶ ಒಳಪಟ್ಟಿದೆ ಚನ್ನಪಟ್ಟಣದ ದಕ್ಷಿಣಕ್ಕೆ ೮ ಕಿ.ಮೀ. ದೂರದಲ್ಲಿರುವ ಹೊಂಗನೂರು ಗಂಗರ ಕಾಲದಲ್ಲಿ ಚಿಕ್ಕಗಂಗವಾಡಿಯು ಮುಖ್ಯ ಪಟ್ಟಣವೆನಿಸಿತ್ತು. ಅನಂತರ ದಿನಗಳಲ್ಲಿ ಹೊಯ್ಸಳ ರಾಜ್ಯಪಾಲನ ವಾಸ ಸ್ಥಾನವೆನಿಸಿತ್ತು. ಚನ್ನಪಟ್ಟಣದಿಂದ ೬ ಕಿ.ಮೀ ದೂರದಲ್ಲಿ ಸಣ್ಣ ನದಿಯು ಎಡದಂಡೆಯಲ್ಲಿರುವ ಕೂಡಲೂರು ಚೋಳರ ಆಳ್ವಿಕೆಯಲ್ಲಿತ್ತು ರಾಜರಾಜ ಚತುರ್ವೇದಿ ಮಂಗಲಂ ಎಂಬುವವರು ಪ್ರಸಿದ್ಧಿನಾಗಿದ್ದನ್ನು ಇಲ್ಲಿ ಚೋಳರ ಕಾಲದ ಅವಶೇಷಗಳಿವೆ. ಮುಕುಂದ, ಮಾಳೂರು ಬಳಿ ಶಾಸನಗಳು ಸಹ ಸಿಕ್ಕಿವೆ. ಹಾಗೂ ಕೆಲವು ಸುಂದರ ಕಂಚಿನ ವಿಗ್ರಹಗಳು ದೊರಕಿವೆ. ಈ ಗ್ರಾಮವನ್ನು ಹೈದರ ಅಲಿ ಫಕೀರನೊಬ್ಬನಿಗೆ ಇನಾಂ ಕೊಟ್ಟನೆಂಬುದು ಇತಿಹಾಸದಿಂದ ತಿಳಿದು ಬರುತ್ತದೆ. ಕಣ್ವ ಜಲಾಶಯ

ಒಂದು ಸುಂದರವಾದ ಪ್ರೇಕ್ಷಣೀಯ ಸ್ಥಳವಾಗಿದೆ. ನಾಗವಾರ, ಮೈಲನಾಯಕನಹಳ್ಳಿ, ಮಂಗಳವಾರಪೇಟೆ, ಅಕ್ಕೂರು, ಇಗ್ಗಲೂರು, ಸೋಗಲ, ಚಕ್ಕರೆ ಮತ್ತು ಬೇವೂರು ಈ ತಾಲೂಕಿನ ಇತರ ಕೆಲವು ಮುಖ್ಯ ಗ್ರಾಮಗಳು.

ಚನ್ನಪಟ್ಟಣದಲ್ಲಿ ಕೋಟೆ ಆಂಜನೇಯಸ್ವಾಮಿ ಮತ್ತು ವರದರಾಜ ಸ್ವಾಮೀ, ಪೇಟೆ ನೀಲಕಂಠೇಶ್ವರಸ್ವಾಮಿ ಮತ್ತು ಗವಿರಂಗಸ್ವಾಮಿ ಬೆಟ್ಟ, ಸವನಪ್ಪವ ಗುಡ್ಡಗಳಲ್ಲದೆ, ಮಸೀದಿಗಳು, ಚರ್ಚುಗಳು ಇವೆ. ಟಿಪ್ಪು ಸುಲ್ತಾನನು ರೇಷ್ಮೆ ಮೊಟ್ಟೆ ತರಿಸಿ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿ ಸ್ಪನ್ ರೇಷ್ಮೆ ನೂಲು ತೆಗೆದು ರೇಷ್ಮೆ ಬಟ್ಟೆ ತಯಾರಿಸು ದೊಡ್ಡ ಕೈಗಾರಿಕೆಯಾಗಿ ಅಭಿವೃದ್ಧಿ ಹೊಂದಿದೆ. ಇಲ್ಲಿಯ ಪೋಲಿಸ್ ತರಬೇತಿ ಕೇಂದ್ರವು ಕರ್ನಾಟಕದಲ್ಲಿ ಪ್ರಸಿಧ್ಧಿಯನ್ನು ಪಡೆದಿದೆ. ಕನ್ನಡ ಬಾಲಬೋದೆ ಮೊದಲ್ಗೊಂಡು ಅನೇಕ ಕೃತಿಗಳನ್ನು ರಚಿಸಿದ ಚ.ವಾಸುದೇವಯ್ಯನವರೂ, ಕಥೆ, ನಾಟಕ ವಿಮರ್ಶೆ ಮುಂತಾದ ನಾನಾ ಸಾಹಿತ್ಯ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಆಧುನಿಕ ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದ ಸಿ.ಕೆ.ವೆಂಕಟರಾಮಯ್ಯನವರು ಚನ್ನಪಟ್ಟಣದವರು. ಮೈಸೂರು ವಿಶ್ವವಿದ್ಯಾಲಯ ಕುಲಪತಿಗಳಾಗಿದ್ದ ಸಾಹಿತಿ ದೇ.ಜವರೆಗೌಡರು ಚನ್ನಪಟ್ಟಣ ತಾಲೂಕಿನ ಚಕ್ಕರೆ ಗ್ರಾಮದವರು ಸಾಕಷ್ಟು ಹೆಸರನ್ನು ಪಡೆದಂತಹ ಚಲನ ಚಿತ್ರ 'ಬಂಗಾರದ ಮನುಷ್ಯ' ಚಿತ್ರದ ನಿರ್ದೇಶಕ ಡಿ.ಕೆ.ರಾಮರಾವ್, ಸಿ.ಎನ್.ಜಯಲಕ್ಷ್ಮೀದೇವಿ. ಕಾದಂಬರಿಗಾರ್ತಿ, ಸಿ.ಕೆ.ವೆಂಕಟರಾಮಯ್ಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಅಬ್ಬೂರಿನವರು ದಿವಂಗತ ಪ್ರೊ. ಕೆ. ವೆಂಕಟಗಿರಿಗೌಡರು ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞರು, ಸ್ವತಂತ್ರ ಹೋರಾಟಗಾರರಾದ ವಿಧಾನ ಸಭಾ ಅಧ್ಯಕ್ಷರು ದಿವಂಗತ ತಿಟ್ಟ ಮಾರನಹಳ್ಳಿ ವೆಂಕಟಪ್ಪನವರು. ಇದಲ್ಲದೆ ಕನ್ನಡ ಚಲನ ಚಿತ್ರರಂಗ ಹಿರಿಯ ನಟಿಯಾದ ಬಿ.ಸರೋಜ ದೇವಿ, ಶ್ರೀನಾಥ್, ಸಿ.ಆರ್.ಸಿಂಹ ಸಹ ಚನ್ನಪಟ್ಟಣದವರು. ಇಲ್ಲಿ ಇನ್ನೊಂದು ವಿಶೇಷವೆನೆಂದರೆ ಭಾರತದಲ್ಲಿ ಎಲ್ಲಿಯೂ ಕಂಡು ಬಂದಂತೆ ದೇವಾಲಯದ ನವನೀತ ಕೃಷ್ಣ ದೇವಾಲಯವನ್ನು ನೋಡಬಹುದಾಗಿದೆ. ಗಾಂಧಿಜಿ ಮೈಸೂರುನಿಂದ ಬೆಂಗಳೂರಿಗೆ ಹೋಗಬೇಕಾದ ಚನ್ನಪಟ್ಟಣದಲ್ಲಿ ವಿಶ್ರಾಂತಿಗೆಂದು ಉಳಿದುಕೊಂಡಿದ್ದರು. ಆ ಸ್ಥಳದಲ್ಲಿ ಗಾಂಧೀ ಭವನವನ್ನು ನಿರ್ಮಿಸಿದ್ದಾರೆ. ಇದರ ಶಂಕು ಸ್ಥಾಪನೆ ೨೯.೦೪.೧೯೫೪ ಕಟ್ಟಡ ನಿರ್ಮಾಣವಾಗಿತ್ತು. ನಂತರ ೩೦.೧೧.೧೯೫೪ರಲ್ಲಿ ಇದನ್ನು ಜೈ ಚಾಮರಾಜ ಒಡೆಯರುವವರು ಸಾರ್ವಜನಿಕ ಗ್ರಂಥಾಲಯವನ್ನಾಗಿ ಮಾಡಿದ್ದಾರೆ.

ಚನ್ನಪಟ್ಟಣದಲ್ಲಿ ಇತಿಹಾಸ ಕಾಲಕ್ಕೆ ಸಂಬಂಧಿಸಿದಂತೆ ಕೋಟೆಯಲ್ಲಿರು ವರದರಾಜ ದೇವಾಲಯ ಪ್ರಾಚೀನವಾದುದು. ೧೫ನೇಯ ಶತಮಾನದಲ್ಲಿ ರಚಿತವಾದ ಈ ದೇವಾಲಯದಲ್ಲಿ, ದೇವಾಲಯದ ಗರ್ಭಗೃಹ ಸುಕನಾಸಿ, ನವರಂಗ, ಪಾತಾಳಾಂಕಣಗಳಿವೆ. ಸುತ್ತಲು ಪ್ರಾಕಾರ ಶಿಥಿಲವಾಗಿದೆ. ಪೇಟೆ ಭಾಗದಲ್ಲಿರುವ ಲಕ್ಷ್ಮೀನಾರಾಯಣ ಮತ್ತು ನೀಲಕಂಠೇಶ್ವರ ದೇವಾಲಯಗಳು ಸುಮಾರು ಇದೇ ಕಾಲದವು. ನೀಲಕಂಠೇಶ್ವರ ದೇವಾಲಯ ಗರ್ಭಗೃಹ, ಸುಕನಾಸಿ, ದೊಡ್ಡ ನವರಂಗ ಇತ್ಯಾದಿಗಳನ್ನು ಸುತ್ತು ಪ್ರಾಕಾರ ಮತ್ತು ಪಾತಾಳಾಂಕಣವನ್ನು ಒಳಗೊಂಡಿರುವ ದೊಡ್ಡ ಕಟ್ಟಡವಿದಾಗಿದೆ. ಇಲ್ಲಿನ ತಿಮ್ಮಪ್ಪರಾಜ ಅರಸನ ಅರಮನೆ ೧೯ನೇಯ ಶತಮಾನದ ಆಧಿಭಾಗದಲ್ಲಿ ಚನ್ನಪಟ್ಟಣದಲ್ಲಿ ಫೌಜುದಾರರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮೈದುನ ತಿಮ್ಮಪ್ಪರಾಜರು ಕಟ್ಟಿಸಿದ್ದು. ದೊಡ್ಡ ಹಜಾರಗಳು ಉತ್ತಮವಾದ ಮರದ ದ್ವಾರ, ಸುಂದರವಾದ ಕೆತ್ತನೆಗಳು, ನೀರಿನ ಕಾರಂಜಿಗಳು, ಸುಂದರ ವರ್ಣ ಚಿತ್ರಗಳು ಇವುಗಳಿಂದ ಅಲಂಕೃತವಾಗಿದ್ದವು ಎಂಬ ವಿಷಯ ಇತಿಹಾಸ ಪುಸ್ತಕದಲ್ಲಿ ದಾಖಲೆಗಳಿಂದ ಮಾತ್ರ ತಿಳಿದು ಕೊಳ್ಳಬಹುದಾಗಿದೆ. ಈಗ ಕಟ್ಟಡ ಸಂಪೂರ್ಣವಾಗಿ ನಶಿಸಿಹೋಗಿದೆ.

೩ನೇ ಪೆನಾಗೊಂಡದ ಯುದ್ಧದ ಅಸಾಧಾರಣ ಶೌರ್ಯ ಪ್ರದರ್ಶಿಸಿದ ಜಗದೇವರಾಯನ ಸೇವೆಯನ್ನು ಮೆಚ್ಚಿ ವಿಜಯನಗರದ ಶ್ರೀರಂಗರಾಯ ಇವನಿಗೆ 'ಘನಗಿರಿಕ್ಷಕ' ಎಂಬ ಬಿರುದನ್ನು ಹಾಗೂ ಚನ್ನಪಟ್ಟನದ ಸೀಮೆಯನ್ನು ಕೊಟ್ಟನಂತೆ. ಅಲ್ಲದೇ ತನ್ನ ಮಗಳನ್ನೂ ಕೊಟ್ಟು ವಿವಾಹ ಮಾಡಿದನಂತೆ. ಜಗದೇವರಾಯ ಚನ್ನಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ೧೫೮೦ರಲ್ಲಿ ಇಲ್ಲಿ ಕೋಟೆಯನ್ನು ಕಟ್ಟಿಸಿದ ಇತನ ಮರಣಾನಂತರ, ಮಗ ಕುಮಾರ ಜಗದೇವರಾಯನು ಆಳಿದನು. ೧೬೩೦ರಲ್ಲಿ ಮೈಸೂರಿನ ಚಾಮರಾಜ ಒಡೆಯರು ಬಹುಕಾಲ ಮುತ್ತಿಗೆ ಹಾಕಿ ಕೋಟೆಯನ್ನು ವಶಪಡಿಸಿಕೊಂಡನು. ೧೭೫೯ರಲ್ಲಿ ಗೋಪಾಲ ಹರಿಯ ಮುಖಂಡತ್ವದಲ್ಲಿದ್ದ ಮರಾಠಾ ಸೇನೆ ಸುಮಾರು ಅರ್ಧ ಭಾಗವನ್ನು ನಾಶಮಾಡಿತು. ಹೈದರ ಅಲಿ ಮುತ್ತಿಗೆಯನ್ನು ನಿವಾರಿಸಿ ದಿವಾನ್ ಪೂರ್ಣಯ್ಯ ಕೋಟೆಯನ್ನು ಮತ್ತೆ ದುರಸ್ತಿಗೊಳಿಸಿದನು ಎಂಬುದು ತಿಳಿದು ಬರುತ್ತದೆ.

ಚನ್ನಪಟ್ಟಣದ ಉತ್ತರಕ್ಕೆ ಬೆಂಗಳೂರು ರಸ್ತೆಯ ಪಕ್ಕದಲ್ಲಿ ಗೋರಿಗಳಿವೆ. ಹೈದರ್‌ಅಲಿಯ ಧರ್ಮಗುರುವಾಗಿದ್ದ ಅಕ್ಬರ ಷಾ ಖಾದ್ರಿಯದು. ಇದರ ಸಮೀಪದಲ್ಲಿ ಬಂಧುಗಳ ಗೋರಿಗಳು

ಸುಮಾರು ೨೦ ಅಡಿ ಚೌಕದ ದೊಡ್ಡ ಕೋಣೆಯಲ್ಲಿವೆ. ಎರಡು ಜಗಲೆಯ ಮೇಲೆ ಮಧ್ಯದಲ್ಲಿ ಈ ಕೋಣೆ ಇದ್ದು ಅದರ ಸುತ್ತಲೂ ತೆರೆದ ವರಾಂಡ ಇದೆ. ವರಾಂಡದ ಪಶ್ಚಿಮದಡೆ ಇರುವ ಕಂಬಗಳು ದೇವಾಲಯದ ಕಂಬಂಗಳಂತೆ ಕಾಣುತ್ತವೆ. ಈ ಕೋಣೆಯ ಸುತ್ತ ಇರುವ ಗೋಡೆಗಳು ದಪ್ಪವಾಗಿದ್ದು, ಮೂಲೆಗಳಲ್ಲಿ ಚಿಕ್ಕ ಕೋಣೆಗಳು, ಗುಮ್ಮಟವಿದ್ದು, ಇದರ ತುದಿಯಲ್ಲಿ ಕಳಸವಿದೆ. ಈ ಕಟ್ಟದ ಸುತ್ತಲೂ ಚಿಕ್ಕ-ಚಿಕ್ಕ ಗೋರಿಗಳಿವೆ. ಪಶ್ಚಿಮಕ್ಕೆ ಒಂದು ಮಸೀದಿ ಇರುವುದು ಕಂಡು ಬರುತ್ತದೆ. ಇನ್ನೊಂದು ಗೋರಿ ಟಿಪ್ಪು ಸುಲ್ತಾನನ ಕಾಲದಲ್ಲಿ ಬೆಂಗಳೂರಿನ ಫೌಜುದಾರನಾಗಿದ್ದ ಸೈಯದ್ ಇಬ್ರಾಹೀಮನದು (ಈತ ಟಿಪ್ಪುವಿನ ಬಂಧನಕ್ಕೆ ಒಳಗಾಗಿದ್ದ ಇಂಗ್ಲೀಷರ ಬಗ್ಗೆ ಅನುಕಂಪ ತೋರಿದವನೆಂದು ಖ್ಯಾತನಾಗಿದ್ದಾನೆ.) ಇದರಲ್ಲಿಯೂ ಎತ್ತರದ ಜಗತ್ತಿನ ಮೇಲೆ ಮಧ್ಯದಲ್ಲಿ ಒಂದು ಚಿಕ್ಕ ಗೋರಿ ಕೋಟೆ ಮತ್ತು ಅದರ ಸುತ್ತಲೂ ಹೊರ ಅಂಚಿನ ಕಂಬಗಳ ಮೇಲೆ ಎತ್ತಿದ ತೆರೆದ ವರಾಂಡವಿದೆ. ಕೋಟೆಯು ಮೇಲೆ ಕಳಸ ತುದಿಯುಳ್ಳ ಗುಮ್ಮಟವಿದೆ. ಈ ದರ್ಗಾಗಳ ಸಮೀಪದಲ್ಲಿ ರಸ್ತೆಯಂಚಿನಲ್ಲಿ ಉಮ್ಮರ್‌ಖಾನ್ ಎಂಬುವವನ ಗೋರಿ ಇದೆ. ಇದರಲ್ಲಿ ಒಂದು ನೆಲಮಾಳಿಗೆ ಇರುವುದೆಂದೂ ಅದರಲ್ಲಿ ಉಮ್ಮರ್‌ಖಾನ್ ಶವಪೆಟ್ಟಿಗೆ ಇರುವ ಒಂದು ತೊಟ್ಟಿಲನ್ನು ತೂಗುಹಾಕಲಾಗಿದೆ. ಎಂದೂ ಪ್ರತೀತಿ ಇದೆ.

ಚನ್ನಪಟ್ಟಣದ ಪಾಳೇಗಾರರು:

ಸುಮಾರು ೧೬-೧೭ ನೆಯ ಶತಮಾನಗಳಲ್ಲಿ ಪೆನುಗೊಂಡೆಯ ವಿಜಯನಗರದ ಸಂತತಿಯವರು ಸಾಮಂತರಾಗಿ ಚನ್ನಪಟ್ಟಣದಿಂದ ಆಳಿದ ಪಾಳೇಗಾರರು. ಮೂಲತಃ ಇವರು ಬಾರಾಮಹಲ್ ಪ್ರದೇಶಕ್ಕೆ ಸೇರಿದವರು. ತೆಲಗು ಬಣಜಿಗ ಕುಲದವರು. ಈ ವಂಶದ ಮೂಲ ಪುರುಷ ರಂಗೋಜಿರಾಯ ಆದರೆ ಈ ವಂಶದ ಯಶಸ್ಸು ಪ್ರಭಾವವನ್ನು ಹೆಚ್ಚಿಸಲು ಕಾರಣನಾದವನು ಒಂದನೇಯ ಜಗದೇವರಾಯನು.

ಪೆನುಗೊಂಡೆಯಲ್ಲಿ ಆಳುತ್ತಿದ್ದ ಅರವೀಡು ಮನೆತನದ ತಿಮ್ಮರಾಜನ ಮಾವ ಈ ಒಂದನೇಯ ಜಗದೇವರಾಯನು. ೧೫೭೭ರಲ್ಲಿ ಬಿಜಾಪುರ ಮತ್ತು ಅಹಮದ್ ನಗರದ ಸುಲ್ತಾನರು ಪೆನುಗೊಂಡೆಯ ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿರಲು ತಿಮ್ಮರಾಜ ತನ್ನ ರಾಜಧಾನಿಯನ್ನು ಚಂದ್ರಗಿರಿಗೆ ವರ್ಗಾಯಿಸಿದ್ದ. ಇದರಿಂದಾಗಿ ಆಕ್ರಮಣವನ್ನು ಎದುರಿಸುವ ಜವಾಬ್ದಾರಿ ಜಗದೇವರಾಯನ ಪಾಲಿಗೆ ಬಂತು. ಹುಟ್ಟು ಸಾಹಸಿಯೂ ವೀರ ಯೋಧನೂ ಆದ

ಜಗದೇವರಯ, ಬಿಜಾಪುರದ ಸೇನೆಯನ್ನು ಹಿಮ್ಮೆಟ್ಟಿಸಿ ಪೆನುಗೊಂಡೆಯನ್ನು ವಿಪತ್ತಿನಿಂದ ಪಾರುಮಾಡಿದ. ಇದರಿಂದ ಸಂತೋಷಗೊಂಡ ತಿಮ್ಮರಾಜ ಒಂಬತ್ತು ಲಕ್ಷ ಪಗೋಡಗಳ ವರಮಾನವುಳ್ಳ ದೊಡ್ಡ ಜಿಲ್ಲೆಯೊಂದನ್ನು ಜಗದೇವರಾಯನಿಗೆ ಕೊಟ್ಟ. ಈ ಪ್ರದೇಶ ಬಾರಾಮಹಲಿನಿಂದ ಪಶ್ಚಿಮ ಘಟ್ಟಗಳವರೆಗೆ ವ್ಯಾಪಿಸಿದ್ದು, ಮುಳಬಾಗಿಲು, ಪಿರಿಯಾಪಟ್ಟಣ, ಕನಕನಹಳ್ಳಿ ಮತ್ತು ಬೂದಿಹಾಳು ಇವು ಸೇರಿದ್ದವು. ಹೊಸದಾಗಿ ಪಡೆದ ಈ ದೊಡ್ಡ ರಾಜ್ಯದ ವ್ಯವಸ್ಥೆ ಅನುಕೂಲವಾಗಲು ಈ ಪ್ರದೇಶದ ಕೇಂದ್ರದಲ್ಲಿದ್ದ ಚನ್ನಪಟ್ಟಣವನ್ನು ಪಾಳೇಗಾರರು ರಾಜವಂಶಸ್ಥರು ಆಳ್ವಿಕೆ ನಡೆಸುತ್ತಿದ್ದರು.

ಕ್ರಿ.ಶ. ೪ನೇ ಶತಮಾನದಲ್ಲಿ ಗಂಗವಂಶಸ್ಥ ರಾಜರು ರಾಮನಗರ ಭಾಗದಲ್ಲಿ ಆಳ್ವಿಕೆ ನಡೆಸಿದರು. ಚನ್ನಪಟ್ಟಣದ ಬಳಿಯ ಮಾಕುಂದ (ಮುಕುಂದ) ಅವರ ರಾಜಧಾನಿಯಾಗಿದ್ದು. ರಾಷ್ಟ್ರಕೂಟರು, ಹೊಯ್ಸಳರು, ಚೋಳರೂ, ಕೆಂಪೇಗೌಡರ ವಂಶಸ್ಥರು, ಟಿಪ್ಪು ಸುಲ್ತಾನ್ ಮೈಸೂರು ಅರಸರು ಹಾಗೂ ಬ್ರಿಟಿಷರ ಆಡಳಿತಕ್ಕೆ ಈ ಭಾಗ ಒಳಪಟ್ಟಿತ್ತು. ಜಿಲ್ಲೆಯ ಕೆಲವೆಡೆ ಇತಿಹಾಸ ಪೂರ್ವಕಾಲದ ಪಳಿಯುಳಿಕೆಗಳು ಲಭ್ಯವಾಗಿವೆ.

ಕ್ಲೋಸ್ ಪೇಟೆ:

ಪುರಾಣ ಕಾಲದಲ್ಲಿ ರಾಮನಗರಕ್ಕೆ ರಾಮಗಿರಿ, ಶಿವರಾಮಗಿರಿ ಎಂಬ ಹೆಸರಿತ್ತು. ೧೭೯೯–೧೮೦೦ರಲ್ಲಿ 'ಕ್ಲೋಸ್ ಪೇಟೆ' ಎಂಬ ಹೆಸರಿನಲ್ಲಿ ನವನಗರವಾಗಿ ರಾಮನಗರ ನಿರ್ಮಾಣವಾಯಿತು. ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರು ಸಂಸ್ಥಾನದ ಮೊದಲ ಆಂಗ್ಲ ರೆಸಿಡೆಂಟ್ ಕರ್ನಲ್ ಕ್ಲೋಸ್ ಅವರ ಮೇಲಿದ್ದ ವಿಶ್ವಾಸಕ್ಕಾಗಿ ೧೭೯೯–೧೮೦೦ರಲ್ಲಿ ಕ್ಲೋಸ್ ಪೇಟೆಯನ್ನು ಸ್ಥಾಪಿಸಿದರು. ೧೮೮೨ರ ವರೆಗೆ ಮೈಸೂರು ಸಂಸ್ಥಾನದ ಉಪ ವಿಭಾಗ ಕೇಂದ್ರವಾಗಿದ್ದ 'ಕ್ಲೋಸ್ ಪೇಟೆ' ೧೯೨೮ರಲ್ಲಿ ತಾಲೂಕು ಕೇಂದ್ರವಾಯಿತು. ಸ್ವಾತಂತ್ರ್ಯ ನಂತರ ೧೯೪೯ರಲ್ಲಿ ಕ್ಲೋಸ್ ಪೇಟೆಗೆ 'ರಾಮನಗರ' ಎಂದು ನಾಮಕರಣ ಮಾಡಲಾಯಿತು ಎಂದು ಇತಿಹಾಸದಲ್ಲಿ ದಾಖಲಾಗಿದೆ. ರಾಮನಗರ ಪ್ರಸ್ತುತ ಜಿಲ್ಲೆಯಾಗಿ, ಈ ಜಿಲ್ಲೆಯ ಚನ್ನಪಟ್ಟಣ ತಾಲೂಕು ಕೇಂದ್ರವಾಗಿದೆ.

ಉತ್ತರ ಕರ್ನಾಟಕದಲ್ಲಿ ಬಹುಮನಿ ರಾಜ್ಯ ಪತನವಾದ ನಂತರ ಅಲ್ಲಿನ ಮುಸ್ಲಿಮರು ರಾಮ ನಗರದತ್ತ ವಲಸೆ ಬಂದರು. ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಈ

ಭಾಗದಲ್ಲಿ ಮುಸ್ಲಿಮರು ಪ್ರವರ್ಧಮಾನಕ್ಕೆ ಬಂದರು. ಹಿಂದೂಗಳು ಹಾಗೂ ಮುಸ್ಲಿಮ ಸಮುದಾಯಗಳ ನಡುವೆ ಸೌಹಾರ್ದ ಬಹಳ ಹಿಂದಿನಿಂದಲೂ ಬೆಳೆದು ಬಂದಿದೆ.

ಚನ್ನಪಟ್ಟಣವು ರಾಮನಗರ ಜಿಲ್ಲೆಯ ಒಂದು ತಾಲೂಕು ಕೇಂದ್ರ. ಇದು ಭಾರತದ ಭೂಪಟದ ನಕ್ಷೆಯಲ್ಲಿ ಪುಟ್ಟದಾಗಿ ತೋರುವ ಈ ಪಟ್ಟಣವು ಬಣ್ಣ-ಬಣ್ಣದ ಆಟಿಕೆ ಮತ್ತು ಗೊಂಬೆಗಳ ತಯಾರಿಕೆಯಲ್ಲಿ ನಮ್ಮ ದೇಶವಲ್ಲದೆ ವಿದೇಶದಲ್ಲೂ ಪ್ರಸಿದ್ಧಿಯನ್ನು ಪಡೆದಿದೆ. ಇಲ್ಲಿ ಗೊಂಬೆಗಳ ತಯಾರಿಕೆಯಲ್ಲಿ ಬೃಹತ್ ಉದ್ಯಮವಾಗಿ ಬೆಳೆದಿದ್ದು ಸಾವಿರಾರು ಜನರಿಗೆ ಜೀವನೋಪಾಯವನ್ನು ಕಲ್ಪಿಸಿದೆ. ಚನ್ನಪಟ್ಟಣದ ಆಟಿಕೆ ಮತ್ತು ಗೊಂಬೆಗಳು ತಯಾರಿಸುವಲ್ಲಿ ಚನ್ನಪಟ್ಟಣ ಗೊಂಬೆಗಗಳ ಇತಿಹಾಸವು ೨೦೦ ವರ್ಷಗಳಿಂದ ವಂಶಪಾರಂಪರೆಯಾಗಿ ನಡೆದು ಬಂದಿರುವ ಇತಿಹಾಸವಿದೆ. 'ಮೈಸೂರಿನ ಹುಲಿ' ಟಿಪ್ಪು ಸುಲ್ತಾನ್ ೧೭೫೯-೯೯ ಪರ್ಶಿಯಾದಿಂದ ಕುಶಲಕರ್ಮಿಗಳನ್ನು ಕರೆಯಿಸಿ ಬಣ್ಣ-ಬಣ್ಣದ ಆಟಿಕೆ ಮತ್ತು ಗೊಂಬೆಗಳನ್ನು ನಿರ್ಮಿಸುವ ಕಲೆ ತೋರಿಸಿಕೊಟ್ಟಿದ್ದರಿಂದ ಈ ಕಲೆ ಇಂದು ದೇಶ ವಿದೇಶಗಳಲ್ಲಿ ತನ್ನ ಚೆಲುವಿನ ಕಂಪು ಬೀರುತ್ತಿದೆ ಎನ್ನುವುದು ಕೆಲವು ಮುಸ್ಲಿಂ ಕುಶಲಕರ್ಮಿಗಳ ಅಭಿಪ್ರಾಯವಾಗಿದೆ.

ತನ್ನದೆ ಆದ ವಿಶಿಷ್ಟ ಮೆರಗನ್ನು ಹೊಂದಿದೆ. ಈ ಚನ್ನಪಟ್ಟಣ ಚಿತ್ತಾರದ ಗೊಂಬೆಗಳ' ಪ್ರಸಿದ್ಧಿಯಿಂದ **'ಗೊಂಬೆಗಳ ಊರು'** ಅಥವಾ 'Karnataka Toys Town' (ಆಟಿಕೆ ನಗರ) ಎಂದು ಕರೆಯಲಾಗುತ್ತದೆ.

ಸುಮಾರು ೧೮ನೇ ಶತಮಾನದಲ್ಲಿ ಪರ್ಷಿಯಾ ಕಲಾಕಾರರನ್ನು ಕರೆತಂದು ಈ ಮೂಲಕ ಭಾರತದಲ್ಲಿ ಕಲೆಯನ್ನು ಪರಿಚಯಿಸಿದ "ಮೈಸೂರಿನ ಹುಲಿ" ಟಿಪ್ಪು ಸುಲ್ತಾನ ಮೈಸೂರು ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದ. ಆಡಳಿತ ಕಾಲದಲ್ಲಿ ಸ್ಥಳೀಯ ಕರಕುಶಲ ಕರ್ಮಿಗಳಿಗೆ ಪರ್ಷಿಯಾ ದೇಶದ ಕುಶಲಕರ್ಮಿಗಳನ್ನು ಕರೆಸಿದ್ದನು. ಕುಶಲಕರ್ಮಿಗಳು ಸುಮಾರು ಎರಡು ಶತಮಾನದ ಗೊಂಬೆಗಳ ತಯಾರಿಕೆಯಲ್ಲಿ ತೊಡಗಿದರು. ಈ ಆಟಿಕೆ ಮತ್ತು ಗೊಂಬೆಗಳ ತಯಾರಿಕೆಗೆ ಮೊದಲಿಗೆ 'ಬಾಸ್ಮಿಯಾ' ಎಂಬ ವ್ಯಕ್ತಿ ಹಾಲೆ ಮರದಿಂದ ಗೊಂಬೆ ತಯಾರಿಸುವುದನ್ನು ಕಂಡುಹಿಡಿದು ಈ ಕಲೆಗಾರಿಕೆಯನ್ನು ಹಾಗೂ ಅಟದ ಸಾಮಾನು ಮತ್ತು ವಿವಿಧ ರೀತಿಯ ಗೊಂಬೆಗಳನನ್ನು, ಬುಗರಿ, ಊದುಬತ್ತಿ ಸ್ಟಾಂಡ್, ಇತ್ಯಾದಿಗಳನ್ನು ಕೈಯಿಂದಲೇ ಕೆಲವು ಉಪಕರಣಗಳಾದ ಬಾಚಿ, ಕತ್ತಿ ಮತ್ತು ಕುಡುಗೋಲು ಇಂತಹವುಗಳನ್ನು ಉಪಯೋಗಿಸಿ

ಗೊಂಬೆ ತಯಾರಿಕೆಯಲ್ಲಿ ತಮ್ಮನ್ನು ತಾವು ತೊಡಗಿಕೊಂಡಿದ್ದರು. ಇದೇ ರೀತಿಯಾಗಿ ಮುಂದುವರೆದು ಕಲೆಯನ್ನು ಸುಮಾರು ಸ್ನೇಹಿತರು, ಸಂಬಂಧಿಗಳು ಹಾಗೂ ಆಸಕ್ತಿ ಹೊಂದಿದವರಿಗೆ ಈ ಕಲೆಯನ್ನು ಕಲಿಸಿಕೊಟ್ಟರು ಎಂಬ ಮಾಹಿತಿ ದೊರೆಯುತ್ತದೆ.

ಇನ್ನೊಂದು ಮಾಹಿತಿಯ ಪ್ರಕಾರ ಬಾಸ್ಮಿಯಾ ಕಲಾವಿದ ಮೊದಲೇ ಈ ಕಲೆಯಲು 'ಚಿತ್ತಾರ'ದವರ ಮನೆಯವರು ಸಣ್ಣಮಕ್ಕಳು ಆಟ-ಆಡುವಂತಹ ಕಿಚನ್ ಸೇಟ್, ಅಗರಬತ್ತಿ ಸ್ಟ್ಯಾಂಡ್, ಬುಗರಿ, ಕೋಲಾಟದ ಕೋಲು ಹಾಗೂ ಲೇಖನಿ(ಕಟ್ಟಿಗೆಯಿಂದ ತಯಾರಿಸಿದ ಈ ಕಡ್ಡಿಯ ಒಂದು ಭಾಗಕ್ಕೆ ಇಂಕಿನ ಮುಳ್ಳನ್ನು ಜೋಡಿಸಿ ಲೇಖನಿಯ ರೂಪದಲ್ಲಿ ಉಪಯೋಗಿಸುವಂತಹ ವಸ್ತು)ಗಳನ್ನು ಹಾಲೆ ಮರದಿಂದ ಈ ಮನೆತನದ ಕಲಾವಿದರು ಕಲಾಕೃತಿಯನ್ನು ತಯಾರಿಸುತ್ತಿದ್ದರು. (ಹಿರಿಯ ಕಲಾವಿದ ಕೆಂಚಪ್ಪನವರ ಮಾಹಿತಿಯೊಂದಿಗೆ) ತಿಳಿದು ಬರುತ್ತದೆ. ಮೈಸೂರು ಮಹಾರಾಜರು ಈ ಕಲಾವಿದರಿಗೆ ಮರದಿಂದ ತಯಾರಿಸಿದಂತಹ ಇಂತಹ ಕೆಲಸವನ್ನು ಗುರುತಿಸಿ ಇವರಿಗೆ ಸನ್ಮಾನ ಮಾಡಿದ್ದರು ಎಂಬುದು ಸಹ ಕ್ಷೇತ್ರಕಾರ್ಯ ಸಂದರ್ಭದಲ್ಲಿ ತಿಳಿದು ಬರುತ್ತದೆ. ನಂತರ ದಿನಗಳಲ್ಲಿ ಚನ್ನಪಟ್ಟಣದಿಂದಲೇ ಅನೇಕ ದಸರಾ ಅಲಂಕಾರಿಕ ಗೊಂಬೆಗಳನ್ನು ತಯಾರಿಸಿಕೊಡಲು ಹೇಳಿದರು. ನಂತರದ ದಿನಗಳಲ್ಲಿ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳು ಅರಮನೆಗೆ ಸೇರಿದವು ಎನ್ನುತ್ತಾರೆ. ನಂತರ ದಿನಗಳಲ್ಲಿ ಮೈಸೂರು ದಿವಾನರು ೧೯೦೨ರಲ್ಲಿ ಚನ್ನಪಟ್ಟಣದ ಕುಶಲಕರ್ಮಿ ತರಬೇತಿ ಸಂಸ್ಥೆ ಆರಂಭಿಸಿದರು. ಇಲ್ಲಿ ಅರಗು, ಬಣ್ಣ, ನೈಸರ್ಗಿಕ ಬಣ್ಣ ತೆಂಗಿನ ನಾರಿನ ಬೊಂಬೆಗಳ ತಯಾರಿಸುವುದನ್ನು ಕುರಿತು ತರಬೇತಿ ನೀಡಲಾಗುತ್ತಿತ್ತು. ಕಾಲ ಕಳೆದಂತೆ ಬೊಂಬೆಗಳ ತಯಾರಿಕೆಯಲ್ಲಿ ಬದಲಾವಣೆಗೊಂಡಿತು.

ಚನ್ನಪಟ್ಟಣ ಸುತ್ತ-ಮುತ್ತ ಮನೆಗಳನ್ನು ಗಮನಿಸಿದರೆ ಪ್ರತಿ ಮನೆಗೂ ಮುಖ ಮಂಟಪ ಹೊಂದಿದ ಮನೆಗಳನ್ನು ನಾವು ನೋಡಬಹುದಾಗಿದೆ. ಏಕೆಂದರೆ ಕುಟುಂಬದವರೆಲ್ಲ ಸೇರಿ ಮುಖ ಮಂಟಪದಲ್ಲಿ ಗೊಂಬೆಗಳನ್ನು ತಯಾರಿಸುವ ಕೆಲಸಕ್ಕೆ ಹಾಲೆ ಮರವನ್ನು ಜೋಡಿಸಲು ಹಾಗೂ ಗೊಂಬೆಗಳಿಗೆ ಕೆಲವು ನಕ್ಷಾಚಿತ್ರಗಳನ್ನು ಬಿಡಿಸಲು ಈ ಜಾಗವನ್ನು ಉಪಯೋಗಿಸುತ್ತಾರೆ. ಇದರಿಂದ ಪ್ರತಿ ಮನೆಯಲ್ಲೂ ಗೊಂಬೆ ತಯಾರಿಕೆಯ ಕೆಲಸವು ಅವಲಂಬಿಸಿರುವುದು ತಿಳಿದು ಬರುತ್ತದೆ.

೧೯೭೦ ದಶಕದಲ್ಲಿ ಚನ್ನಪಟ್ಟಣಕ್ಕೆ ಬಂದಿದ್ದ ಅಮೇರಿಕದ ಜಾಕಿ ಚಂದಾನಿ ಎಂಬ ಮಹಿಳೆ ಇಲ್ಲಿನ ಕರಕುಶಲ ಕಲೆಗೆ ಮಾರುಹೋದರು. ನಂತರ ಅವರು ಇಲ್ಲಿಯೇ ನೆಲೆಸಿ ಕಲೆಯ ಬೆಳವಣಿಗೆಗೆ ಸಹರಿಕರಿಸಿದರು. ಆಧುನಿಕ ರೀತಿಯ ಅಲಂಕಾರಿಕ ಮತ್ತು ಗೃಹಲಂಕಾರ ವಸ್ತುಗಳ ಮಾದರಿ ತಯಾರಿಸಿ ಅವುಗಳ ಬಗ್ಗೆ ಕಲಾವಿದರಿಗೆ ಮಾರ್ಗದರ್ಶನ ನೀಡಿದರು. ಬ್ರಿಟನ್ ರಾಣಿ ಡಯಾನ್ ಮತ್ತು ದೊರೆ ಚಾರ್ಲ್ಸ್ ವಿವಾಹಕ್ಕೆ 'ಪೌಡರ್ ಬಾಕ್ಸ್'ಗಳು ಚನ್ನಪಟ್ಟಣದಿಂದ ರವಾನೆಯಾಗಿದ್ದವು. ಶ್ರೀಲಂಕಾ ಪ್ರಧಾನಿಯಾಗಿದ್ದ ಭಂಡಾರ ನಾಯಕೆ ಅವರು ಚನ್ನಪಟ್ಟಣಕ್ಕೆ ಭೇಟಿ ನಿಡಿ ಕೆಲ ಬೊಂಬೆಗಳನ್ನು ಖರೀದಿಸಿಕೊಂಡು ಹೋಗಿದ್ದರು. (ಮಾಹಿತಿ ಪ್ರಜಾವಾಣಿ ಪತ್ರಿಕೆ ೦೧.೦೮.೨೦೧೨) ಇಂಗ್ಲೇಂಡ್ ರಾಣಿಯ ಅರಮನೆ ಶ್ರೀಲಂಕಾದ ಪ್ರಧಾನಿ ನಿವಾಸ ಸೇರಿದಂತೆ ದೇಶ–ವಿದೇಶಗಳ ಗಣ್ಯರ ಮನೆಗಳಲ್ಲಿ ಈ ಬೊಂಬೆಗಳ ಅಲಂಕಾರದ ಸ್ಥಾನ ಪಡೆದಿವೆ. ಇದು ಇಲ್ಲಿನ ಕುಶಲಕರ್ಮಿಗಳ ಕಲೆಗೆ ದೊರೆತ ಗೌರವರ ಸ್ಥಾನವಾಗಿದೆ.

ಚನ್ನಪಟ್ಟಣದ ಗೊಂಬೆಗಳನ್ನು ಎರಡು ವರ್ಷದ ಹಿಂದೆ ಅಮೇರಿಕ ಅಧ್ಯಕ್ಷ ಬರಾಕ್ ಒಬಾಮಾ ಕುಟುಂಬ ಸಮೇತ ಭಾರತ ಪ್ರವಾಸ ಕೈಗೊಂಡಿದ್ದಾಗ, ಆಗ ಅವರ ಪತ್ನಿ ಮಿಶೆಲ್ ಒಬಾಮಾ ನವದೆಹಲಿಯ ವಸ್ತು ಪ್ರದರ್ಶನದಲ್ಲಿ ಚನ್ನಪಟ್ಟಣದ ಈ ಗೊಂಬೆಗಳನ್ನು ಕಂಡು ಕಣ್ಣರಳಿಸಿದ್ದರು. ಗೊಂಬೆಗಳ ವಿಶಿಷ್ಟ ಆಕಾರ ಬಣ್ಣಗಳಿಗೆ ಮಾರು ಹೋಗಿದ್ದರು. ಕೆಲವನ್ನು ಖರೀದಿಸಿ ಕೊಂಡೊಯ್ದರು ಇತ್ತೀಚಿಗೆ ಬ್ರಿಟನ್‌ನ ವಿದ್ಯಾರ್ಥಿಗಳು ಇಲ್ಲಿ ತಯಾರಾಗುವ ಮರದ ಬಳೆ, ಕಿವಿಯೊಲೆ ಬಗ್ಗೆ ಅಧ್ಯಯನ ನಡೆಸಿ ಹೋಗಿದ್ದಾರೆ.

ಚನ್ನಪಟ್ಟಣದ ವಿಶಿಷ್ಟವಾದ ಗೊಂಬೆ ತಯಾರಿಕೆಯ ಉದ್ಯಮ, ಪೈಪೋಟಿ, ಸ್ಪರ್ಧೆ, ಸಮಸ್ಯೆಗಳ ನಡುವೆಯೂ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿದೆ. ಗೊಂಬೆ ಉದ್ಯಮದ ವರಮಾನವೂ ಹೆಚ್ಚುತ್ತಿದೆ. ಅಮೇರಿಕಾ, ಜಪಾನ್, ಫ್ರಾನ್ಸ್, ಇಂಗ್ಲೇಂಡ್, ಮಲೇಷಿಯಾ ಸೇರಿದಂತೆ ಹಲವೆಡೆಗೆ ಇಲ್ಲಿನ ಗೊಂಬೆ ಮತ್ತು ಅಲಂಕಾರಿಕ ವಸ್ತುಗಳು ರಫ್ತಾಗುತ್ತಿವೆ. ಈ ಗೊಂಬೆಗಳ ಮೇಲೆ ಅಪಾರ ಒಲವು ಬೆಳಸಿಕೊಂಡ ಚನ್ನಪಟ್ಟಣದ ವಿಶಾಲ ಪ್ರದೇಶವಿರುವ ಈ ಊರು ಶ್ರೀಮಂತವಾಗಿ ಇತಿಹಾಸದಲ್ಲಿಯೇ ಸಮೃದ್ಧವಾಗಿದೆ.

೨೦೧೫ ಜನವರಿ ೨೬ರಂದು ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಅಂಗವಾಗಿ ಚನ್ನಪಟ್ಟಣ ಬೊಂಬೆಗಳ ಸ್ತಬ್ಧ ಚಿತ್ರವು ಪ್ರದರ್ಶನಗೊಂಡು ಚನ್ನಪಟ್ಟಣ ಗೊಂಬೆಗಳ ಕೀರ್ತಿಯನ್ನು ಹೆಚ್ಚಿಸಿದೆ.

ಅಧ್ಯಾಯ – ಮೂರು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಪರಿಕರಗಳು ಮತ್ತು ತಯಾರಿಕೆ

ಅಧ್ಯಾಯ – ಮೂರು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಪರಿಕರಗಳು ಮತ್ತು ತಯಾರಿಕೆ

ನಮಗೆ ರಸಾನುಭವನ್ನು ಉಂಟು ಮಾಡಬಹುದಾದ ಯಾವುದೇ ರಚನೆ ಅಥವಾ ಸೃಷ್ಟಿಯನ್ನು ಕಲೆ ಎಂದು ಗುರುತಿಸುತ್ತೇವೆ. ಕಲೆಗಳಲ್ಲಿ ಒಟ್ಟು ಅರವತ್ನಾಲ್ಕು ಕಲೆಗಳು. ಮಾನವನ ಜೀವನ ಒಂದಿಲ್ಲೊಂದು ರೂಪದಲ್ಲಿ ಪ್ರಕಟಗೊಳ್ಳುವ ಕಲೆಗಳೇ ಆಗಿವೆ. ಈ ಕಲೆಗಳಲ್ಲಿ ಕೆಲವನ್ನು ಕುಶಲ ಕಲೆಗಳ ಹಾಗೂ ಉಪಯುಕ್ತ ಕಲೆಗಳು ಎಂದು ಬೇರ್ಪಡಿಸುವುದುಂಟು. ಆನಂದ ಮೂಲವಾದ ಕಲೆಗಳನ್ನು ಲಲಿತಕಲೆ (Fine Art) ಎಂದು. ಉಪಯುಕ್ತತೆ ಮೂಲವಾದುದನ್ನು ಕುಶಲ ಕಲೆ (Craft) ಎಂದು ಕರೆಯಲಾಗುತ್ತದೆ.

ಕರಕುಶಲ ಕಲೆಗಳ ಉಗಮವನ್ನು ಕುರಿತು ನಿರ್ಧಾರವಾಗಿ ಹೇಳುವುದು ಕಷ್ಟಸಾಧ್ಯವಾದ ಸಂಗತಿಯೆಂದು ವಿದ್ವಾಂಸರ ವಾದವಾಗಿದೆ. ಕರಕುಶಲ ಕಲೆಗಳ ಉಗಮ ದೈವಿ ಮೂಲವಾದುದು ಎನ್ನುತ್ತಾರೆ. ಕಲೆಗಳ ತ್ರಿಮೂರ್ತಿಗಳಿಂದ ಋಷಿಗಳಿಗೆ ಋಷಿಗಳಿಂದ ದೇವ ಮಾನವನ ಶಿಲ್ಪಗಳಿಗೆ ಬೋಧಿತವಾಗಿ ಲೋಕದ ತುಂಬಾ ವಿಕಸನ ಹೊಂದಿದವು. ಈ ಹಿನ್ನೆಲೆಯಲ್ಲಿ ವೇದ–ಶಾಸ್ತ್ರ ಪುರಾಣಗಳು ವಿಶ್ವಕರ್ಮನನ್ನು ಎಲ್ಲಾ ಸೃಜನಶೀಲತೆಯ ವ್ಯಕ್ತಿ ರೂಪವಾಗಿ ಕಂಡಿವೆ. ಆದ್ದರಿಂದ ವಿಶ್ವಕರ್ಮನನ್ನು ವಿಶ್ವ ರಚನಾಕಾರ, ದೇವಶಿಲ್ಪಿ, ಸರ್ವಕಲೆ ಕರಕುಶಲ ಕಲಾಗುರು, ಸ್ಥಾಪತ್ಯ ಕಲಾ ಪ್ರವೀಣ ಅಲ್ಲದೇ ದೇವತೆಗಳವಾಸ ಆಯುಧ–ಆಭರಣ ನಿರ್ಮಾಣಕಾರ, ಸಕಲ ಕಲಾ ಅಧಿಷ್ಠಾನ ದೇವತೆ ಎಂದು ಪುರಾಣಗಳಲ್ಲಿ ಕಾಣಲಾಗಿದೆ.

'ಮಾನಸಾರ' ಎಂಬ ಶಿಲ್ಪಶಾಸ್ತ್ರ ಗ್ರಂಥದಲ್ಲಿ ಬ್ರಹ್ಮನ ಚತುರ್ಮುಖಗಳಿಂದ ದೇವಶಿಲ್ಪಿಗಳಾದ ವಿಶ್ವಕರ್ಮ, ಮಯ, ತ್ವಷ್ಟ ಮತ್ತು ಮನುಗಳು ಹುಟ್ಟಿದರು. ಇವರೇ ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವಾರ್ಧಕಿ ಮತ್ತು ಮತ್ತು ತಕ್ಷಕರೆಂಬ ಕುಶಲಿಗರಾದರೆಂದು ಹೇಳುತ್ತದೆ. ಹೀಗೆ ಪುರಾವೆಗಳು ಕಲೆ ಕುಶಲ ಕಲೆಗಳ ಉಗಮ ಮತ್ತು ವಿಕಾಸದ ಪರಂಪರೆಯನ್ನು ವಿವರಿಸುತ್ತವೆ.

ಕರಕುಶಲ ಕಲೆ ಎಂದರೆ ಕೈ ಹಾಗೂ ಕೈ ಬೆರಳುಗಳನ್ನು (ಅಗತ್ಯವಿದ್ದಲ್ಲಿ ಬೇರೆ ಅಂಗಾಂಗಳನ್ನು) ಬಳಸಿಕೊಂಡು ಸೂಕ್ತ ಕಚ್ಚಾ ಸಾಮಗ್ರಿಗೆ ಉಪಯುಕ್ತ ಹಾಗೂ ಆಕರ್ಷಕ ರೂಪವನ್ನು ಕೊಡುವುದೇ ಆಗಿದೆ. ಇವು ಮಾನವ ಬುದ್ಧಿ, ಭಾವ ಮತ್ತು ದೇಹಗಳ ಸಹಸ್ಪಂದನದ ಪರಿಣಾಮವಾಗಿ ಬೆಳೆದು ಬಂದಿರುತ್ತದೆ. ಇಂಥ ಸ್ಪಂದನದ ಹಿಂದೆ ಜೀವನಾಗತ್ಯದ ಒತ್ತಡ ಇರುತ್ತದೆಂಬುದನ್ನು ಮರೆಯಲಾಗದು. ಒಂದರ್ಥದಲ್ಲಿ ಕರಕುಶಲ ಕಲೆಗಳ ಉಗಮವು ಅಗತ್ಯಗಳ ಅನ್ವೇಷಣೆಯಾದರೆ, ಅವುಗಳ ವಿಕಾಸವು ಮಾನವನ ಬುದ್ಧಿ ಸೃಜನಶೀಲತೆಗಳು ಪರಿಸರ ಪರಿಕರಗಳು ಬಳಸಿಕೊಂಡು ಬೆಳೆದ ರೀತಿ ಎನ್ನಬಹುದಾಗಿದೆ.

ಕರಕುಶಲ ಕಲೆಗಳ ವಿಕಾಸಕ್ಕೂ ಮಾನವನ ಬುದ್ಧಿ ಭಾವಗಳ ಬೆಳವಣಿಗೆಗೂ ನೇರ ಸಂಬಂಧಿವಿದೆ. ಒಬ್ಬಂಟಿಯಾಗಿ ಜೀವಿಸುತ್ತಿದ್ದ ಮಾನವನ ಕುಟುಂಬ ಜೀವಿಯಾದ. ಕುಟುಂಬ ಜೀವಿಯಾಗಿದ್ದವನು, ಗುಂಪು ಜೀವಿಯಾದ. ಗುಂಪು ಜೀವಿಯಾಗಿದ್ದವನು, ಗ್ರಾಮಜೀವಿಯಾಗಿ ಆಗಿಯೇ ಪಟ್ಟಣ–ನಗರ ಜೀವಿಯಾದನು. ಈ ಎಲ್ಲ ಹಂತಗಳಲ್ಲಿಯೂ ಭಾವಜೀವಿಯಾಗಿ, ಬುದ್ಧಿಜೀವಿಯಾಗಿ ಹಲವಾರು ಸಂಬಂಧ–ಸಂಪರ್ಕಗಳನ್ನು ವಿಸ್ತರಿಸಿಕೊಂಡು ತನ್ನ ಬದುಕುವಿಕೆ, ಇರುವಿಕೆಯಲ್ಲಿ ಪರಿವರ್ತನೆಗಳನ್ನು ಕಾಣುತ್ತಾ ಇಂದಿನವರೆಗೂ ಬೆಳೆಯುತ್ತಲೆ ಬಂದಿದ್ದಾನೆ. ಅಲೆಮಾರಿಯಾಗಿದ್ದವನು ಅರೆ ಅಲೆಮಾರಿಯಾಗಿ, ನಂತರ ಒತ್ತಟ್ಟಿಗೆ ನೆಲೆಗೊಂಡು ಸುಖ ಸೌಕರ್ಯನ್ನೊಳಗೊಂಡು ಜೀವಿಸತೊಡಗಿದ್ದಾನೆ. ಪ್ರತಿ ಹಂತದ ಸಂಧರ್ಭ ಸನ್ನಿವೇಶಗಳೆಲ್ಲವೂ ಅವನಿಂದ ರೂಪುಗೊಳ್ಳುತ್ತಾ ಬಂದ ಕಲೆ–ಕುಶಲಕಲೆಗಳ ಮೇಲೆ ದಟ್ಟವಾದ ಪರಿಣಾಮ ಪ್ರಭಾವ ಬೀರಿವೆ. ಕರಕುಶಲ ಕಲೆಗಳು ಕೂಡ ಮಾನವನ ಈ ಬೆಳವಣಿಗೆಯೊಂದಿಗೆ ವಿಕಾಸಗೊಳ್ಳುತ್ತಾ ಬಂದಿವೆ.

ಈ ಹಿನ್ನೆಲೆಯಲ್ಲಿ ಮಣ್ಣು, ಕಲ್ಲು, ಕಟ್ಟಿಗೆ, ತೊಗಟೆ, ಚರ್ಮ ಮತ್ತು ಲೋಹಗಳನನ್ನು ಪ್ರಾಚೀನ ಹಾಗೂ ಪ್ರಮುಖ ಮೂಲ ಸಾಮಾಗ್ರಿಗಳೆಂದು ತಿಳಿಯಬಹುದು. ಕುಂಬಾರ, ಬಡಿಗ,

ವಸನಕಾರ ಹಾಗೂ ಕಮ್ಮರ ಇವರನ್ನು ಪ್ರಾಚೀನ ಹಾಗೂ ಪ್ರಮುಖ ಕುಶಲ ಕಲೆಗಾರರು ಎಂದು ಗುರುತಿಸಬಹುದಾಗಿದೆ.

ನಿಸರ್ಗಜನ್ಯ ಹಾಗೂ ಸಹಜವಾಗಿ ದೊರಕಿದ ಇನ್ನೊಂದು ಕರಕುಶಲ ಕಲೆಗಳ ಕಲೆಯು ಮೂಲ ಸಾಮಗ್ರಿ ಮರ ಅಥವಾ ಕಟ್ಟಿಗೆಯಾಗಿದೆ. ಈ ಸಾಮಾಗ್ರಿಯನ್ನು ಬಳಸಿಕೊಂಡು ಮಾಡುತ್ತಾ ಬಂದ ಕರಕುಶಲ ಕಲೆಗಾರಿಕೆಯನ್ನು ಕಾಷ್ಠಶಿಲ್ಪ ಎನ್ನುತ್ತಾರೆ.

ಪ್ರಾಗೈತಿಹಾಸ ಕಾಲದಿಂದಲೂ ಕಟ್ಟಿಗೆಯ ವಸ್ತು, ಸಾಧನ ಸಾಮಗ್ರಿಗಳನ್ನು ಬಳಸಿಕೊಂಡಿರಬಹುದಾದರೂ ಇದು ಹೆಚ್ಚು ಕಾಲ ಬಾಳಿಕೆ ಬಾರದ ಸಾಮಗ್ರಿಯಾದುದರಿಂದ ಪಳೆಯುಳಿಕೆಗಳು ದೊರಕಿಲ್ಲ. ಕಟ್ಟಿಗೆ ಅಥವಾ ಮರದ ಕೆತ್ತನೆಯ ಕಲೆಗಾರಿಕೆ ತುಂಬ ಪ್ರಾಚೀನವಾದುದಾಗಿದೆ. ಈ ಸಾಮಗ್ರಿಯನ್ನು ಬಳಸಿಕೊಂಡು ವಿವಿಧ ವಸ್ತುಗಳನ್ನು ರಚಿಸುವ ಕುಶಲಿಯನ್ನು ಬಡಿಗ, ಬಡಿಗಾರ, ಕಾಷ್ಠಶಿಲ್ಪ ಹಾಗೂ ಸೂತ್ರಧಾರ ಎಂದು ಗುರುತಿಸಿದ್ದುಂಟು. ಇಂಥ ಪ್ರಾಚೀನ ಕಲಾ ಕುಶಲ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದ ಅನೇಕ ಪಟ್ಟಣ ಊರುಗಳನ್ನು ಭಾರತದಾದ್ಯಂತ ಇಂದಿಗೂ ಕಾಣಬಹುದು. ಲಖನೌ, ಕಾಶ್ಮೀರ, ಗುಜರಾತ್, ಸೌರಾಷ್ಟ್ರ ಹಾಗೂ ನಾಸಿಕಗಳಲಿ ಕಟ್ಟಿಗೆಯಿಂದ ತಯಾರಿಸಲಾದ ಬಾಲಿ, ಪಿಂಜರಾ (ಕಿಟಕಿ)ಗಳು, ತೊಲೆ, ಬೋಧಿಗೆ, ಕಿಟಕಿಗಳು ತುಂಬಾ ಪ್ರಖ್ಯಾತವಾದವುಗಳು, ಹಾಗೆಯೇ ಪಂಜಾಬ, ಉತ್ತರಪ್ರದೇಶ, ಅಲಿಘರ್, ಅಜಮಘರ್, ಬರೇಲಿ, ಮಥುರಾ, ಬುಲಂದ ಶಹರ, ಗಾಜಿಪುರ ಮುಂತಾದೆಡೆಗಳಲ್ಲಿನ ಪೀಠೋಪಕರಣಗಳ ಅಲಂಕಾರಿಕ ಕೆತ್ತನೆಗಳು ವಿಖ್ಯಾತವಾದವುಗಳು. ಅದರಂತೆ ಕರ್ನಾಟಕದ ಕೊಡಗು, ಮೈಸೂರು ಸಾಗರ, ಕುಮಟಾ, ಶಿವಮೊಗ್ಗ, ಉತ್ತರ ಕನ್ನಡ, ತುಮಕೂರು, ತಿರುಚನಾಪಳ್ಳಿ, ಮುಂತಾದೆಡೆಗಳಲ್ಲಿ ಶ್ರೀಗಂಧ ಕಟ್ಟಿಗೆಯ ತಯಾರಿಕೆಗಳು ಲೋಕ ವಿಖ್ಯಾತವಾದವುಗಳು.

ಹಗುರವಾದ ಕಟ್ಟಿಗೆಯನ್ನು ಬಳಸಿಕೊಂಡು ಮಾಡಿದ ಪ್ರಾಣಿ-ಪಕ್ಷಿ ಹಣ್ಣು-ಹಂಪಲುಗಳು, ಆಸನ, ಅಲಂಕಾರಿಕ ಫಲಕಗಳು ಈ ಕಲೆಯ ಇನ್ನೊಂದು ಮುಖವನ್ನು ಪರಿಚಯಿಸುತ್ತವೆ. ಇಂಥ ಕಟ್ಟಿಗೆಯ ವಸ್ತುಗಳ ಮೇಲೆ ದೇಶಿವರ್ಣಗಳನ್ನು ಹಚ್ಚಿ ಇದರ ಮೇಲೆ ವಾರ್ನಿಶ್ ಲೇಪನ್ನಾಗಲಿ, ಅರಗು ಲೇಪನ್ನಾಗಲಿ ಮಾಡಿಸಿದ್ಧಪಡಿಸಿದ ಕರಕುಶಲ ವಸ್ತುಗಳು ಕಾಷ್ಠ ಕಲೆಯ ವೈವಿಧ್ಯ ವಿಸ್ತರಣೆಗಳು.

ಭಾರತದ ಪ್ರತಿ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಆಯಾ ಪರಿಮಿತಿಯಲ್ಲಿ ನಿತ್ಯ ಬಳಕೆಯ ಪೆಟ್ಟಿಗೆ, ತೊಟ್ಟಿಲು ಮುಂತಾದ ಗೃಹೋಪಯೋಗಿ ವಸ್ತುಗಳು, ಅಲಂಕಾರಿಕ ಪೀಠೋಪಕರಣಗಳು ಬಾಗಿಲು ಚೌಕಟ್ಟುಗಳು, ಆರಾಧನೆಯ ಹಾಗೂ ಅಲಂಕಾರಿಕ ಮೂರ್ತಿಶಿಲ್ಪಗಳು, ಆಟಿಕೆ ಸಾಮಾನು, ಅಲಂಕಾರ ವಸ್ತುಗಳು ಹೀಗೆ ನೂರಾರು ಕರಕುಶಲ ವಸ್ತುಗಳು ತಯಾರಿಕೆಯಲ್ಲಿ ಒಳಗೊಂಡ ಕಾಷ್ಠ ಶಿಲ್ಪವು ವ್ಯಾಪಕವಾಗಿ ವಿಕಾಸಗೊಳ್ಳುತ್ತಾ ಬಂದಿವೆ.

ಮೈಸೂರಿನಲ್ಲಿ ಗೊಂಬೆ ಮನೆ, ಬೆಂಗಳೂರಿನಲ್ಲೊಂದು ಗೊಂಬೆ ಈ ಮುದ್ದು ಗೊಂಬೆಗಳ ಚೆಲುವಿನ ಬೀಡಾದ ಚೆನ್ನಪಟ್ಟಣದ ಚಿತ್ತಾರದ ಗೊಂಬೆಯ ಗಾಥೆ ವಿಶ್ವದ ತುಂಬೆಲ್ಲಾ ಪಸರಿಸಿದೆ. ಇದೀಗ ಎಲ್ಲೆಲ್ಲೂ ಗೊಂಬೆಯದೇ ಮಾತು. ಮೊದಲು ಗೊಂಬೆ ಸಂಗ್ರಹ ಮನೆ–ಮನೆಗೆ ಸೀಮಿತವಾಗಿತ್ತು. ಆದರೆ ಇದೀಗ ದೇಶದ ತುಂಬೆಲ್ಲಾ ಗೊಂಬೆ ಸಂಗ್ರಹಾಲಯಗಳು ಮೈದಳೆಯತೊಡಗಿವೆ. ನಮ್ಮ ಕರ್ನಾಟಕದ ಸಂಸ್ಕೃತಿಗಳ ಸೊಗಡಿನ ಕನ್ನಡಿಯಂತಿರುವ ಒನಪು, ವೈಯಾರಗಳಿಂದ ಕಣ್ಮನ ತಣಿಸುವ ಈ ಬೊಂಬೆಗಳ ಸಂಗ್ರಹವೂ ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ವಿಶಿಷ್ಟವಾದ ಮನ್ನಣೆಯನ್ನು ಪಡೆದಿದೆ.

ಚನ್ನಪಟ್ಟಣದ ಬೊಂಬೆಗಳ ತಯಾರಿಕೆಯಲ್ಲಿ ಮುಖ್ಯವಾಗಿ ಆಲೆಮರ, ಗಂಧದ ಮರ, ತೇಗದ ಮರ, ನೀಲಗಿರಿ, ರೋಜವುಡ್, ಸಿಲ್ವರ್‌ವುಡ್ ಮುಂತಾದ ಮರಗಳಿಂದ ಈ ಬೊಂಬೆಗಳನ್ನು ತಯಾರು ಮಾಡಲಾಗುತ್ತದೆ. ಈ ಗೊಂಬೆಗಳ ತಯಾರಿಕೆಯಲ್ಲಿ ಹಾಲೆಮರಕ್ಕೆ ಹೆಚ್ಚಿನ ಮಹತ್ವವಿದೆ. ಈ ಮರವನ್ನು ಸ್ಥಳೀಯವಾಗಿ ರೂಡ್ಸಿಗೆ, ಪಾಲೆ, ಹಾಲೆ, ಕೊಡಮುರಕ, ಮುಸಲ್ಮಾನರು ದೂದಿ ಲಕಡಿ ಎಂದು ಈ ಸಸ್ಯ ಪ್ರಬೇಧವನ್ನು ಅನೇಕ ಹೆಸರಿನಿಂದ ಸ್ಥಳೀಯರು ಕರೆಯುತ್ತಾರೆ.

ಹಾಲೆ ಮರವು ಕರ್ನಾಟಕವಲ್ಲದೆ ತಮಿಳ್‌ನಾಡು, ಕೇರಳ, ಗುಜರಾತ್, ಮಹಾರಾಷ್ಟ್ರದಲ್ಲೂ ಕಂಡು ಬರುತ್ತದೆ. ಆದರೆ ಇದನ್ನು ಒಲೆಗೆ ಕಟ್ಟಿಗೆ ರೂಪದಲ್ಲಿ ಉಪಯೋಗಿಸುತ್ತಾರೆ. ಈ ಮರವು ಹೆಚ್ಚಾಗಿ ಹಳೇ ಮೈಸೂರಿನ ಸುತ್ತ–ಮುತ್ತಲ ಪ್ರದೇಶಗಳಲ್ಲದೇ ಚನ್ನಪಟ್ಟಣದ ಅನೇಕ ಕಡೆ ಹೊಲಗಳಲ್ಲಿ ಸಹ ಬೆಳೆಯುತ್ತಾರೆ. ಈ ಸಸಿ ಬಿಳಿಯ ಬಣ್ಣದ ಸುಗಂಧ ಪುಷ್ಪಗಳನ್ನು ಬಿಡುವುದರಿಂದ ಕೆಲವು ದೇವಸ್ಥಾನಗಳ ಆವರಣದಲ್ಲಿಯೂ ಸಹ ನೆಟ್ಟು ಬೆಳೆಸಲಾಗಿದೆ. ಸಣ್ಣ ಸಸಿಯನ್ನು ಗುಡ್ಡ, ಬೆಟ್ಟ ಕಲ್ಲುಗಳ ನಡುವೆ ಸಹ ನೆಟ್ಟು ಬಹಳ ಸರಳವಾಗಿ

ಬೆಳೆಸುವಂತಹ ಮರ ಇದಾಗಿದೆ. ಅಲ್ಲದೇ ಬಿಳಿ ಮಣ್ಣು ಮಿಶ್ರಿತ ಕಲ್ಲು ಭೂಮಿಗಳಲ್ಲಿ ಬೀಜ ಬಿತ್ತನೆ ಮಾಡಿಯೂ ಸಹ ಬೆಳೆಯಬಹುದಾಗಿದೆ.

ಸಾಮಾನ್ಯವಾಗಿ ಈ ಪ್ರಬೇಧವು ಚಳಿಗಾಲದ ಸಮಯದಲ್ಲಿ ಇದರ ಎಲೆ ಉದುರಿ ಹೊಸದಾಗಿ ಚಿಗುರುತ್ತದೆ. ಬಿಳಿ ಅಥವಾ ತೆಳು ಹಳದಿ ಬಣ್ಣದ ಪರಿಮಳಯುಕ್ತ ಗೊಂಚ-ಗೊಂಚಲಾಗಿ ಮಾರ್ಚ ಮತ್ತು ಏಪ್ರೀಲ್‌ನಲ್ಲಿ ಹೂ ಬಿಡುತ್ತದೆ. ಮರದ ತೊಗಡೆ ಕಂದು ಮಿಶ್ರಿತ ಬೂದು ಬಣ್ಣದಿಂದ ಕೂಡಿರುತ್ತದೆ. ಮರದ ಕಾಂಡ ಭಾಗ (ಒಳಭಾಗ) ಬಿಳುಪಾಗಿರುತ್ತದೆ. ಆದ್ದರಿಂದ ಇದನ್ನು ಪಾಲೆ, ಹಾಲೆ, ಹಾಲು ದೂದಕಾ ಲಕಡಿ, ಮರವೆಂದು ಕರೆಯಲಾಗುತ್ತದೆ.

ಹಾಲೆ ಮರದ ಕಾಂಡವು ಬಲಿತವಾದ ಎಳೆಗಳು ಕ್ರಮವಾಗಿರುವುದರಿಂದ ಕೊರೆಯಲು ಸುಲಭವಾಗುತ್ತದೆ. ಈ ಮರವು ಗಟ್ಟಿಯಾಗಿ, ಮೃದುವಾಗಿರುವುದರಿಂದ ಪುರಾತನ ಕಾಲದಿಂದಲೂ ಬುಗರಿ, ಆಟದ ಗೊಂಬೆ, ವಿಗ್ರಹ ಕೆತ್ತನೆ ಹಾಗೂ ವಿವಿಧ ರೀತಿಯ ಮನೆ ಅಲಂಕಾರಿಕ, ಪ್ರಾಣಿ, ಪಕ್ಷಿಯ ಗೊಂಬೆಗಳನ್ನು ತಯಾರಿಕೆಯಲ್ಲಿ ಮರವನ್ನು ಬಳಸುತ್ತಾರೆ. ಅಲ್ಲದೇ ಈ ಹಾಲೆ ಮರದ ಪುಡಿಯಿಂದ ಊದುಬತ್ತಿಯನ್ನು ಸಹ ತಯಾರಿಸುತ್ತಾರೆ.

ಇದರ ಎಲೆಯು ಒಣಗಿದಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಇದರಿಂದ ಹಿಂದ ನೀಲಿ ಬಣ್ಣ ತೆಗೆಯಲು ಉಪಯೋಗಿಸುತ್ತಿದ್ದರು. ಕೆಲವೆಡೆ ಇದರ ಎಲೆ ಹಾಗೂ ಕಾಯಿಯನ್ನು ತರಕಾರಿಯ ರೂಪದಲ್ಲಿ ಬಳಸುವುದುಂಟು, ಇದರ ಚಕ್ಕೆ ಮತ್ತು ಬೀಜ ಎರಡನ್ನು ಔಷಧಿಗಾಗಿ ಉಪಯೋಗಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ರೈತರು ಮತ್ತು ಅರಣ್ಯ ಇಲಾಖೆಯವರು ಹಾಲೆ ಮರವನ್ನು ಬೆಳೆಸಿ ಹಣವನ್ನು ಗಳಿಸುತ್ತಿದ್ದಾರೆ. ಒಂದು ಟನ್ ಮರಕ್ಕೆ ಇಂದಿನ ಮಾರುಕಟ್ಟೆ ಬೆಲೆ ೩೦೦೦ ರಿಂದ ೪೦೦೦ದವರೆಗೂ ಸಿಗುತ್ತದೆ. ಈ ಮರದ ಬೇಡಿಕೆ ಹೆಚ್ಚಿದ್ದು, ಚನ್ನಪಟ್ಟಣ ಸುತ್ತಮುತ್ತಲು ಹಾಗೂ ಮೈಸೂರಿನ ಸುತ್ತ-ಮುತ್ತಲು ಹೆಚ್ಚಾಗಿ ಕಂಡು ಬರುತ್ತದೆ. ಇದು ಒಂದು ಆರ್ಥಿಕ ಬೆಳೆಯಾಗಿದೆ.

ಹಾಲೆ ಮರವಲ್ಲದೆ ಇನ್ನೂ ಬೇರೆ-ಬೇರೆ ಜಾತಿಯ ಮರಗಳಿಂದಲೂ ಗೊಂಬೆಗಳನ್ನು ತಯಾರಿಸಬಹುದು. ಉದಾ: ಗಂಧದ ಮರ, ತೇಗದ ಮರ, ರೋಜ್‌ವುಡ್, ಸಿಲ್ವರ್‌ವುಡ್ ಮರಗಳಲ್ಲಿಯೂ ಸಹ ಗೊಂಬೆಗಳ ತಯಾರಿಕೆಗೆ ಯೋಗ್ಯವಾಗಿದೆ. ಆದರೆ ದುಬಾರಿ ಜಾತಿಯ ಮರಗಳ ಬಳಕೆಯು ಕಾರ್ಮಿಕನಿಗೂ ಹೆಚ್ಚು ದುಬಾರಿಯಾಗುತ್ತದೆ. ಅಲ್ಲದೆ ದುಬಾರಿ ಮರಗಳ

ಬಳಕೆಯಿಂದ ಮಾಡಿದ ವಸ್ತುಗಳು ತಾನು ಅಂದುಕೊಂಡ ಮಾರುಕಟ್ಟೆಯಲ್ಲ ಬೆಲೆಗಳು ದೊರಕುವುದಿಲ್ಲ. ಆದ್ದರಿಂದ ಹಾಲೆ ಮರವು ದುಬಾರಿಯಲ್ಲಾದ ರೀತಿಯಲ್ಲಿ ಕಾರ್ಮಿಕನಿಗೂ ಹಾಗೂ ಕೊಂಡುಕೊಳ್ಳುವ ಜನರಿಗೂ ಯೋಗ್ಯ ಬೆಲೆಯಲ್ಲಿ ದೊರಕುವುದರಿಂದ ಹಾಲೆ ಮರವನ್ನೆ ಹೆಚ್ಚಾಗಿ ಉಪಯೋಗಿಸುತ್ತಾರೆ.

ಚನ್ನಪಟ್ಟಣದ ಗೊಂಬೆಗಳ ತಯಾರಿಕೆಯಲ್ಲಿ ಹಾಲೆಮರಕ್ಕೆ ಹೆಚ್ಚಿನ ಮಹತ್ವವಿದೆ. ಕಾರಣ ಬೇರೆಲ್ಲ ಮರಗಳಿಗಿಂತ ಹೇರಳವಾಗಿ ಸಿಗುತ್ತದೆ. ಈ ಮರದ ವಿಶಿಷ್ಟ ಗುಣ ಮೃದು ಮತ್ತು ನುಣುಪಾಗಿ ಹೊಳೆಯುವ ಗುಣವಿದೆ. ಕಾರ್ಮಿಕನ ಕಲಾ ನೈಪುಣ್ಯತೆಗೆ ಅನುಸಾರವಾಗಿ ಸುಲಭವಾಗಿ ಸುಂದರವಾಗಿ ಗೊಂಬೆಗಳು ರೂಪಗೊಳ್ಳುತ್ತವೆ. ಹಾಲೆ ಮರದ ಸಂರಕ್ಷಣೆಗೆ ರಾಜ್ಯ ಸರಕಾರದಿಂದ ಮತ್ತು ಅನೇಕ ಸಂಘ ಸಂಸ್ಥೆಯವರು ಬೆಳೆಸಿ ಉಳಿಸಿದವ ಮಹತ್ವದ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಹಾಲೆ ಮರದ ಇನ್ನೊಂದು ವಿಶಿಷ್ಟತೆ ಏನೆಂದರೆ ಮರವನ್ನು ಎಷ್ಟು ಬಾರಿ ಕತ್ತರಿಸಿದರು, ಅತಿ ಬೇಗನೆ (ಒಂದು ಭಾಗ ಕತ್ತರಿಸಿದರೆ ಹತ್ತು ಭಾಗದಲ್ಲಿ) ಚಿಗುರುತ್ತದೆ. ಈ ಮರದ ದೊಡ್ಡ ರೆಂಬೆಗಳನ್ನು ದೊಡ್ಡ ವಸ್ತುಗಳ ತಯಾರಿಕೆಗೆ, ಚಿಕ್ಕದಾದ ರೆಂಬೆಗಳನ್ನು ಸಣ್ಣ-ಸಣ್ಣ ವಸ್ತುಗಳ ತಯಾರಿಕೆ ಬಳಸಲಾಗುತ್ತದೆ. ಒಟ್ಟಾರೆ ಹೇಳಬೇಕೆಂದರೆ ಹಾಲೆ ಮರದ ವಸ್ತುಗಳ ತಯಾರಿಕೆಯ ಗಾತ್ರಕ್ಕೆ ಅನುಸಾರವಾಗಿ ಕತ್ತರಿಸಿ ಮಾರಾಟ ಮಾಡಲಾಗುತ್ತದೆ. ಕಾರ್ಮಿಕರು ತಾವು ತಯಾರಿಸುವ ಗೊಂಬೆಗಳ ಗಾತ್ರ ಅನುಸಾರವಾಗಿ ಮರದ ತುಂಡುಗಳನ್ನು ಆಯ್ಕೆ ಮಾಡಿಕೊಂಡು ಕೊಂಡುಕೊಳ್ಳುತ್ತಾರೆ. ಈ ಮರದ ತುಂಡುಗಳನ್ನು ಖರೀದಿಸಿ ಇವುಗಳನ್ನು ತಾನು ತಯಾರಿಸುವ ವಸ್ತುಗಳ ಅಳತೆಗೆ ತಕ್ಕಷ್ಟು ಅವುಗಳನ್ನು ಚಿಕ್ಕ-ಚಿಕ್ಕ ಭಾಗವಾಗಿ ಮಾಡಿ, ಮರದ ತುಂಡುಗಳನ್ನು ಬಿಸಿನಲ್ಲಿನಲ್ಲಿ ಒಣಗಿಸಲಾಗುತ್ತದೆ. ಈ ಮರದ ತುಂಡುಗಳನ್ನು ಸರಿಯಾದ ರೀತಿಯಲ್ಲಿ ಒಣಗಿಸದಿದ್ದರೆ ಮಾಡುವ ಸಾಮಾನುಗಳು ಹೊಳಪು ಬರುವುದಿಲ್ಲ ಮತ್ತು ಸಾಮಾನು ತಯಾರಿಸಿದರೆ ಅವುಗಳಲ್ಲಿ ಬಿರುಕು ಕಾಣಿಸಿಕೊಳ್ಳುತ್ತವೆ. ಆದ್ದರಿಂದ ಗೊಂಬೆ ತಯಾರಿಸುವ ಮರದ ಕಟ್ಟಿಗೆಗಳನ್ನು ಬಿಸಿನಲ್ಲಿ ಚೆನ್ನಾಗಿ ಒಣಗಿಸಬೇಕಾಗುತ್ತದೆ.

ಚೆನ್ನಪಟ್ಟಣ್ಣದಲ್ಲಿ ಗೊಂಬೆಗಳ ತಯಾರಿಕೆಯು ೧೨ ತಿಂಗಳುಗಳು ಕಾಲವು ನಡೆಯುವುದರಿಂದ ಕೆಲಸ ಮಾಡುವ ಕಾರ್ಮಿಕರು ಮಳೆಗಾಲ ಹಾಗೂ ಚಳಿಗಾಲ ಇಂತಹ

ಕಾಲದಲ್ಲಿ ಹಾಲೆ ಮರವನು ಹೆಚ್ಚಾಗಿ ಸಂಗ್ರಹಿಸಿಕೊಂಡು ಬೆಸಿಗೆ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿಕೊಂಡು ಇಟ್ಟುಕೊಳ್ಳುತ್ತಾರೆ. ಇದಲ್ಲದೆ ಇನ್ನೂ ಕೆಲವು ದುಬಾರಿ ಮರಗಳಿಂದಲೂ ಸಹ ಗೊಂಬೆಗಳನ್ನು ತಯಾರಿಸುತ್ತಾರೆ. ಮಕ್ಕಳ ಆಟದ ಜಿಕು ಕುದುರೆಗಳನ್ನು ತಯಾರಿಸಲು ಬಸರಿ ಮರವನ್ನು ಸಹ ಬಳಸುವುದನ್ನು ಕಾಣಬಹುದಾಗಿದೆ.

ಚನ್ನಪಟ್ಟಣ ತಾಲೂಕಿನಲ್ಲಿ ಗೊಂಬೆಯ ತಯಾರಿಕೆಯಲ್ಲಿ ಮುಸಲ್ಮಾನ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ತೊಡಗಿಸಿಕೊಂಡಿರುವುದನ್ನು ಇಲ್ಲಿ ನೋಡಬಹುದಾಗಿದೆ. ಇದಲ್ಲದೆ ಸುಮಾರು ನೂರು ವರ್ಷಗಳಿಗಿಂತಲೂ ಹಿಂದಿನ ಇತಿಹಾಸದಿಂದಲೂ ಈ ಕರ-ಕುಶಲ ಕೈಗಾರಿಕೋದ್ಯಮವನ್ನು ನಡೆಸಿಕೊಂಡು ಬಂದಿದ್ದಾರೆ. ಇತ್ತಿಚಿನ ದಿನಗಳಲ್ಲಿಯು ಎಲ್ಲಾ ಜನಾಂಗದವರು ಈ ವೃತ್ತಿಯನ್ನು ಮಾಡುತ್ತಿದ್ದಾರೆ. ಹೆಣ್ಣು ಮಕ್ಕಳು ಸಹ ಗಂಡು ಮಕ್ಕಳು ಅಷ್ಟೇ ಸರಿ ಸಮನಾಗಿ ಕೆಲಸವನ್ನು ಮಾಡುವುದನ್ನು ನಾವು ಚೆನ್ನಪಟ್ಟಣದಲ್ಲಿ ನೋಡಬಹುದಾಗಿದೆ.

ಚನ್ನಪಟ್ಟಣದ ಕರ-ಕುಶಲ ಕೈಗಾರಿಕೆ ಪ್ರಸಿದ್ಧಿ ಪಡೆದಂತೆಲ್ಲಾ ಕಲೆಗಾರರಿಗೆ ಪ್ರೋತ್ಸಾಹ ಹಾಗೂ ಅವರಿಗೆ ಕರಕುಶಲ ಕೈಗಾರಿಕೆಗೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸುವ ಸಲುವಾಗಿ ೧೯೭೧ರಲ್ಲಿ ಕರ್ನಾಟಕ ರಾಜ್ಯ ಕರ-ಕುಶಲ ಅಭಿವೃದ್ಧಿ ನಿಗಮ ನಿಯಮಿತ ಇವರು ಚನ್ನಪಟ್ಟಣದಲ್ಲಿ ಅರಗು ಕುಶಲ ಕಲಾ ಸಂಕೀರ್ಣವನ್ನು ಪ್ರಾರಂಭಿಸಿ ಕರ-ಕುಶಲ ಕಾರ್ಮಿಕರುಗಳಿಗೆ ಉತ್ತಮ ತರಬೇತಿ ಹಾಗೂ ಹೊಸ-ಹೊಸ ರೀತಿಯ ವಿನ್ಯಾಸಗಳ ಪರಿಚಯ, ಗೊಂಬೆ ತಯಾರಿಕೆಯಲ್ಲಿ ಬೇಕಾಗುವಂತಹ ಸಾಮಾಗ್ರಿಗಳು ಮತ್ತು ಗೊಂಬೆ ತಯಾರಿಕೆಗೆ ಬೇಕಾಗುವಂತಹ ಮರದ ಪೂರೈಕೆ ಹಾಗೂ ಮರವನ್ನು ಹದ ಮಾಡುವ ವಿದ್ಯುತ್ ಯಂತ್ರವನ್ನು ಅಳವಡಿಕೆ ಮಾಡಿಕೊಟ್ಟು, ಕುಶಲ ಕರ್ಮಿಗಳನ್ನು ಪ್ರೋತ್ಸಾಹಿಸಿ ಈ ಕಲೆಯನ್ನು ಉಳಿಸುವಲ್ಲಿ ಸಂಘ-ಸಂಸ್ಥೆಗಳು ಶ್ರಮಿಸುತ್ತಿವೆ. ಚನ್ನಪಟ್ಟಣದ ಗೊಂಬೆಗಳು ಎರಡು ರೀತಿಯಲ್ಲಿ ತಯಾರಿಸಲಾಗುತ್ತದೆ.

೧) ಮೊದಲನೆಯದಾಗಿ ಹಳೆಯದಾದ ಪಟ್ರಿ ಪದ್ಧತಿ (ಹ್ಯಾಂಡ್ ಲೇತ್)
೨) ಎರಡನೆಯದಾಗಿ ಆಧುನಿಕ ವಿದ್ಯುತ್ ಯಂತ್ರ (ಪವರ್ ಲೇತ್)

ಪಟ್ರೆ ಪದ್ಧತಿ: (ಹ್ಯಾಂಡ ಲೇತ್)

ಚನ್ನಪಟ್ಟಣ ಗೊಂಬೆ ತಯಾರಿಕೆಯಲ್ಲಿ ಮೊಟ್ಟ ಮೊದಲ ಪಟ್ರೆ (ಹ್ಯಾಟ್ ಲೇತ್) ಎಂಬ ಯಂತ್ರದಿಂದ ಕೈಯಿಂದಲೇ ನಡೆಸುವಂತಹ ಉಪಕರಣವಿದಾಗಿದೆ. ಈ ಪಟ್ರೆಗೆ ಅನೇಕ ವರ್ಷಗಳ ಇತಿಹಾಸವನ್ನು ನಾವು ಕಾಣಬಹುದಾಗಿದೆ. ಹಳೆಯದಾದ ಪಟ್ರೆ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವಂತಹ ಅನೇಕ ಜನ ಕರಕುಶಲ ಕರ್ಮಿಗಳನ್ನು ನಾವು ಚನ್ನಪಟ್ಟಣದ ಸುತ್ತ–ಮುತ್ತ ಕಾಣಬಹುದಾಗಿದೆ. ಹೆಚ್ಚಿನದಾಗಿ ನೀಲಸಂದ್ರ ಎಂಬ ಊರಿನಲ್ಲಿ ಈಗಲೂ ಸಹ ಪಟ್ರೆಯಿಂದ ತಯಾರಿಸುವ ಗೊಂಬೆಗಳನ್ನು ನೋಡಬಹುದಾಗಿದೆ. ಈ ಊರಿನಲ್ಲಿ ಇಲ್ಲಿಯವರೆಗೆ ಒಂದು ವಿದ್ಯುತ್ ಯಂತ್ರವು ಸಹ ಕಾಣಸಿಗುವುದಿಲ್ಲ.

ಪಟ್ರೆ ನಿರ್ಮಿಸುವ ವಿಧಾನ:

ಪಟ್ರೆ ನಿರ್ಮಿಸಲು ಅತಿ ಹೆಚ್ಚಿನ ಖರ್ಚು ಬರುವುದಿಲ್ಲ. ಮೊದಲು ಎರಡು ಐದು ಅಡಿಯ ಉದ್ದದ ತುಂಡುಗಳನ್ನು ಜೋಡಿಸಿ ಇವುಗಳ ಮೇಲೆ ಒಂದು ಪಟ್ಟಿಯನ್ನು ಜೋಡಿಸಿರುತ್ತಾರೆ. ಈ ಪಟ್ಟಿಯ ಮುಂದಕ್ಕೆ ಒಂದು ಕಬ್ಬಿಣದ ಪಟ್ಟಿಯನ್ನು ಸಹ ಅಳವಡಿಸಿರುತ್ತಾರೆ. ದಪ್ಪನೆಯ ಮರದ ತುಂಡಿನ ಮುಂದಿನ ತುದಿಯಲ್ಲಿ ಎರಡು ಚೂಪಾದ ಮೊಳೆಗಳನ್ನು ಎದುರು ಬದಿರು ದಿಕ್ಕಿನಲ್ಲಿ ಮರಕ್ಕೆ ಜೋಡಿಸಿರುತ್ತಾರೆ. ಬಲಬದಿಯ ಚೂಪಾದ ಮೊಳೆಗೆ ಚಂದ್ರಿಕೆಯನ್ನು ಅಳವಡಿಸಿರುತ್ತದೆ. ಚಂದ್ರಿಕೆಗೆ ಎರಡು ಬದಿಯ ಮೊಳೆಯ ತುದಿಗೆ ಪಟ್ರೆ ತಯಾರಿಸುವಂತಹ ಮರದ ಕಟ್ಟಿಗೆಯನ್ನು ಅಳವಡಿಸಿಕೊಳ್ಳಲಾಗುತ್ತದೆ. ಈ ತುದಿಗೆ ೫–೬ ಅಡಿಯಷ್ಟು ಉದ್ದನ ಮರದ ಕೋಲನ್ನು ತೆಗೆದುಕೊಂಡು ಇದರ ಮುಂದಿನ ತುದಿಯನ್ನು ಮತ್ತು ಹಿಂದಿನ ತುದಿಗೆ ದಾರವನ್ನು ಕಟ್ಟಿರುತ್ತಾರೆ. ಹಿಂದಿನ ತುದಿಗೆ ಕೈಯಲ್ಲಿ ಹಿಡಿದುಕೊಳ್ಳುವಂತಹ ರೀತಿಯಲ್ಲಿ ಕೈಹಿಡಿಯನ್ನು ಮಾಡಿರಲಾಗುತ್ತದೆ. ಇದನ್ನೂ ಬಿಲ್ಲಿನ ಕೋಲು ಎಂದು ಕರೆಯಲಾಗುತ್ತದೆ. ಬಿಲ್ಲಿನ ಕೋಲನ್ನು ಮರದ ಮುಂದಿನ ತುದಿಯಲ್ಲಿ ಅಳವಡಿಸಲಾಗಿದ್ದು ಚಂದ್ರಿಕೆಗೆ ಒಂದು ತುದಿಯು ಬಿಲ್ಲಿನ ಕೋಲಿನ ದಾರವನ್ನು ಸುತ್ತಿರುತ್ತಾರೆ ಬಲಗೈಯಿಮದ ಬಿಲ್ಲಿನ ಕೋಲನ್ನು ಎಳೆದಾಗ ಮರಕ್ಕೆ ಅಳವಡಿಸಿದ ಚಂದ್ರಿಕೆ ತಿರುಗುತ್ತದೆ. ಇದನ್ನು ಬಲಗೈ ಸಹಾಯದಿಂದ ಎಳೆದಾಗ ತಿರುಗುತ್ತದೆ. ಎಡಭಾಗದಲ್ಲಿ ತನ್ನ ಎಡಗೈ ಸಹಾಯದಿಂದ ಮಾತ್ರ ವಸ್ತುಗಳನ್ನು ನಿರ್ಮಿಸಬಹುದು. ಇದಲ್ಲದೆ ಉಳಿಗಳ ಸಹಾಯದಿಂದಲೂ ಕಟ್ಟಿಗೆಗೆ ಆಕಾರವನ್ನು

ಕೊಡಲಾಗುತ್ತದೆ. ಈ ಪಟ್ರಿ ಪದ್ಧತಿಯಿಂದ ೫.m.m. ನಿಂದ ೧೫ m.m. ವರೆಗೆ ಗಾತ್ರದ ವಸ್ತುಗಳನ್ನು ಮಾತ್ರ ಮಾಡಬಹುದಾಗಿದೆ. ಪಟ್ರಿಯ ಕೆಲಸದಲ್ಲಿ ಚಿಕ್ಕ-ಚಿಕ್ಕ ಜೋಡಣೆ ಸಾಮಾನುಗಳಾದ ಉದಾ: ಕಿವಿ ಓಲೆಗಳು, ನೆಕ್‌ಲೇಸ್ ಮಣಿಗಳು, ಕಾರ ಹಿಂಬದಿಯ ಸೀಟಿನ ಮಣಿಗಳು, ಕರಟನ್ ರಿಂಗ್‌ಗಳು, ಜೋಕರ್ ಮೇರಿಗ್ರಾವಂಡ್ (ಮಕ್ಕಳ ತೊಟ್ಟಿಲಿಗೆ ಮೇಲಭಾಗದಲ್ಲಿ ಕಟ್ಟುವಂತಹ ಅಲಂಕಾರಿಕ ಮಣಿಗಳು) ಕೀ ಚೈನ್‌ಗಳು, ಮೇಣದ ಬತ್ತಿ ಸ್ಟ್ಯಾಂಡಗಳು, ಚಪಾತಿಯ ಲಾಟ್ಟಣಿಗೆ, ಬಾಲ್‌ಗಳು ಗೊಂಬೆಗಳ ಜೋಡಿಸುವಂತ ಕೈಗಳು, ಕಿವಿಗಳು, ಸ್ತ್ರೀ ತಲೆಯ ಹಿಂಬದಿಯ ತುರುಬಗಳು, ಪ್ರಾಣಿಗಳಿಗೆ ಬೇಕಾಗುವ ಕಾಲುಗಳು, ಬಾಲಗಳು, ಕಿವಿಗಳು ಇನ್ನೂ ಹಲವು ರೀತಿಯಾದ ೧೦೦ ರಿಂದ ೧೫೦ ರೀತಿಯ ಸಣ್ಣ ಗಾತ್ರದ ಸಾಮಾನುಗಳನ್ನು ಪಟ್ರಿಯಿಂದ ನಿರ್ಮಿಸಬಹುದಾಗಿದೆ.

ಪಟ್ರಿಯಿಂದ ಕೆಲಸವು ತುಂಬ ನಿಧಾನಗತಿಯಲ್ಲಿ ಸಾಗುತ್ತದೆ. ಅಲ್ಲದೆ ಒಂದು ರೀತಿಯಿಂದ ಚಿಕ್ಕ ಸಾಮಾನುಗಳನ್ನು ಚೊಕ್ಕವಾಗಿ ನಿರ್ಮಿಸುವಲ್ಲಿ ಸಹಾಯವಾಗುತ್ತದೆ. ಒಂದು ಪಟ್ರಿಗೆ ಒಬ್ಬರೆ ಕುಳಿತುಕೊಂಡು ಕೆಲಸವನ್ನು ಮಾಡಬೇಕಾಗುತ್ತದೆ. ಈ ಪಟ್ರಿ ಕೆಲಸಕ್ಕೆ ಆಕ್ಸಪ್ರೇಮ್, ಅರ, ಮಟ್ಟಲುಳಿ, ಉಗುರುಉಳಿ, ಸಣ್ಣಉಳಿ ಮತ್ತು ಕಾಂಪಸ್ ಎಂಬಂತಹ ಉಪಕರಣಗಳನ್ನು ಬಳಸುತ್ತಾರೆ.

ಆಧುನಿಕ ವಿದ್ಯುತ್ ಯಂತ್ರ ಬಳಕೆ:

ಚನ್ನಪಟ್ಟಣ ಗೊಂಬೆಗಳು ಆಧುನಿಕ ವಿದ್ಯುತ್ ಯಂತ್ರದ ಸಹಾಯದಿಂದ ಹೆಚ್ಚಿನದಾಗಿ ತಯಾರಿಸಲಾಗುತ್ತಿದೆ. ಚನ್ನಪಟ್ಟಣದಲ್ಲಿ ಮೊಟ್ಟ ಮೊದಲ ಪಟ್ರಿಯಿಂದಲೇ ಕೆಲಸವನ್ನು ಮಾಡುತ್ತಿದ್ದರು. ಚನ್ನಪಟ್ಟಣ ಚಿತ್ತಾರ ಗೊಂಬೆಗಳು ಪ್ರಸಿದ್ಧಿ ಪಡೆದಂತೆಲ್ಲಾ ಕಲೆಗಾರರಿಗೆ ಪ್ರೋತ್ಸಾ ಹಾಗೂ ಅವರಿಗೆ ಕರಕುಶಲ ಕೈಗಾರಿಕೆಗೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ೧೯೭೧ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದವರು. ಚನ್ನಪಟ್ಟಣ ಅರಗು ಕುಶಲ ಸಂಕೀರ್ಣ ಪ್ರಾರಂಭಿಸಿ ಕರಕುಶಲ ಕರ್ಮಿಗಳಿಗೆ ೧ ವರ್ಷಗಳ ಕಾಲ ತರಬೇತಿಯನ್ನು ಕೊಟ್ಟುದಲ್ಲದೆ ಇವರಿಗೆ ತಿಂಗಳ ಭತ್ಯೆ ರೂಪದಲ್ಲಿ ಹಣವನ್ನು ಕೊಟ್ಟು ಹೊಸ-ಹೊಸ ರೀತಿಯ ವಿನ್ಯಾಸ ರೀತಿಯಲ್ಲಿ ಗೊಂಬೆಗಳನ್ನು ತಯಾರಿಸುವ ಬಗ್ಗೆ ಮಾಹಿತಿಯನ್ನು ಆಸಕ್ತ ಅಭ್ಯರ್ಥಿಗಳಿಗೆ ತರಬೇತಿ ಕೊಡಲಾಯಿತು. ಈ ತರಬೇತಿ ಅವಧಿ ಮುಗಿದ ಮೇಲೆ

ಇವರಿಗೆ ½ H.P ವಿದ್ಯುತ್ ಬೇಬಿ ಲೇತ್‌ಗಳನ್ನು ವಿತರಿಸಲಾಯಿತು. ಈ ಯಂತ್ರದಲ್ಲಿ ಒಬ್ಬರೆ ಕುಳಿತುಕೊಂಡ ವಿದ್ಯುತ್ತಿನ ಸಹಾಯದಿಂದ ಕೆಲಸವನ್ನು ಮಾಡಬಹುದಾಗಿದೆ. ಬೊಂಬೆಯ ತಯಾರಿಕೆಯ ಕೆಲಸವನ್ನು ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಪ್ರತಿ ವರ್ಷವು ಹೊಸ-ಹೊಸ ಗುಂಪುಗಳಿಗೆ ತರಬೇತಿಯನ್ನು ಕೊಟ್ಟು ಒಟ್ಟು ಮೊತ್ತದಲ್ಲಿ ಅರ್ಧ ಮೊತ್ತವನ್ನು ಕಟ್ಟಿಸಿಕೊಂಡು ಬೇಬಿ ವಿದ್ಯುತ್ ಯಂತ್ರವನ್ನು ಮೊದಲ ಬಾರಿಗೆ ವಿತರಿಸಲಾಯಿತು.

ವಿದ್ಯುತ್‌ಯಂತ್ರ (ಪವರ್ ಲೇತ್)ವನ್ನು ಕಾರ್ಮಿಕರ ಅನುಕೂಲಕ್ಕೆ ತಕ್ಕಂತೆ ಲೇತ್‌ಗೆ ಹೆಚ್ಚಿನ H.Pಯನ್ನು ಅಳವಡಿಸಿಕೊಳ್ಳಬಹುದು. ಉದಾಃ ೨ ಹೆಚ್.ಪಿ. ವಿದ್ಯುತ್ ಯಂತ್ರವನ್ನು ಅಳವಡಿಸಿಕೊಂಡರೆ ೪ ರಿಂದ ೬ ಜನ ಕುಳಿತುಕೊಂಡು ಕೆಲಸ ಮಾಡಬಹುದಾಗಿದೆ. ಇದೇ ರೀತಿ 3H.P, 6H.P, 10H.P ಅಳವಡಿಸಿಕೊಂಡು ಸಾಕಷ್ಟು ಜನರು ಕೆಲಸವನ್ನು ನಿರ್ವಹಿಸುವಂತೆ ಇವುಗಳ ಸಾಮರ್ಥ್ಯವನ್ನು ಮಾರ್ಪಡಿಸಲಾಗಿದೆ.

ವಿದ್ಯುತ್ ಯಂತ್ರ (ಪಾವರ್ ಲೇತ್):

ಕರಕುಶಲ ಕರ್ಮಿಯು ತನಗೆ ಬೇಕಾಗುವಷ್ಟು ಸಾಮರ್ಥ್ಯದ H.P ಮೋಟಾರನ್ನು ಅಳವಡಿಸಿಕೊಳ್ಳಬಹುದಾಗಿದೆ. ಮೋಟಾರಿಗೆ ಒಂದು ಬೆಲ್ಟ್‌ನ್ನು ಅಳವಡಿಸಿ ಇದಕ್ಕೆ ವಿದ್ಯುತ್‌ನ್ನು ಹರಿಸಿದಾಗ ಬೆಲ್ಟಿನ ಸಹಾಯದಿಂದ ಚಕ್ರ (ವ್ಹಿಲ್) ತಿರುಗುತ್ತದೆ. ಚಕ್ರಕ್ಕೆ ಇನ್ನೊಂದು ಬೆಲ್ಟನು ಅಳವಡಿಸಿಕೊಂಡು ಇದನ್ನು ಲೇತ್‌ಗೆ ಸೇರಿಸಲಾಗಿರುತ್ತದೆ. ಮೋಟಾರಗೆ ವಿದ್ಯುತ್‌ನ್ನು ಹರಿಸಿದಾಗ ಚಕ್ರ ಸಹಾಯದಿಂದ ಲೇತ್ ತಿರುಗುತ್ತದೆ. ಲೇತ್ ಮುಂಬಾಗದಲ್ಲಿ ಮರದ ತುಂಡನ್ನು ಬಿಗಿಮಾಡಲು ಮತ್ತು ಸಡಿಲಗೊಳಿಸುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಲೇತ್‌ನ ಮುಂಭಾಗದಲ್ಲಿ ಚಂದ್ರಿಕೆ ಇರುತ್ತದೆ. ಇದಕ್ಕೆ ಮರದ ತುಂಡನ್ನು ಬಿಗಿಯಾಗುವ ರೀತಿಯಲ್ಲಿ ಇಟ್ಟು ಯಂತ್ರವು ತಿರುಗಿದಾಗ ಉಳಿಗಳ ಸಹಾಯದಿಂದ ತಾವು ತಯಾರಿಸುವಂತ ಸಾಮಾನುಗಳಿಗೆ ತಕ್ಕಂತೆ ಆಕಾರಗಳನ್ನು ಕೊಡಲಾಗುತ್ತದೆ.

ವಿದ್ಯುತ್‌ಯಂತ್ರಕ್ಕೆ ಸುಮಾರು ಆರು ರೀತಿಯ ಉಳಿಗಳನ್ನು ಉಪಯೋಗಿಸಲಾಗುತ್ತದೆ. ಮಟ್ಟ ಉಳಿ, ಸೇಪ್ ಉಳಿ, ದೊಡ್ಡ ಉಳಿ, ಸಣ್ಣ ಉಳಿ, ಕೊಯ್ಯುವ ಉಳಿ, ಬಾಚಿ (ಇದು ಮರವನ್ನು ಅಳತೆಗೆ ಅನುಸಾರವಾಗಿ ಕೆತ್ತಲಿಕ್ಕೆ ಮತ್ತು ಮರವನ್ನು ಕತ್ತರಿಸಲು) ಬಳಸಲಾಗುತ್ತದೆ. ಇದೇ ರೀತಿಯಾಗಿ ಮೂರು ರೀತಿಯ ಕೈವಾರಗಳನ್ನು (ಮರದ ಅಳತೆಗಳಾನುಸಾರವಾಗಿ ಅಳತೆ

ಮಾಡಲು) ಬಳಸಲಾಗುತ್ತದೆ. ೧) ಮುಳ್ಳು ಕಂಪಾಸ್ ೨) ದುಂಡಕಾರ ಕಂಪಾಸ್ ೩) ಇನ್ ಸೈಡ್ ಕಂಪಾಸ್‌ಗಳನ್ನು ಬಳಸಿ ಗೊಂಬೆಗಳನ್ನು ತಯಾರಿಸುತ್ತಾರೆ.

ಬಣ್ಣಗಳು:

ಚನ್ನಪಟ್ಟಣದ ಚಿತ್ತಾರದ ಬೊಂಬೆಗಳ ತಯಾರಿಕೆಯಲ್ಲಿ ಬಣ್ಣಗಳ ಪಾತ್ರವು ಬಹು ಮುಖ್ಯವಾಗಿದೆ. ಇಲ್ಲಿ ಮೊಟ್ಟ ಮೊದಲು ಬಾರಿಗೆ ಬಣ್ಣವು ಸುತ್ತ-ಮುತ್ತ ಸಿಗುತ್ತಿದ್ದ ಗಿಡಗಳಿಂದ ಬಣ್ಣವನ್ನು ಉತ್ಪತ್ತಿಯನ್ನು ಮಾಡುತ್ತಿದ್ದರು. ಇದು ಅನೇಕ ವರ್ಷಗಳ ಹಳೆಯ ಇತಿಹಾಸವನ್ನು ಇಲ್ಲಿ ಕಾಣಬಹುದಾಗಿದೆ. ಬಣ್ಣಗಳ ತಯಾರಿಕೆಯಲ್ಲಿ ನೈಪುಣ್ಯತೆಯ ಪಡೆದವರಲ್ಲಿ ದಾಸ ಜೆಟ್ಟಪ್ಪ, ಸಿ.ಎ. ಅರಸುಜೆಟ್ಟಪ್ಪ ಮತ್ತು ಪುಟ್ಟ ಜೆಟ್ಟಪ್ಪ ಎನ್ನುವರು. ಬಣ್ಣದ ಬಳಕೆಯ ತಂತ್ರವನ್ನು ಪರಿಚಯಿಸಿದರು ಎಂಬುದು ಇಲ್ಲಿ ಸ್ಥಳೀಯ ಸಂಶೋಧನೆಗಳಿಂದ ತಿಳಿದು ಬರುತ್ತದೆ.

ಚನ್ನಪಟ್ಟಣ ಗೊಂಬೆಗಳ ತಯಾರಿಕೆಯ ವಿವಿಧ ರೀತಿಯ ರಸಾಯನಿಕ ಬಣ್ಣಗಳನ್ನು ತಯಾರಿಸಿ ಸಾಮಾನುಗಳಿಗೆ ಲೇಪಿಸಿದ್ದಾರೆ. ಇದರ ಬಳಕೆಯು ಹೆಚ್ಚು ಕಾಲ ಉಳಿಯಲಿಲ್ಲ. ಕಾರಣ ಇಲ್ಲಿ ಹೆಚ್ಚಿನ ಸಾಮಾನುಗಳು ಮಕ್ಕಳ ಆಟಿಕೆಯ ಸಾಮಾನುಗಳಾಗಿರುವುದರಿಂದ ಈ ಬಣ್ಣಗಳ ಬಳಕೆಯಿಂದ ಮಕ್ಕಳ ಆಟದ ಗೊಂಬೆಗಳು ಹೆಚ್ಚು ತಯಾರಾಗುತ್ತವೆ. ಈ ಆಟಿಕೆಯ ಸಾಮಾನುಗಳನ್ನು ಮಕ್ಕಳು ಬಾಯಿಯಲ್ಲಿ ಇಟ್ಟುಕೊಳ್ಳುತ್ತಿದ್ದರಿಂದ ಬಾಯಿಯಲ್ಲಿ ಚಿಕ್ಕ-ಚಿಕ್ಕ ಗುಳ್ಳೆಗಳು ಮತ್ತು ಗಾಯಾಳುಗಳಾಗುತ್ತಿದ್ದವು. ಆದ್ದರಿಂದ ಇದನ್ನು ಅರಿತ ಕೆಲವು ಸಂಘ-ಸಂಸ್ಥೆಗಳು ಈ ರಾಸಾಯನಿಕ ಬಣ್ಣಗಳನ್ನು ನಿಷೇಧಿಸಿದರು. **'ವೆಜಿಟೇಬಲ್ ಡೈಸ್'** ಎನ್ನುವ ಬಣ್ಣದ ಬಳಕೆಯನ್ನು ಕೇಂದ್ರ ಸರ್ಕಾರದ ಮಾರ್ಗದರ್ಶನದ ಮೂಲತಃ (ಸಹಯೋಗ)ದೊಂದಿಗೆ ಶಿಲ್ಪಾ ಟ್ರಸ್ಟ್ ಜೊತೆಗೂಡಿ **ವೆಜಿಟೇಬಲ್ ಡೈಸ್**‌ನ್ನು ಪ್ರಯೋಗಶಾಲೆಗೆ ಕಳುಹಿಸಿ ಅಲ್ಲಿ ಇದನ್ನು ಪರೀಕ್ಷಿಸಿ ಈ ಬಣ್ಣದ ಬಳಕೆಯಿಂದ ಯಾವುದೇ ರೀತಿಯ ತೊಂದರೆಯಾಗುವುದಿಲ್ಲ ಎಂದು ಪರಿಚಯಿಸಿದರು. ಅಂದಿನಿಂದ ಇಲ್ಲಿಯವರೆಗೆ ಚನ್ನಪಟ್ಟಣದಲ್ಲಿ ಬೊಂಬೆಗಳಿಗೆ **ವೆಜಿಟೇಬಲ್ ಡೈಸ್** ಎಂಬ ಬಣ್ಣದ ಬಳಕೆಯೇ ಪ್ರಸಿದ್ಧಿಯನ್ನು ಪಡೆದುಕೊಂಡಿತು. ಇದಲ್ಲದೆ ಕೆಲವು ಅಲಂಕಾರಿಕ ವಸ್ತುಗಳಿಗೆ ಜಲವರ್ಣದ ಸಹಾಯದಿಂದ ನಕ್ಷಾಚಿತ್ರಗಳನ್ನು ಬಿಡಿಸಲು ಬಳಸುತ್ತಾರೆ.

ಬಣ್ಣಗಳ ತಯಾರಿಕೆ ವಿಧಾನ:

ವೆಜಿಟೇಬಲ್ ಡೈಸ್ ಮಾರುಕಟ್ಟೆಯಲಿ ಅರಗು ಎಂಬ ವಸ್ತುವಿನ ರೂಪದಲ್ಲಿ ದೊರೆಯುತ್ತದೆ. ಇದು ಒಂದು ಕೆ.ಜಿ.ಗೆ ೩೦೦ ರೂ.ಗಳಿಂದ ೪೫೦ ರೂ.ಗಳವರೆಗೆ ದೊರೆಯುತ್ತದೆ. ಇದು ಬಿಲ್ಲೆ ಆಕಾರವನ್ನು ಹೊಂದಿರುತ್ತದೆ. ಈ ಅರಗು ಬೆಂಗಳೂರು, ಮೈಸೂರು ಮತ್ತು ಸ್ಥಳೀಯವಾಗಿಯು ಸಹ ದೊರೆಯುತ್ತದೆ.

ಮೊದಲು ಕಬ್ಬಿಣದ ಬಂಡಲಿಯಲ್ಲಿ ಅಥವಾ ಮಣ್ಣಿನ ಪಾತ್ರೆಯಲ್ಲಿ ಕಟ್ಟಿಗೆಯ ಇದ್ದಿಲಿನಿಂದ ಕೆಂಡವನ್ನು ಮಾಡಿಕೊಳ್ಳಬೇಕು. ನಂತರ ಎರಡು ಕೋಲುಗಳನ್ನು ತೆಗೆದುಕೊಂಡು ಬಿಲ್ಲೆಗಳನ್ನು ಕೋಲುಗಳ ಮೇಲೆ ಇರಿಸಿದಾಗ ಕೆಂಡದ ಶಾಖಕ್ಕೆ ಕರಗಿ ಅಂಟಿನ ರೂಪಕ್ಕೆ ಬರುತ್ತದೆ. ಇದಕ್ಕೆ ಸ್ವಲ್ಪ Zinc White ನ್ನು ಸೇರಿಸಿದಾಗ ಬಿಳಿಯ ಬಣ್ಣದ ರೂಪಕ್ಕೆ ಬರುತ್ತದೆ. ನಮಗೆ ಬೇಕಾಗುವಂತಹ ಬಣ್ಣಗಳಾದ ಉದಾಃ ಹಸಿರು, ಕೆಂಪು, ನೀಲಿ, ಹಳದಿ, ನಸುಕೆಂಪು, ನೇರಳೆ, ಬೂಬು ಹೀಗೆ ಹತ್ತು ಹಲವು ಬಣ್ಣಗಳನ್ನು ಚೆನ್ನಾಗಿ ಅರಗಿನೊಂದಿಗೆ ಕಟ್ಟಿಗೆಯ ಸಹಾಯದಿಂದ ಮಿಶ್ರಣ ಮಾಡಿ ಇಲ್ಲಿಯ ಕಾರ್ಮಿಕರು ತಮಗೆ ಬೇಕಾಗುವ ಬಣ್ಣಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಬಣ್ಣವನ್ನು ತಯಾರಿಸುವಲ್ಲಿ ಎಚ್ಚರ ವಹಿಸಬೇಕಾದ ಸಂಗತಿಯೆಂದರೆ ಅರಗನ್ನು ಬಂಗಾರದ ಬಣ್ಣ ಬರುವವರೆಗೆ ಕಾಯಿಸಿಕೊಳ್ಳಬೇಕು. ತಾವು ಉಪಯೋಗಿಸುವ ಬಣ್ಣದ ರೂಪವು ಬಂದ ನಂತರ ಇದು ತಣ್ಣಗಾಗಲು ದೊಡ್ಡದಾದ ತಟ್ಟೆಯಲ್ಲಿ ನೀರನ್ನು ತೆಗೆದುಕೊಂಡು ಇದರಲ್ಲಿ ಸ್ವಲ್ಪ ಮಟ್ಟಿಗೆ ತಂಪಾಗುವ ರೀತಿಯಲ್ಲಿ ಮುಳುಗಿಸುತ್ತಾರೆ. ತಯಾರಾದ ಬಣ್ಣಗಳು ಕೈಗೆ ಅಂಟದಂತೆ ಕೊಬ್ಬರಿ ಎಣ್ಣೆಯನ್ನು ಬಳಸುತ್ತಾರೆ. ಇದು ಬಿಸಿ ಇರುವಾಗಲೇ ಉದ್ದವಾದ ಪಟ್ಟಿಯಾಕಾರದಲ್ಲಿ ಹಿಗ್ಗಿಸಿ ಸಣ್ಣ-ಸಣ್ಣ ತುಂಡುಗಳನ್ನಾಗಿ ಮುರಿಯುತ್ತಾರೆ. ಇಂತಹ ಬಣ್ಣಗಳನ್ನು ಕೆಲಸಕ್ಕೆ ಬೇಕಾಗುವಷ್ಟು ಮಾತ್ರ ತಯಾರಿಸಿಕೊಳ್ಳಲಾಗುತ್ತದೆ. ಕಾರಣ ಇದರ ಉತ್ತಮ ಗುಣಮಟ್ಟ ೧ ತಿಂಗಳು ಕಾಲ ಅವಧಿ ಮಾತ್ರವಾಗಿರುತ್ತದೆ. ಆದ್ದರಿಂದ ಕೆಲಸಕ್ಕೆ ಎಷ್ಟು ಅಗತ್ಯವೋ ಅಷ್ಟೇ ಪ್ರಮಾಣದಲ್ಲಿ ಮಾತ್ರ ತಯಾರಿಸಿಕೊಳ್ಳುತ್ತಾರೆ.

ಗೊಂಬೆಗಳ ತಯಾರಿಕೆ ವಿಧಾನ:

ವಿದ್ಯುತ್ ಚಾಲಿತವಾದ ಯಂತ್ರಕ್ಕೆ ತಾವು ತಯಾರಿಸುವ ಸಾಮಾನುಗಳ ಅಳತೆಗೆ ಅನುಸಾರವಾದ ಮರದ ತುಂಡನ್ನು ಅಳವಡಿಸಿ ತಾವು ತಯಾರಿಸುವ ಆಕಾರಕ್ಕೆ ತಕ್ಕಂತೆ

ಪರಿಕರಗಳ ಸಹಾಯದಿಂದ ಬೇಕಾದ ಆಕಾರವನ್ನು ಮಾಡಿಕೊಳ್ಳುತ್ತಾರೆ. ತದನಂತರ ಮೇಲ್ಮೆಯು ನುಣುಪಾಗಲು ಉಪ್ಪಿನ ಕಾಗದದಿಂದ ಅವುಗಳನ್ನು ವಿದ್ಯುತ್ ಯಂತ್ರದ ಸಹಾಯದಿಂದ ತಿಕ್ಕಿ ನುಣುಪಾಗುವಂತೆ ಮಾಡುತ್ತಾರೆ. ನಂತರ ವೆಜಿಟೇಬಲ್ ಡೈಸ್‌ನಿಂದ ತಯಾರಾದ ಬಣ್ಣಗಳನ್ನು ತಯಾರಾದ ಗೊಂಬೆಗಳಿಗೆ ಅಥವಾ ಸಾಮಾನುಗಳಿಗೆ ವಿದ್ಯುತ್ ಚಾಲಿತ ಯಂತ್ರದ ಸಹಾಯದಿಂದ ನೇರವಾಗಿ ಲೇಪಿಸುತ್ತಾರೆ. ನಂತರ ತಾಳೆಗರಿಯಿಂದ ಇವುಗಳ ಮೇಲ್ಮೆಯನ್ನು ಹೊಳೆಯುವಂತೆ ಉಜ್ಜುವುದು. ಗರಿಯಿಂದ ಉಜ್ಜುವುದರಿಂದ ಸಾಮಾನುಗಳು ಮಿಂಚುತ್ತವೆ. ಇದಲ್ಲದೆ ಇನ್ನೂ ಕೆಲವು ಅಗತ್ಯವಿರುವಂತಹ ಅಲಂಕಾರಿಕ ನಕ್ಷೆಗಳನ್ನು ರಚಿಸಬೇಕಾದರೆ ಉದಾಃ ನಕ್ಷಾ ಚಿತ್ರಗಳು, ಕವಿ, ಕಣ್ಣು, ಗೊಂಬೆಗಳಿಗೆ ಆಭರಣ ಹೀಗೆ ಹಲವು ರೀತಿಯ ಸೂಕ್ಷ್ಮವಾದ ಅಲಂಕಾರಿಕ ನಕ್ಷೆಗಳನ್ನು ಪೋಸ್ಟರ್ ಅಥವಾ ಜಲವರ್ಣದ ಬಣ್ಣಗಳನ್ನು ಕುಂಚದ ಸಹಾಯದಿಂದ ಬಿಡಿಸಲಾಗುತ್ತದೆ. ಇನ್ನೂ ಕೆಲವು ಸಂದರ್ಭದಲ್ಲಿ ವಿವಿಧ ಬಣ್ಣದ ಮಾರ್ಕರು ಲೇಖನಿಯಿಂದಲೂ ಅನೇಕ ನಕ್ಷಾ ಚಿತ್ರಗಳನ್ನು ಪೂರ್ಣಗೊಳಿಸಲಾಗುತ್ತದೆ. ಹೀಗೆ ಪಾರಂಪರಿಕ ವಿಧಾನಗಳಿಂದ ಚನ್ನಪಟ್ಟಣದ ಚಿತ್ತಾರಗೊಂಬೆಗಳ ಬಗೆ-ಬಗೆಯ ವಸ್ತು ವೈವಿಧ್ಯತೆ ಕಂಡು ಬರುತ್ತವೆ.

ಚನ್ನಪಟ್ಟಣ ಗೊಂಬೆಗಳ ವರ್ಗೀಕರಣ:

ಪ್ರಾಚೀನ ಚನ್ನಪಟ್ಟಣದ ಗೊಂಬೆಗಳು:

೧) ಊದು ಬತ್ತಿ ಸ್ಟ್ಯಾಂಡಗಳು ೨) ಕೋಲಾಟಕ್ಕೆ ಉಪಯೋಗಿಸುವ ಕೋಲುಗಳು

೩) ದೇವನು ದೇವತೆ ಗೊಂಬೆಗಳು ೪) ದಸರಾ ಅಲಂಕಾರಿಕ ಗೊಂಬೆಗಳು

೫) ಪೆನ್ನು ಕಡ್ಡಿ ೬) ಜಾನಪದ ಶೈಲಿಯ ಗೊಂಬೆಗಳು

ಆಧುನಿಕ ಚನ್ನಪಟ್ಟಣ ಗೊಂಬೆಗಳು:

ಅಲಂಕಾರಿಕ ವಸ್ತುಗಳು:

ಹೂದಾನಿಗಳು, ಷೋಕೆಸಿನಲ್ಲಿ ಇಡುವಂತಹ ಕಲ್ಪನಾತ್ಮಕವಾದ ವಿವಿಧ ರೀತಿಯ ಪ್ರಾಣಿ ಪಕ್ಷಿಗಳು, ಬಾಗಿಲಿಗೆ ಹಾಕುವ ತೋರಣ ಮಣಿಗಳು ವಿವಿಧ ರೀತಿಯ ಸ್ತ್ರೀ, ಪುರುಷ, ಪೌರಾಣಿಕ,

ಜಾನಪದ ಗೊಂಬೆಗಳು, ಮೊಟ್ಟೆಗಳು ಸಂಗೀತವನ್ನು ನುಡಿವಂತಹ ವಸ್ತುಗಳಾದ ತಬಲ, ವೀಣೆ, ಡಮರುಗ, ಅನೇಕ ಬಗೆ ಬಗೆಯ ವಾಹನಗಳು ಇತ್ಯಾದಿಗಳು.

ಕಛೇರಿಯ ವಸ್ತುಗಳು:

ಪೆನ್ನಿನ ಸ್ಟಾಂಡಗಳು, ನ್ಯಾಪಕಿನ್ ಬಾಕ್ಸ್, ಸೀಸದ ಕಡ್ಡಿಗಳು, ಪೋಲಿಸ್ ಲಾಠಿಗಳು, ಮೊಬೈಲ್ ಸ್ಟ್ಯಾಂಡಗಳು, ವಿವಿಧ ಆಕಾರದ ಟ್ರೇಗಳು ಇತ್ಯಾದಿ.

ಗೃಹೋಪಯೋಗಿ ವಸ್ತುಗಳು:

ಆಭರಣ ಪೆಟ್ಟಿಗೆ, ಕುಂಕುಮ ಭರಣಿಗಳು, ಮೇಣದ ಬತ್ತಿ, ನಿಲುವು ಗೋಪುರಗಳು, ಪೂಜಾ ಮಂಟಪ, ಅಲಂಕಾರಿಕ ವಿವಿಧ ರೀತಿಯ ಮಣಿ ತೋರಣಗಳು, ಜಿಕು ಕುದುರೆಗಳು, ಚಪಾತಿ ಲಟ್ಟಿಸುವ ಕೋಲು, ವಿವಿಧ ಬಗೆಯ ಮರದ ಚಮಚಗಳು, ಕೀ ಬಂಚಗಳು, ಮಣಿಯ ಮ್ಯಾಟಗಳು, ಕರಟನ್ ರಿಂಗಗಳು, ವಿದ್ಯುತ್ ಪ್ಲೇಟ್‌ಗಳು, ಊರುಗೋಲುಗಳು, ರೈತರು ಬಳಸುವ ಕೋಡುಗೋಲಿನ ಹಿಡಿಗಳು ಮೊಬೈಲ್ ಸ್ಟಾಂಡಗಳು ಇತ್ಯಾದಿ.

ಸ್ತ್ರೀಯರು ಬಳಸುವ ವಸ್ತುಗಳು:

ಬಳೆಗಳು, ಕಿವಿಯೋಲೆಗಳು, ಸರಗಳು, ಬ್ರಾಸಲೇಟ್‌ಗಳು, ಅಲಂಕಾರಿಕ ಚೂಡಿದಾರ್ ಗುಂಡಿಗಳು, ರಿಬ್ಬನಗಳು ಇತ್ಯಾದಿ.

ಕ್ರೀಡಾ ಸಾಮಗ್ರಿಗಳು:

ಹಲವು ಬಗೆಯ ವೈವೀಧ್ಯಮಯ ನೆನಪಿನ ಕಾಣಿಕಗಳು, ಚದುರಂಗದ ಪಾನ್‌ಗಳು, ಬ್ಯಾಟಗಳು ಇತ್ಯಾದಿ.

ಮಕ್ಕಳ ಆಟಿಕೆ ವಸ್ತುಗಳು:

ವಿವಿಧ ಜಾತಿಯ ಪ್ರಾಣಿಗಳು, ಅನೇಕ ವಿವಿಧ ಕ್ರಿಯಾತ್ಮಕ ಪಕ್ಷಿಗಳು, ಕಪ್ಪರ್ ಬಾಲ್‌ಗಳು, ಕಿಚನ್ ಸಾಮನುಗಳು, ಮೇರಿಗ್ರಾವಂಡ್, ಲಾರಿ, ಬಸ್ಸು, ಕಾರು, ವಿಮಾನ, ಏಣಿಕೆಯ

ಗೊಂಬೆಗಳು ಮನುಷ್ಯಾಕೃತಿಯ ಗೊಂಬೆಗಳು, ಜಿಕು ಕುದರೆಗಳು, ಬುಗುರಿಗಳು ಎಣಿಕೆಯ ಮಣಿಕಟ್ಟುಗಳು, ಸ್ಪ್ರಿಂಗ್ ಗೊಂಬೆಗಳು ಇನ್ನೂ ಅನೇಕ ಸಾಕಷ್ಟು ವೈವಿಧ್ಯಮಯದ ವಸ್ತುಗಳನ್ನು ಇಲ್ಲಿ ಕಾಣಬಹುದಾಗಿದೆ. ಒಟ್ಟಾರೆ ೩೦೦೦ ರಿಂದ ೪೦೦೦ ಕ್ಕಿಂತಲೂ ಹೆಚ್ಚಿನ ಬಗೆ ಬಗೆಯ ಗೊಂಬೆಗಳನ್ನು ನಾವು ಇಲ್ಲಿ ಕಾಣುಬಹುದಾಗಿದೆ.

ಕರ್ನಾಟಕದಲ್ಲಿ ಮರದಲ್ಲಿನ ಕಲಾಕ್ರಿಯೆಗಳು:

ಕರ್ನಾಟಕ ಶ್ರೀಗಂಧದ ಮರಗಳ ತವರೂರು ಎಂದೇ ಪ್ರಖ್ಯಾತಿ ಹೊಂದಿದೆ. ಈ ಮರವು ಕೆತ್ತನೆಗೆ ಪ್ರಶಸ್ತವಾದರಿಂದ ಗುಡಿಕಾರರು ಇದನ್ನೇ ತಮ್ಮ ಕಲೆಯ ಮೂಲವಸ್ತುವನ್ನಾಗಿ ಆರಿಸಿಕೊಂಡಿದ್ದಾರೆ. ಇಲ್ಲಿ ಕರಿಮರವನನ್ನು ಬಳಸುವುದಂಟು, ಶಿವಮೊಗ್ಗ, ಸೊರಬ, ಶಿರ್ಸಿ, ಹೊನ್ನಾವರ ಮುಂತಾದ ಸ್ಥಳಗಳಲ್ಲಿ ಈ ಗುಡಿಗಾರ ವಾಸ್ತವ್ಯ ಸಂಪುಟಗಳು, ಫೋಟೋಗಳಿಗೆ ಹಾಕುವ ಕಟ್ಟುಗಳು, ಹರಿವಾಣಗಳು, ಹೆಣಿಗೆ, ಉರುಗೋಲು, ಬೀಸಣಿಗೆ ಇನ್ನು ಮುಂತಾದವುಗಳನ್ನು ಇವರು ತಯಾರಿಸುತ್ತಾರೆ. ಇಲ್ಲಿ ಕರಿಮರದಿಂದ ತಯಾರಿಸುವ ಆನೆ ನೋಡಲು ಆಕರ್ಷಕವಾದ ಕೆತ್ತನೆಗೆ ಬಹಳ ಬೇಡಿಕೆಯಿದೆ.

ಮರದ ಜೊತೆಗೆ ದಂತವನ್ನೂ ಜೋಡಿಸಿ, ಬಗೆ-ಬಗೆಯ ವಿನ್ಯಾಸಗಳ ಚಿತ್ರಫಲಕಗಳನ್ನು ನಿರ್ಮಿಸುವ ಹುದುಗ ಅಥವಾ ಜೋಡನಾ ಕಲೆಯೇ ಇನ್‌ಲೇ, ಪ್ರಕೃತಿ ಚಿತ್ರಗಳು, ಪ್ರಾಣಿ-ಪಕ್ಷಿಗಳು, ಚಿತ್ರಗಳು, ರಾಧಾಕೃಷ್ಣರ ಮಿಲನದ ಸಂಯೋಜಿತ ಚಿತ್ರಗಳು, ಗೀತೋಪದೇಶ ಮೈಸೂರಿನ ವಿಶ್ವ ಪ್ರಸಿದ್ಧ ದಸರೆಯ ಜಂಬೂ ಸವಾರಿ ಇನ್ನೂ ಹಲವು ರೀತಿಯ ವಿಷಯಗಳನ್ನು ಸಂಯೋಜಿಸಿ ದೊಡ್ಡ ದೊಡ್ಡ ಅಲಂಕಾರ ಫಲಕಗಳನ್ನು ತಯಾರಿಸುವ ಇನ್‌ಲೇ ಕಲಾವಿದರು ನಮ್ಮ ಕರ್ನಾಟಕದಲ್ಲಿದ್ದಾರೆ. ವಿವಿಧ ಆಕಾರಗಳ ಪೆಟ್ಟಿಗೆಗಳು, ಸಣ್ಣ ಮೇಜುಗಳು, ಫಲಕಗಳು ಮುಖ್ಯವಾಗಿ ಇಂತಹ ಜೋಡಣಾ ಚಿತ್ರಗಳನ್ನು ಹೊಂದಿರುತ್ತಾರೆ. ದಂತಹವನ್ನೆ ಅಲ್ಲದೆ ವಿವಿಧ ಬಣ್ಣಗಳ ಮರದ ತುಂಡುಗಳನ್ನು ಅಗತ್ಯವಿರುವ ಕಡೆಗಳಲ್ಲಿ ಬಳಸಿ ಇಂತಹ ಸಂಯೋಜಿತ ಚಿತ್ರಗಳನ್ನು ರಚಿಸುತ್ತಾರೆ.

ಗೋಕಾಕ್ ಕಲೆ:

ಬೆಳಗಾಂವ ಜಿಲ್ಲೆಯ ಗೋಕಾಕ್ ಅಂಟಿನ ಕರದಂಟಿಗೆ ಪ್ರಸಿದ್ಧವಾದಂತೆ ಇಲ್ಲಿಯ ಕಟ್ಟಿಗೆಯ ವರ್ಣರಂಜಿತ ತರಕಾರಿ, ಹಣ್ಣುಗಳನ್ನು ಹಾಗೂ ಆಟಿಕೆಯ ಗೊಂಬೆ ವಸ್ತುಗಳನ್ನು ತಯಾರಿಸುವುದರಲ್ಲಿ ಸಾಕಷ್ಟು ಕೀರ್ತಿಯನ್ನು ಪಡೆದುಕೊಂಡಿದ್ದಾರೆ. ಜಿನಗಾರ ಮನೆತನದ ವೃತ್ತಿಚಿತ್ರಕಾರರ ಮನೆತನಗಳು ಇಲ್ಲಿ ನೆಲೆಸಿವೆ. ಇವರು ಮೂಲತಃ ಶೋಲಾಪುರದ ಮಹಾರಾಜರ ಕಾಲದಲ್ಲಿ ಆಶ್ರಯವನ್ನು ಪಡೆದಿದ್ದರಂತೆ ನಂತರ ದಿನಗಳಲ್ಲಿ ಅಲ್ಲಿಂದ ಗೋಕಾಕಕ್ಕೆ ವಲಸೆ ಬಂದು ಇಲ್ಲಿ ನೆಲೆ ನಿಂತಿದ್ದಾರೆಂದು ಹಿರಿಯ ಕಲಾವಿದರಿಂದ ತಿಳಿದು ಬರುತ್ತದೆ.

ಹರಿವಾಳ (ಹಾಲವಾಳ) ಪೋಲಕಿ (ಪಾಲ್ಕಿ) ಹಾಗೂ ಹಾಲೆ ಮರ ಕಟ್ಟಿಗೆ ಬಳಸುತ್ತಾರೆ. ಕಾರಣ ಈ ಕಟ್ಟಿಗೆಗಳು ಅತ್ಯಂತ ಹಗುರವಾಗಿರುತ್ತವೆ. ಜೊತೆಗೆ ಬಿದಿರಿನಲ್ಲಿ ಮೈದಾ ಹಿಟ್ಟಿನ ಸರಿ ಕಲ್ಲುನಾರಿನ ಹಾಳೆ ಅಂಟು ಬಣ್ಣದ ದಾರ ಎಳೆ ಇನ್ನು ಮುಂತಾದ ವಸ್ತುಗಳನ್ನು ಉಪಯೋಗಿಸುತ್ತಾರೆ. ತಾವು ಆಯ್ಕೆ ಮಾಡಿಕೊಂಡ ಕಟ್ಟಿಗೆಯನ್ನು ಬೇಕಾದ ಆಕಾರಕ್ಕೆ ಕತ್ತರಿಸಿಕೊಂಡು ಚೆನ್ನಾಗಿ ಒಣಗಿಸಿ, ನಂತರ ಕೆತ್ತಿ ನುಣುಪು ಮಾಡಿಕೊಳ್ಳುತ್ತಾರೆ. ನಂತರ ಸುಣಬುರಲಿ ಹರಳನ್ನು ಪುಡಿಮಾಡಿ ದ್ರಾವಣ ತಯಾರಿಸಿ ಇದಕ್ಕೆ ಅಂಟು ಸೇರಿಸಿ ವಸ್ತುಗಳ ಮೇಲೆ ನಾಲ್ಕಾರಿ ಬಾರಿ ಲೇಪಿಸಿ, ಕಟ್ಟಿಗೆಯಲಿರುವ ಬಿರುಕು, ತಗ್ಗಗಳನ್ನು ಕಾಣದಂತೆ ಈ ಬಣ್ಣಗಳಿಂದ ತುಂಬಿಕೊಂಡು ಬಣ್ಣನ್ನು ತಿಳಿಯಾಗಿ ಲೇಪನ ಮಾಡುತ್ತ ಬೆಳಕು ನೆರಳಿನ ಛಾಯೆಯನ್ನು ವರ್ಣಗಳಿಂದ ಮೂಡಿಸುತ್ತಾರೆ. ಬಣ್ಣ ಮಾಸದಿರಲೆಂದು ಕೊನೆಯದಾಗಿ ವಾರ್ನಿಸನ್ನು ಸವರಲಾಗುತ್ತದೆ.

ತಾವು ತಯಾರಿಸುವ ವಸ್ತುಗಳಲ್ಲಿ ಹೆಚ್ಚಿನ ನೈಜತೆಯನ್ನು ತೋರಿಸಲು ಹಣ್ಣುಗಳನ್ನು ಅರ್ಧಹೋಳು ಮಾಡಿದಂತೆ ಕತ್ತರಿಸುತ್ತಾರೆ. ನೈಜವಾಗಿರುವ ಹಾಗೆ ಬಣ್ಣದ ವಿನ್ಯಾಸ ರೂಪಿಸಿ ಆ ಹಣ್ಣುಗಳ ಒಳಗಿನ ಬೀಜಗಳು ಸ್ಪಷ್ಟವಾಗಿ ಕಾಣುವಂತೆ ತೋರಿಸುತ್ತಾರೆ. ಮಾವು, ದ್ರಾಕ್ಷಿ, ನೆರಳೆ, ನಿಂಬೆ, ಚಿಕ್ಕು, ಗಜನಿಂಬೆ, ಸೇಬು, ಮೋಸಂಬಿ, ಬಾಳೆಹಣ್ಣು, ಕಲ್ಲಂಗಡಿ, ಅಂಜೂರ, ನೆಲ್ಲಿಕಾಯಿ, ಗೋಡಂಬಿ, ದಾಳಿಂಬೆ, ಹಣ್ಣುಗಳಲ್ಲಿ ವಿವಿಧ ಬಗೆಯ ತರಕಾರಿಗಳನ್ನು ನೋಡಿದರೆ ಅವು ಕಟ್ಟಿಗೆಯಿಂದ ಮಾಡಿದವುಗಳೆಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಅಷ್ಟೊಂದು ಸುಂದರವಾಗಿ ವರ್ಣವಿನ್ಯಾಸ, ಪರಿಣಿತಿ ಬಣ್ಣಗಳ ಮಿಶ್ರಣದಿಂದ ಇಲ್ಲಿಯ ಜನಪದ ಕಲಾವಿದರು ನೈಪುಣ್ಯತೆಯು ತೋರಿಸುವಲ್ಲಿ ಇಲ್ಲಿ ತಯಾರಾಗುವ ವಸ್ತುಗಳೆ ಸಾಕ್ಷಿಯಾಗಿವೆ.

ಕಲಘಟಗಿ:

ಧಾರವಾಡ ಜಿಲ್ಲೆಯ ಕಲಘಟಗಿ ಕೀರ್ತಿ ಕಲಾತ್ಮಕವಾದ ತೊಟ್ಟಿಲುಗಳಿಂದ ಪ್ರಸಿದ್ಧಿಯನ್ನೊಂದಿದೆ. ಮರದಿಂದ ಸುಂದರವಾಗಿ ಕೆತ್ತಿ ತಯಾರಿಸಿ ಅರಗಿನ ಬಣ್ಣಗಳಿಂದ ಅಲಂಕರಿಸಿದ ಇಲ್ಲಿನ ಮರದ ತೊಟ್ಟಿಲುಗಳು, ತೂಗುಮಂಚಗಳು, ವಿಗ್ರಹಗಳು, ಗಂಗೆ ಗೌರಿ ಮಂಟಪಗಳೂ, ಲತ್ತಿಗುಣಿ ಬಾರಕೋಲುಗುಣಿ, ಕುಡುಗೋಲು ಇನ್ನೂ ಮುಂತಾದವುಗಳು ದೇಶದಾದ್ಯಂತ ಕಲಾವಸ್ತುಗಳ ಮಳಿಗೆಗಳಲ್ಲಿ ಮಾರಾಟವಾಗುತ್ತಿವೆ.

ಕಲಘಟಗಿ ಸಾಹುಕಾರ ಮನೆತನದ ಜನಪದ ಕಲಾವಿದರ ಸುಂದರವಾದ ಕುಸುರಿ ಕೆತ್ತನೆ ಹಾಗೂ ವಿಶಿಷ್ಟವಾಗಿ ಅಲಂಕರಿಸುವ ಚಿತ್ರಗಾರಿಕೆ ಎಲ್ಲಿಯು ಕಾಣಸಿಗುವುದಿಲ್ಲ. ಕಲಘಟಗಿಯ ತೊಟ್ಟಿಲುಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ತೊಟ್ಟಿಲುಗಳಿಗೆ ಮೊಳೆ ಹೊಡೆಯದೇ ಹಾಗೆಯೇ ಜೋಡಿಸುವುದು ಇಲ್ಲಿಯ ವೈಶಿಷ್ಟ್ಯವಾಗಿದೆ. ರಾಮಾಯಣ, ಮಹಾಭಾರತದ, ನಂದಿ, ಮಕ್ಕಾ ಮಸೀದಿ, ಏಸುಕ್ರಿಸ್ತ, ಗ್ರಾಮ ದೇವತೆಗಳು, ಲಕ್ಷ್ಮೀ, ಸರಸ್ವತಿ ಹಾಗೂ ನಂದಿ ಹೀಗೆ ಎಲ್ಲಾ ಧರ್ಮಕ್ಕೆ ಸಂಬಂಧಿಸಿದಂತಹ ಚಿತ್ರಗಳನ್ನು ತೊಟ್ಟಿಲ ಮೇಲ ಕಲಾತ್ಮಕವಾಗಿ ಚಿತ್ರಿಸಿರುತ್ತಾರೆ.

ಈ ಬಣ್ಣದ ಚಿತ್ರಗಾರಿಕೆ ತೊಟ್ಟಿಲುಗಳು ಜನಪದ ಮೂಲದಿಂದ ಕೂಡಿರುತ್ತವೆ. ಬಣ್ಣ ಮಾಸದೆ ನೂರು ವರ್ಷಗಳವರೆಗೆ ಬಾಳಬಲ್ಲದು ಕಲಕೇರಿ, ಮುಂಡಗೋಡ, ದೇವಿಕೊಪ್ಪ ಮುಂತಾದ ಕಡೆಗಳಿಂದ ಸಾಗುವಾನಿ ಕಟ್ಟಿಗೆಯನ್ನು ಖರೀದಿಸುತ್ತಾರೆ. ತಾವು ತಯಾರಿಸುವ ತೊಟ್ಟಿಲಿನ ವಿನ್ಯಾಸಕ್ಕೆ ಕಟ್ಟಿಗೆಯನ್ನು ಸಿದ್ದಪಡಿಸಿಕೊಂಡು, ಶೇಡಿಮಣ್ಣನ್ನು ಕುಟ್ಟಿ ಪುಡಿ ಮಾಡಿ ಸೋಸಿ ನಂತರ ನೆನೆ ಹಾಕಿದ ಹುಣಸೆಯ ಬೀಜವನ್ನು ರುಬ್ಬಿ ಕುದಿಸಿ ಮಣ್ಣಿಗೆ ಕೂಡಿಸಿದ ಈ ಮಿಶ್ರಣವನ್ನು ತೊಟ್ಟಿಲು ಕಟ್ಟಿಗೆಗೆ ಹಚ್ಚಿ ಬಿಸಿಲಲ್ಲಿ ಒಣಗಿಸುತ್ತಾರೆ. ನಂತರ ಅರಗಿನ ರಾಳಕ್ಕೆ ವಿವಿಧ ಬಗೆಯ ವನಸ್ಪತಿಗಳನ್ನು ಸೇರಿಸಿ ಬಣ್ಣಗಳನ್ನು ತಯಾರಿಸಿಕೊಂಡು ತೊಟ್ಟಿಲಿನ ಕಟ್ಟಿಗೆ ಲೇಪಿಸುತ್ತಾರೆ. ಹೀಗೆ ಕುಟುಂಬದ ಎಲ್ಲಾ ಸದಸ್ಯರು ಈ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಗಂಡಸರು ಚಿತ್ರಗಳನ್ನು ಬಿಡಿಸಿದರೆ ಹೆಂಗಸರು ಆ ಚಿತ್ರಗಳಿಗೆ ಬಣ್ಣ ತುಂಬುತ್ತಾರೆ. ಇಲ್ಲಿ ತೊಟ್ಟಿಲುಗಳು ಎರಡೂ ಪ್ರಕಾರಗಳಲ್ಲಿ ತಯಾರಿಸುತ್ತಾರೆ. ಒಂದು ನಿಲ್ಲುವ ತೊಟ್ಟಿಲು ಇನ್ನೊಂದು ಕಟ್ಟಿ ತೂಗುವ ತೊಟ್ಟಿಲು.

ಕಿನ್ನಾಳ ಕಲೆ:

ರಾಯಚೂರು ಜಿಲ್ಲೆಯ ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮ ಇಲ್ಲಿ ವಿಜಯನಗರ ಅರಸರ ಕಾಲದಿಂದಲೂ ಕಲಾವಿದರು ತಮ್ಮ ಸೃಜನಶೀಲ ಪ್ರತಿಭೆಯನ್ನು ತೋರಿಸಿಕೊಂಡು ಬಂದಿದ್ದಾರೆ. ಅಲ್ಲದೆ ಈ ಜನಪದ ಚಿತ್ರಕಾರರು ಹಿಂದೆ ದೇವಾಲಯಗಳಲ್ಲಿ ಸಾಕಷ್ಟು ಭಿತ್ತಿ ಚಿತ್ರಗಳನ್ನು ನಿರ್ಮಿಸಿದ್ದಾರೆ ಎನ್ನುವುದು ತಿಳಿದು ಬರುತ್ತದೆ.

ಕಿನ್ನಾಳದ 'ಆಟಿಕೆಗಳು' ತುಂಬ ಪ್ರಸಿದ್ಧವಾಗಿವೆ. ಮೊದಲು ಗ್ರಾಮ ದೇವತೆಗಳಿಗೆ ಬಣ್ಣದ ಲೇಪನ ಮಾಡುತ್ತಿದ್ದ ಇಲ್ಲಿಯ ಕಲಾವಿದರು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ತಮ್ಮ ಕಲಾಕೃತಿಗಳಿಗೆ ವೈವಿಧ್ಯತೆಯನ್ನು ತಂದುಕೊಂಡಿದ್ದಾರೆ. ಬೊಂಬೆಗಳ ಕೆತ್ತನೆಗೆಲಸ, ದೇವರ ಪಲ್ಲಕ್ಕಿ, ಮಂಟಪ, ಷೋಕೇಸ್, ಒಡವೆ ಪೆಟ್ಟಿಗೆಗಳು, ಪಿಠೋಪಕರಣಗಳು, ಪಕ್ಷಿಗಳು, ಪ್ರಾಣಿಗಳು, ಸ್ತ್ರೀಪುರುಷ ಮುಖಗಳು, ದ್ವಾರಪಾಲಕ ಮೂರ್ತಿಗಳು, ಪಲ್ಲಕ್ಕಿ, ಛತ್ರಿ, ಚಾಮರಗಳು ಇತ್ಯಾದಿಗಳನ್ನು ತಯಾರಿಸುತ್ತಾರೆ. ಇಲ್ಲಿನ ಕಲಾಕೃತಿಗೆ ಬಳಸುವ ಬಣ್ಣಗಳು ಎರಡು ರೀತಿಯಲ್ಲಿವೆ. ಒಂದು ಬಾಳಪ್ಪನ ಬಣ್ಣ ಇನ್ನೊಂದು ಲಜ್ಜಾವರ ಬಣ್ಣ. ಕಟ್ಟಿಗೆಯ ತುಂಡು, ತಟ್ಟಿನಗುಂಜು ಮಣ್ಣು, ಕಟ್ಟಿಗೆಯ ಪಾಟಿ, ಹಾಗೂ ಹುಣಸೆಯ ಸರಿ ಮುಂತಾದ ವಸ್ತುಗಳನ್ನು ಬಳಸಿ ಕಲಾಕೃತಿಗಳನ್ನು ನಿರ್ಮಿಸುತ್ತಾರೆ.

ಬಾಳಪ್ಪನಬಣ್ಣ: ಈ ಬಣ್ಣವು ಬಳಪದಿಂದ ತಯಾರಿಸಿದ ಬಣ್ಣವಾಗಿದೆ. ಜನಪದರ ಬಾಯಲ್ಲಿ ಬಾಳಪ್ಪನ ಬಣ್ಣವಾಗಿದೆ. ಬಳಪದ ಕಲ್ಲನ್ನು ನೀರಿನಲ್ಲಿ ನೆನೆಸಿಟ್ಟು, ಇದನ್ನು ಅರೆದು ಅಂಚು ಹಾಕಿ ಸೋಸುತ್ತಾರೆ. ಈ ಸೋಸಿದ ದ್ರಾವಣವನ್ನು ಆಟಿಕೆಯ ವಸ್ತುಗಳಿಗೆ ಲೇಪಿಸುತ್ತಾರೆ.

ಲಜಾವರ ಬಣ್ಣ: ಕಿನ್ನಾಳದ ಕಲಾವಿದರು ಈ ಬಣ್ಣಕ್ಕೆ ವಿಶೇಷ ಸ್ಥಾನವನ್ನು ಕೊಟ್ಟಿದ್ದಾರೆ. ಹುಟ್ಟಿದ ತವರಕ್ಕೆ ಮೀನಸರಿ ಹಾಕಿ ಹದ ಬರುವಂತೆ ಮಾಡುತ್ತಾರೆ. ಇದನ್ನು ಸ್ವಲ್ಪ ಸಮಯ ನೀರಿನಲ್ಲಿ ನೆನೆಯಿಟ್ಟು ನಂತರ ದ್ರಾವಣವನ್ನು ಸೇರಿಸುತ್ತಾರೆ. ಹೀಗೆ ಲಜಾವರ ಬಣ್ಣವನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಗೊಂಬೆಗಳನ್ನು ಮಣ್ಣಿನಲ್ಲೂ ಕಟ್ಟಿಗೆಯಲ್ಲೂ ಹಾಗೂ ಕಟ್ಟಿಗೆ ಮಣ್ಣಗಳೆರೆನ್ನು ಬಳಸಿ ಗೊಂಬೆಯನ್ನು ತಯಾರಿಸುತ್ತಾರೆ. ಮಕ್ಕಳ ಆಡಿಕೆ, ತೊಟ್ಟಿಲು, ಅಲೆ ಕುದುರೆಯಂತಹ ಆಡಿಕೆಯ ವಸ್ತುಗಳನ್ನು ಕಿನ್ನಾಳದ ಕಲಾಕಾರೆಂದೆ ಕೌಶಲ್ಯವೆಂದು ಗುರುತಿಸುವಷ್ಟು ಸ್ವಂತಿಕೆ ವಿಶೇಷ ಲಕ್ಷಣಗಳನ್ನು ಇವರ ಕಲಾಕೃತಿಗಳಲ್ಲಿ ಕಾಣಬಹುದು, ಇಂದಿಗೂ ತಯಾರಾದ ಕಲಾತ್ಮಕ ವಸ್ತುಗಳು ದೇಶ-ವಿದೇಶಗಳಲ್ಲಿ ಸಂಗ್ರಹಗೊಂಡಿವೆ.

ಸೂತ್ರದ ಗೊಂಬೆ:

ಸೂತ್ರದ ಗೊಂಬೆಯಾಟವು ಕರ್ನಾಟಕದಲ್ಲಿ ೧೨ನೇಯ ಶತಮಾನದಷ್ಟು ಹಿಂದಿನಿಂದಲೇ ಪ್ರಚಲಿತದಲ್ಲಿದ್ದ ವಿವರವು ಕೆಲವು ವಚನಗಳಲ್ಲಿ ದೊರೆಯುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಪ್ರಾಚೀನ ಸೂತ್ರದ ಗೊಂಬೆಯಾಟವು ರಾಜಸ್ಥಾನದ ಗೊಂಬೆಯಾಟದ ಮುಂದುವರೆದ ಭಾಗವಾಗಿದೆ. ಇಂತಹ ಪ್ರದರ್ಶನಾತ್ಮಕ ಕಲೆಗಳು ಜಗತ್ತಿನ ಮೂಲೆ ಮೂಲೆಗಳಲ್ಲೂ ಕಂಡು ಬರುತ್ತವೆ. ಸೂತ್ರದ ಗೊಂಬೆಯಾಟದ ಕಲೆ ಇಂದು ಪ್ರದರ್ಶನಾತ್ಮಕ ಕಲೆಯಾಗಿ ಜನಮನವನ್ನು ಆಕರ್ಷಿಸುತ್ತದೆ.

ಕರ್ನಾಟಕದಲ್ಲಿ ಹಾಲವಾಣ ಕಡವಲ, ಅತ್ತಿ ಮರದಿಂದಲು ಸಿಬಿರು ಬಾರದ ಹಗುರವಾದ 'ಮರಾಲೆ' ಮರದ ಕಟ್ಟಿಗೆ ಗೊಂಬೆಗಳ ರಚನೆಯಲ್ಲಿ ಯೋಗ್ಯವಾದ ಮಂಗಳಾಗಿವೆ. ಸೂತ್ರದ ಗೊಂಬೆಗಳ ತಯಾರಿಸುವ ಹಂತದಲ್ಲಿ ತಾವು ತಯಾರಿಸುವ ಗೊಂಬೆಗಳ ಗಾತ್ರಕ್ಕೆ ಕಟ್ಟಿಗೆಯನ್ನು ಸಿದ್ದಪಡಿಸಿಕೊಳ್ಳುತ್ತಾರೆ. ಹಸ್ತ ಮುಂಗೈ ತೋಳು, ಎದೆ. ತೊಡೆ, ಮುಂಗಾಲು ಹಾಗೂ ಪಾದಗಳನ್ನು ಸಿದ್ಧಗೊಳಿಸಿಕೊಳ್ಳಲಾಗುತ್ತದೆ. ಈ ಗೊಂಬೆಗಳ ತಯಾರಿಕೆಯಲ್ಲಿ ಮಹತ್ವದ ಹಂತವೆಂದರೆ ಕೀಲು ಜೋಡಿಸುವಿಕೆ. ಇಲ್ಲಿ ಕನಿಷ್ಟ ಆರು ಸೂತ್ರಗಳನ್ನು ಜೋಡಿಸಲಾಗುತ್ತದೆ. ಮುಖದ ಎಡಬಲಕ್ಕೆ ಎರಡು ಒಂದೇ ಕೋಲಿಗೆ, ಕೈಗಳಿಗೆ ಕಟ್ಟಿದ ಸೂತ್ರಳು, ಕಾಲಿಗೆ ಕಟ್ಟಿದ ಎರಡು ಸೂತ್ರಗಳು ಮೂರನೆಯ ಕೋಲಿಗೆ ಗೊಂಬೆಯ ಅಂಗಾಂಗಳ ಚಲಿಸುವಿಕೆಗೆ ಅನುಗುಣವಾಗಿ ಸೂತ್ರದ ಜೋಡಣೆ ಮಾಡಲಾಗುತ್ತದೆ. ಸೂತ್ರ ದಾರಗಳಿಗೆ ಜವಿ, ಕಪ್ಪುದಾರ, ತಂತಿ, ನಾರಾಚಗಳನ್ನು ಬಳಸುತ್ತಾರೆ.

ವರ್ಣಾಲಂಕಾರ, ವೇಷಭೂಷಣಗಳ ವಿನ್ಯಾಸವು ಸೂತ್ರದ ಗೊಂಬೆಯ ರಚನೆಯ ಇನ್ನೊಂದು ಮಹತ್ವದ ಹಂತವೆನ್ನಬಹುದು. ಇಲ್ಲಿ ಒಟ್ಟಾರೆಯಾಗಿ ಬೊಂಬೆಯ ಮುಖಕ್ಕೆ ಹೆಚ್ಚಿನ ಮಹತ್ವವನ್ನು ಕೊಡಲಾಗುತ್ತದೆ. ನಯಗೊಳಿಸಿದ ಕಟ್ಟಿಗೆ ಬಿಡಿಭಾಗಗಳಿಗೆ ಹರಿದಾಳ, ಬಿಳಿ, ನೀಲಿ, ಕೆಂಪು ಈ ಬಣ್ಣಗಳ ಜೊತೆಗೆ ಗಚ್ಚಿನ ಎಣ್ಣೆ, ಅರಗು, ಬಳಸಿಕೊಂಡು ಮುಖಕ್ಕೆಲ್ಲ ಹರಿದಾಳದ ಲೇಪನ ಮಾಡಿ ನಂತರ ಕಣ್ಣಿನ ಅಲಂಕಾರ ಮಾಡುತ್ತಾರೆ. ಆಯಾ ಪಾತ್ರಗಳ ಸ್ವಭಾವಕ್ಕೆ ಅನುಗುಣವಾಗಿ ಬಣ್ಣವನ್ನು ಅತ್ಯಂತ ಆಕರ್ಷಕವಾಗಿ ಲೇಪನ ಮಾಡುತ್ತಾರೆ. ಇಲ್ಲಿ ಗೊಂಬೆಯ ಮುಖ, ಪಾದ, ಹಸ್ತ ಮುಂಗೈಗಳಿಗೆ ಮಾತ್ರ ವರ್ಣಲೇಪನ ಮಾಡಿ, ಗೊಂಬೆಯ ಶರೀರಕ್ಕೆ ಆಯಾ ಪಾತ್ರದ ಗುಣಧರ್ಮಕ್ಕೆನುಗುಣವಾಗಿ ವೇಷಭೂಷಣವನ್ನು ವಿನ್ಯಾಸಗೊಳಿಸುವಲ್ಲಿ ಇಲ್ಲಿಯ

ಚಿತ್ರಕಾರನ ಪರಿಶ್ರಮ, ಕಲ್ಪನಾ ಶೀಲತೆಗಳು ಎದ್ದು ಕಾಣುತ್ತವೆ. ಮುಖಕ್ಕೆ ಉಪಯೋಗಿಸಿದ ಬಣ್ಣಗಳು ಹೆಚ್ಚು ಬಾಳಿಕೆ ಬರುವ ಸಲುವಾಗಿ ಬೇವಿನ ಅಂಟು ಲೇಪಿಸುತ್ತಾರೆ. ಕೃಷ್ಣ ಪರಶುರಾಮ ಶ್ರೀರಾಮ, ಅಂಜನೇಯ, ಸೀತೆ, ಮುಂತಾದ ಗೊಂಬೆಗಳ ಮುಖಕ್ಕೆ 'ನೀಲಿಬಣ್ಣ' ಉಗ್ರ ಪಾತ್ರಗಳ ಗೊಂಬೆಗಳಿಗೆ 'ಕೆಂಪುವರ್ಣ' ರಾಕ್ಷಸ ಮುಂತಾದ ಪಾತ್ರಗಳಿಗೆ 'ಕಪ್ಪುಬಣ್ಣ' ಲೇಪನ ರೌದ್ರತೆಯನ್ನು ಬಿಂಬಿಸಲು ಕಪ್ಪು ಬಿಳಿ ಬಣ್ಣದ ಚುಕ್ಕೆ ಇಡುವುದು ಇಲ್ಲಿ ಗಮನಿಸಬಹುದಾಗಿದೆ. ಕೆಲವು ಗೊಂಬೆಗಳ ಹಣೆಯ ಮೇಲೆ ಬಿಳಿ ಕೆಂಪು ನಾಮವನ್ನು ಹಾಗೂ ವಿಭೂತಿ ಗಂಧದ ಬೊಟ್ಟುಗಳನ್ನು ಹಚ್ಚಲಾಗುತ್ತದೆ. ಹೆಚ್ಚು ಹೊಳಪನ್ನು ಸ್ಥಿರತೆಯನ್ನು ಕಾಪಾಡಲು ಕೋಳಿ ಮೊಟ್ಟೆಲು ಬಿಳಿಯ ದ್ರಾವಣವನ್ನು ಸಹ ಉಪಯೋಗಿಸುತ್ತಾರೆ.

ತೊಗಲು ಗೊಂಬೆ:

ತೊಗಲುಗೊಂಬೆಯ ಚಿತ್ರಕಲೆಯಾಟ ಅಪ್ಪಟ ಜನಪದ ಮೂಲದಿಂದ ಜನಪದೀಯ ಅಂಶಗಳಿಂದ ಕೂಡಿ ಬೆಳೆದು ಬಂದಿದೆ. ಜಗತ್ತಿನ ಜನಪದ ವರ್ಣಚಿತ್ರಕಲಾ ಪ್ರಪಂಚಕ್ಕೆ ಅಮೂಲ್ಯ ಕೊಡುಗೆ ಈ ತೊಗಲುಗೊಂಬೆ ಚಿತ್ರಕಲೆ, ತೆರೆಯ ಹಿಂದೆ ವರ್ಣರಂಜಿತ ಮಾಯಾ ಲೋಕವನ್ನು ಸೃಷ್ಟಿಸುವ ಅದ್ಭುತ ಕೈ ಚಳಕದ ಈ ಕಲೆ ಇಡೀ ಕುಟುಂಬದ ಜನರನ್ನು ತೊಡಗಿಸಿಕೊಳ್ಳುವ ಜನ ಸಮುದಾಯದ ಕಲೆಯಾಗಿದೆ.

ತೊಗಲುಗೊಂಬೆ ಚಿತ್ರಗಳನ್ನು ಮೇಕೆ, ಕುರಿ, ಎಮ್ಮೆ ಕತ್ತೆ, ಒಂಟೆಯ ಹಾಗೂ ಹುಲಿಯ ಚರ್ಮವನ್ನು ಉಪಯೋಗಿಸಿ ರಚಿಸಲಾಗುತ್ತದೆ ಕಪು, ಹಳದಿ, ಕೆಂಪು, ನೀಲಿ, ಹಸಿರು, ಮದರಂಗಿ, ಬಣ್ಣಗಳನ್ನು ಬಳಸಲಾಗುತ್ತದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಮಳೆಗಾಲ ಹೊರತುಪಡಿಸಿ ಈ ಆಟವನ್ನು ಪ್ರದರ್ಶನ ಮಾಡುತ್ತಾರೆ. ರಂಗದ ಮೇಲೆ ರಾತ್ರಿ ಹೊತ್ತು ದೀಪದ ಬೆಳಕಿನಲ್ಲಿ ಹಿಂದೆ ವಾದ್ಯಮೇಳದೊಂದಿಗೆ ವಿವಿಧ ಕಥಾನಕಗಳನ್ನು ಆಡಿಸುತ್ತಾರೆ. ಕರ್ನಾಟಕದ ತೊಗಲುಗೊಂಬೆಯ ಚಿತ್ರಗಳಲ್ಲಿ ಎರಡು ರೀತಿ ವಿಂಗಡಣೆಯನ್ನು ಮಾಡಬಹುದಾಗಿದೆ. ಹಳೆಯ ಮೈಸೂರು ಭಾಗದ 'ತೆಂಕಲ' ಪಾಯದ ತೊಗಲುಗೊಂಬೆ ಚಿತ್ರಗಳು ಹಾಗೂ ಉತ್ತರ ಕರ್ನಾಟಕದ ಬಡಗಲಪಾಯದ ತೊಗಲುಗೊಂಬೆ ಚಿತ್ರಗಳು, ತೊಗಲಿನಲ್ಲಿ ವಿವಿಧ ರೀತಿಯ ಚಿತ್ರಗಳಾದ ಪ್ರಾಣಿಗಳು, ಪಕ್ಷಿಗಳು, ಪುರುಷ, ಸ್ತ್ರೀ, ನಿಸರ್ಗದ ದೃಶ್ಯಗಳು, ಯುದ್ಧದ ದೃಶ್ಯಗಳು ಬಿಲ್ಲು ಬಾಣದಂತಹ ವಸ್ತು ವೈವಿಧ್ಯತೆಗಳ ಚಿತ್ರಗಳು, ರಾಮಾಯಣ, ಮಹಾಭಾರತ ಸಾಮಾಜಿಕ

ಪಿನ್ನೆಲೆ ಕಡೆಗಳು ಹೀಗೆ ಹತ್ತು ಹಲವು ರೀತಿಯ ಚಿತ್ರಗಳನ್ನು ತೊಗಲಿನಲ್ಲಿ ಕೊರೆದು ವಿವಿಧ ಬಗೆಗೆಯ ವರ್ಣಲೇಪನಮಾಡಿ ತೊಗಲಿನ ಚಿತ್ರಗಳನ್ನು ರಚನೆ ಮಾಡುತ್ತಾರೆ. ತೊಗಲುಗೊಂಬೆಯಾಟವನ್ನು ಕರ್ನಾಟಕದಲ್ಲಿ ಆಟವಾಡಿಸುವ ವಿಶೇಷ ಜನಾಂಗವೊಂದಿದ್ದು ಇವರನ್ನು "ಕಿಳ್ಳೆ ಕ್ಯಾತ"ರೆಂದು ಕರೆಯುತ್ತಾರೆ. ಇವರ ಆಟವನ್ನು 'ಕಟಬರಾಟ' ಗೊಂಬೆಯಾಟ 'ಕಿಳ್ಳಕ್ಯಾತರಾಟ' ಚಿತ್ರಮರಾಠಿಗರಾಟ' ಕಥಾನಾಯಕರಾಟ' 'ತೋಲುಮೊಮ್ಮಲಾಟ'ವೆಂದು ಹೆಸರುಗಳಿಂದ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ತೊಗಲುಗೊಂಬೆಯಾಡಿಸುವವರು ಪಾತ್ರಕ್ಕೆ ತಕ್ಕಂತೆ ಗೆಜ್ಜೆನಾದ ಮಾತಿನ ಚಕಮುಖಿ ಸಂಗೀತದ ಮೇಳವು ಪರದೆಯ ಹಿಂದಿನ ಬೆಳಕಿನಲ್ಲಿರುವ ಚಿತ್ರಗಳು ಈ ಕಲೆಗೆ ಜೀವಂತಿಕೆಯ ಸ್ವರೂಪವನ್ನು ತೋರಿಸುತ್ತದೆ.

ಬೆಂಗಳೂರು, ನಾಗಮಂಗಲ, ಶ್ರವಣ ಬೆಳಗೋಳ, ಉಡುಪಿ, ಬಂಟ್ವಾಳ, ಕಾರ್ಕಳ ಮುಂತಾದ ಸ್ಥಳಗಳು ಲೋಹ ವಸ್ತುಗಳು ತಯಾರಿಕಾ ಕೇಂದ್ರಗಳಾಗಿವೆ. ಕಾರ್ಕಳವು ಜೈನ ಕೇಂದ್ರವಾದ್ದರಿಂದ ಅಲ್ಲಿ ವಿಶಿಷ್ಟ ಜೈನ ವಿಗ್ರಹಗಳು ತಯಾರಾಗುತ್ತವೆ. ಮಂಗಳೂರು ಕಂಚಿನ ವಸ್ತುಗಳಿಗೆ ಹೆಸರಾದುದು. ಇಲ್ಲಿ ಗೃಹೋಪಯೋಗಿ ವಸ್ತುಗಳು ತಯಾರಾಗುತ್ತವೆ. 'ಮಿಲ್ಲಿ' ಎಂದು ಕರೆಯಲ್ಪಡುವ ಮುಚ್ಚಳವಿರುವ ಹಾಲಿನ ಪಾತ್ರೆ, ಉದ್ದನೆಯ ಹಿಡಿಯಿರುವ ವೃತ್ತಾಕಾರದ ಬೋಗುಣಿಗಳು ಇಲ್ಲಿನ ವಿಶಿಷ್ಟ ವಸ್ತುಗಳು, ಪೂಜಾ ಸಲಕರಣಗಳಿಗೆ ಚಿಕ್ಕ ಚಿಕ್ಕ ದೇವರ ವಿಗ್ರಹಗಳಿಗೆ ಉಡುಪಿ ಪ್ರಸಿದ್ಧವಾಗಿದೆ. ದಿನಬಳಕೆಯ ಉಪಯುಕ್ತ ವಸ್ತುಗಳು ಹಾಗೂ ಗಾಜಿನ ಮೇಲೆ ಬೀರುಡುಗಳಲಿ ಅಲಂಕಾರಕ್ಕೆಂದ ಜೋಡಿಸುವ ವಸ್ತುಗಳು ಇಲ್ಲಿ ತಯಾರಾಗುತ್ತವೆ.

ದಿನಬಳಕೆಯ ಉಪಯುಕ್ತ ವಸ್ತುಗಳಿಂದ ಹಿಡಿದು, ಅಲಂಕಾರದ ಉದ್ದೇಶದಿಂದ ಇಂದು ತಯಾರಾಗುತ್ತಿರುವ ಎಲ್ಲಾ ವಸ್ತುಗಳು ಒಂದಲ್ಲ ಒಂದು ರೀತಿ ಕೌಶಲ್ಯದಿಂದಲೂ ಕಲಾತ್ಮಕತೆಯಿಂದಲು ಕೂಡಿರುತ್ತವೆ. ಸಾಮಾಜಿಕ ಉಪಯೋಗದ ವಸ್ತುವೊಂದು ಕುಶಲಕರ್ಮಿಯ ಕಲ್ಪನೆ, ಬುದ್ಧಿ, ಕೈಚಳಕ ಮತ್ತು ತಂತ್ರಜ್ಞಾನ ದಿಂದಲೇ ಹುಟ್ಟು ಪಡೆಯಬಹುದಾದರೂ ಈ ಸೃಷ್ಠಿ ಕ್ರಿಯೆಯಲ್ಲಿ ಆ ಕಾಲದ ಸಮಷ್ಠಿ. ಬದುಕಿನ ಆಶೋತ್ತರಗಳು ಪ್ರತಿಫಲನಗೊಳ್ಳುತ್ತವೆ.



ಗೊಂಬೆ ತಯಾರಿಕೆಯ ಪರಿಕರಗಳು





ಹಾಲೆಮರದ ದಿಮ್ಮಿಗಳು



ಗೊಂಬೆಗಳ ತಯಾರಿಕೆಗೆ ಬಳಸುವ ಸಿದ್ಧಗೊಂಡಿರುವ ಹಾಲೆಮರ




ಪಟ್ಟಯಲ್ಲಿ ಗೊಂಬೆಗಳ ತಯಾರಿಕೆಯಲ್ಲಿ
ನಿರತರಾಗಿರುವ ಮಹಿಳೆ





ಹಾಲೆ ಮರವನ್ನು ಬಚಿಯಿಂದ
ಕೆತ್ತುತ್ತಿರುವುದು




ವಿದ್ಯುತ್ ಯಂತ್ರದಿಂದ ಕೆಲಸ ಮಾಡುತ್ತಿರುವ ಕುಶಲ ಕರ್ಮಿ



ವಿದ್ಯುತ್ ಯಂತ್ರದಿಂದ ಕೆಲಸ ಮಾಡುತ್ತಿರುವ ಮಹಿಳೆ



ಗೊಂಬೆಗಳ ತಯಾರಿಕೆಯಲ್ಲಿ ಕುಶಲಕರ್ಮಿಗಳು



ಜಾಮಿತಿಕ ಉಪಕರಣಗಳ ಮಾರಾಟ ಮಳಿಗೆ



ಬಣ್ಣಗಳು ತಯಾರಿಗೆ ಬಳಸುವ ಪದುಗು



ಬಣ್ಣಗಳು



ಬಣ್ಣಗಳು ತಯಾರಿಸುತ್ತಿರುವುದು



ಬಣ್ಣಗಳು ತಯಾರಿಸುತ್ತಿರುವುದು





ಗಣರಾಜ್ಯೋತ್ಸವ ಸ್ತಬ್ಧ ಚಿತ್ರ ಹೋಲುವಂತೆ ಕಟ್ಟಿಗೆಯಲ್ಲಿ ನಿರ್ಮಿಸಿರುವ ಗೊಂಬೆಗಳು



ಗಣರಾಜ್ಯೋತ್ಸವ ಸ್ತಬ್ಧ ಚಿತ್ರ 26 ಜನವರಿ 2015



ಮೈಸೂರಿನ ದಸರಾ ಹಬ್ಬದ ದೃಶ್ಯದ ಅಂಬಾರಿ ಗೊಂಬೆಗಳು

ಅಧ್ಯಾಯ – ನಾಲ್ಕು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ವಸ್ತು ವೈವಿಧ್ಯತೆ

ಅಧ್ಯಾಯ – ನಾಲ್ಕು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ವಸ್ತು ವೈವಿಧ್ಯತೆ

ಚನ್ನಪಟ್ಟಣ ಬಣ್ಣದ ಗೊಂಬೆಗಳ ತಯಾರಿಕೆ ನಮ್ಮ ಭಾರತದಲ್ಲಿ ಮಾತ್ರವಲ್ಲದೆ ದೇಶ ವಿದೇಶದಲ್ಲಿ ಸಹ ಸಾಕಷ್ಟು ಜನಪ್ರೀಯತೆಯನ್ನು ಪಡೆದಿದೆ. 'ಚನ್ನಪಟ್ಟಣ ಚಿತ್ತಾರ ಗೊಂಬೆ'ಗಳ ನೈಜತೆ ಅನೇಕ ವರ್ಷದಿಂದ ಹೆಸರು ಪಡೆದಿದೆ. ಗೊಂಬೆಗಳ ತಯಾರಿಕೆ ಮತ್ತು ಬಣ್ಣಗಳ ಬಳಕೆಯನ್ನು ಸ್ಥೂಲವಾಗಿ ಗಮನಿಸಲಾಗಿದೆ. ಇಲ್ಲಿ ಗೊಂಬೆಯ ತಯಾರಿಕೆಯಲ್ಲಿ ಬಳಸುವಂತ ಅನೇಕ ರೀತಿಯ ವಸ್ತು ವಿಷಯಗಳ ಕುರಿತು ವಿವರಿಸಲಾಗಿದೆ.

ಜಾನಪದ ಮಾದರಿಯಲ್ಲಿನ ವಿವಿಧ ಬಗೆಯ ಬೊಂಬೆಗಳನ್ನು ತಯಾರಿಸುವ ಇಲ್ಲಿನ ಕುಶಲ ಕರ್ಮಿಗಳು ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಮೈಗೂಡಿಸಿಕೊಂಡಿದ್ದಾರೆ. ಕೆತ್ತನೆಯ ವಿನ್ಯಾಸ, ಶೈಲಿಯಲ್ಲಿ ಸುಧಾರಣೆ ಮಾಡಿಕೊಂಡಿದ್ದಾರೆ. ಆಟಿಕೆಗಳ ಜತೆಗೆ ಬಳಕೆಗೆ ಪೂರಕವಾದ ಪದಾರ್ಥಗಳನ್ನು ಇಲ್ಲಿ ತಯಾರಿಸಲಾಗುತ್ತದೆ. ಗ್ರಾಹಕರಿಗೆ ಬೇಕಾದಂತಹ ಬೊಂಬೆ ಮತ್ತು ಪದಾರ್ಥಗಳು ಕುಶಲಕರ್ಮಿಗಳು ಮಾಡಿಕೊಡುತ್ತಾರೆ. ಗೃಹಲಂಕಾರದ ವಸ್ತುಗಳು ಬಳಕೆಗೆಯೋಗ್ಯ ವಸ್ತುಗಳು, ಹಾಗೂ ಕಾರ್ಪೋರೇಟ್ 'ಗಿಫ್ಟ್' ಪದಾರ್ಥಗಳ ಹೆಚ್ಚಿನ ಬೆಲೆ ಇದೆ. ಬೇಡಿಕೆ ಆಧಾರದ ಮೇಲೆ ಈ ಬೊಂಬೆಗಳನ್ನು ತಯಾರಿಸಲಾಗುತ್ತದೆ. ಬೊಂಬೆಗಳ ನುಣಪಾದ ಕೆತ್ತನೆಗೆ 'ಆಲೆ' ಮರವನ್ನು ಇಲ್ಲಿನ ಕುಶಲಕರ್ಮಿಗಳು ಹೆಚ್ಚಾಗಿ ಬಳಸುತ್ತಾರೆ.

ಪ್ರಾದೇಶಿಕ ಮಾರುಕಟ್ಟೆಯಲ್ಲಿ ಈ ಕರಕುಶಲ ವಸ್ತುಗಳು ವಾರ್ಷಿಕ ವಹಿವಾಟು ೪೦ ರಿಂದ ೫೦ ಕೋಟಿ ಇದ್ದರೆ ಡೀಮ್ಡ್ ಎಕ್ಸಪೋರ್ಟ (ವಿವಿಧ ದೇಶಗಳಿಗೆ ರಫ್ತು ಮಾಡುವ

ಏಜೆನ್ಸಿ)ಗಳ ವಹಿವಾಟು ೧೦೦ ಕೋಟಿ ಮೀರಿದೆ. ಹಲವು ಕಾರ್ಪೊರೇಟ ಸಂಸ್ಥೆಗಳೂ ಮಾದರಿ 'ಉಡುಗೊರೆ'ಗಳನ್ನು ಖರೀದಿಸುತ್ತವೆ. ಕೆಲವು ಸಂಸ್ಥೆಗಳು ಗಣಿತ, ವಿಜ್ಞಾನ ಬೋಧನೆಗೆ ನೆರವಾಗುವ ಶೈಕ್ಷಣಿಕ ಮಾದರಿ ವಸ್ತುಗಳಿಗೂ ಬೇಡಿಕೆ ಸಲ್ಲಿಸುತ್ತವೆ. ಮಕ್ಕಳ ಆಟದ ಜತೆಗೆ ಪಾಠವನ್ನೂ ಕಲಿಯುವುದಕ್ಕೆ ಪೂರಕವಾಗುವಂತಹ ಆಟಿಕೆಗಳಿಗೆ ಹೆಚ್ಚಿನ ಬೇಡಿಕೆ ಬರುತ್ತಿದೆ. ಎಂಬುದು ಇಲ್ಲಿಯ ಕುಶಲ ಕರ್ಮಿಗಳು ಹೇಳುತ್ತಾರೆ.

ಚನ್ನಪಟ್ಟಣ ಹಾಗೂ ಸುತ್ತ-ಮುತ್ತಲಿನಲ್ಲಿ ಸಾವಿರಕ್ಕೂ ಹೆಚ್ಚು ಬಗೆಯ ಗೊಂಬೆಗಳು ಸಿದ್ಧವಾಗುತ್ತವೆ. ೧೦ ರಿಂದ ೧೦೦೦ ರೂಪಾಯಿಗಳ ಬೆಲೆ ಬಾಳುವ ಹಾಗೂ ದೊಡ್ಡ ಗಾತ್ರದ ಗೊಂಬೆಗಳ ಕೆತ್ತನೆಯಲ್ಲಿಯೂ ಇಲ್ಲಿನ ಕುಶಲ ಕರ್ಮಿಗಳೂ ನಿಪುಣರು, ಬಣ್ಣದ ಬುಗುರಿ, ಆಕರ್ಷಕ ರೈಲು, ಇದನ್ನೇ ಮಿಶೆಲ್ ಒಬಾಮ ಅವರು ದೆಹಲಿಯಲ್ಲಿ ಖರೀದಿಸಿದ್ದು. ದಿಬ್ಬಣ, ಬ್ಯಾಂಡ್‌ಸೆಟ್, ದಸರಾ ಬೊಂಬೆ ದೇವರ ಗೋಪುರ, ಮರದ ಕೀ ಬಂಚ್, ಕಿವಿಯೋಲೆ, ಬಳೆ, ನೆಕಲೆಸ್, ಚೂಡಿದಾರ ಮೇಲೆ ಬಳಸುವ ಅಲಂಕಾರದ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಜೀಕುವ ಆಟದ ಕುದುರೆ, ಕ್ರಿಸ್‌ಮಸ್ ಗಿಡ, ಎತ್ತಿನ ಬಂಡಿ, ರೈತರು ಬಳಸುವ ಕುಡುಗೋಲಿನ ಹಿಡಿಗಳು, ಬ್ಯಾಟಗಳು, ಆಭರಣದ ಪೆಟ್ಟಿಗೆಗಳು, ಮೊಬೈಲ್ ಸ್ಟ್ಯಾಂಡಗಳು, ಫೋಟೋದ ಕಟ್ಟುಗಳು, ಟ್ರೋಫಿಗಳು, ವಿವಿಧ ಜಾತಿಯ ಪ್ರಾಣಿಗಳು, ಪಕ್ಷಿಗಳು, ಹೊಸ-ಹೊಸ ವಿನ್ಯಾಸದ ಬಳೆಗಳು, ಕೈವಸ್ತ್ರವರಿಸುವ ನ್ಯಾಪಕಿನ ಸ್ಟಾಂಡಗಳು, ಮೇಣದ ಬತ್ತಿಯ ಸ್ಟ್ಯಾಂಡಗಳು, ಜೋಕರ್‌ಗಳು, ಏಣಿಕೆಯ ಗೊಂಬೆಗಳು, ಮೇರಿಗ್ರಾವುಂಡ್, ಜಾನಪದ ಶೈಲಿಯ ಬೊಂಬೆಗಳು, ದಸರಾ ಬೊಂಬೆಗಳು, ಪೌರಾಣಿಕ ಗೊಂಬೆಗಳು, ಕುಂಕುಮದ ಭರಣಿಗಳು, ಬಾಗಿಲಿನ ತೂಗು ಮಣಿಗಳು, ಕರಟನ್ ರಿಂಗಗಳು, ವಿದ್ಯುತ್ ಪ್ಲೇಟಗಳು, ಕಾರಿನ ಸೀಟಿಗೆ ಬಳಸುವ ಮಣಿಗಳು ಮೀನುಗಳು, ಮೊಸಳೆಗಳು, ಹಗ್ಗದ ಆಟದ ಹಿಡಿಕೆಗಳು, ಕೋಳಿ ಮೊಟ್ಟೆಗಳು, ಹೆಲಿಕ್ಯಾಪ್ಟರಗಳು, ಪೆನ್ನಿನ ಸ್ಟ್ಯಾಂಡಗಳು, ಸಂಗೀತವನ್ನು ನುಡಿಸುವಂತ ಪರಿಕರಗಳಾದ ತಬಲ, ವೀಣೆ, ಡಮರುಗ, ಇತ್ಯಾದಿಗಳು, ಕುದುರೆ ಗಾಡಿಗಳು, ಪೋಲಿಸ್ ಲಾರಿಗಳು, ಊರುಗೋಲುಗಳು ಕೆಲವು ಶೋಕೆಸಿನಲ್ಲಿ ಇಡುವಂತಹ ಚಿಕ್ಕ ಚಿಕ್ಕ ಗೊಂಬೆಗಳು ಇನ್ನೂ ಅನೇಕ ಕ್ರಿಯಾತ್ಮಕ ವಿವಿಧ ರೀತಿಯ ಗೊಂಬೆಗಳ ತಯಾರಿಕೆಯನ್ನು ನಾವು ಚನ್ನಪಟ್ಟಣದಲ್ಲಿ ಕಾಣಬಹುದಾಗಿದೆ.

ಗೊಂಬೆಗಳ ತಯಾರಿಕೆಯಾದ ನಂತರ ಇವುಗಳಿಗೆ ಒಪ್ಪುವಂತಹ ವಸ್ತ್ರ ವಿನ್ಯಾಸ, ಆಕಾರ, ತಂತ್ರ, ಬಣ್ಣಗಾರಿಕೆ ಮತ್ತು ಬಣ್ಣಗಳ ಸಹಾಯದಿಂದ ರಚಿಸುವ ನಕ್ಷಾ ಚಿತ್ರಗಳು, ಕೆಲವು ಗೊಂಬೆಗಳ ಕಣ್ಣು, ಮೂಗು, ಬಾಯಿ ಹುಬ್ಬುಗಳನ್ನು ತೋರಿಸುವಲ್ಲಿ ಕೆಲವು ಬಣ್ಣಗಳನು ಇಲ್ಲವೆ ಮಾರ್ಕರ್ ಪೆನ್ನುಗಳನ್ನು ಉಪಯೋಗಿಸುತ್ತಾರೆ. ಇದಲ್ಲದೆ ಕೆಲವು ಜೋಡಣೆ (ಉದಾಃ ಗಾಡಿಯ ಚಕ್ರಗಳು, ಗೊಂಬೆಯ ಕೈಕಾಲುಗಳು, ಕೆಲವು ಪಕ್ಷಿಯ ಕೊಕ್ಕುಗಳು, ಪ್ರಾಣಿಯ ಬಾಲ ಹಾಗೂ ಕಾಲುಗಳು ತಳಪಾಯಗಳು ಇನ್ನೂ ಹಲವು ರೀತಿಯ ಬಿಡಿ ಭಾಗಗಳ) ಸಾಮಾನುಗಳು ಇಲ್ಲಿ ತಯಾರಾಗುವುದನ್ನು ನೋಡಬಹುದಾಗಿದೆ.

ಗೊಂಬೆಗಳು ಮತ್ತು ಆಟಿಕೆಯ ಸಾಮಾನುಗಳ ತಂತ್ರ ಶೈಲಿ ನಿಂತಿರುವ ಭಂಗಿ ಕುಂತಿರುವ ಭಂಗಿಯೂ ಹಾಗೂ ಇವುಗಳಿಗೆ ಬಳಸಿರುವ ಬಣ್ಣಗಳ ಬಗ್ಗೆ ಕೆಲವು ಉದಾಹರಣಗಳೊಂದಿಗೆ, ಇಲ್ಲಿ ವಿವರಿಸಿ ಛಾಯಾ ಚಿತ್ರಗಳೊಂದಿಗೆ, ತೋರಿಸಿ ವಸ್ತು ವೈವಿಧ್ಯತೆಗಳನ್ನು ಹೇಳಲಾಗಿದೆ.

ಬೀಸುತ್ತಿರುವ ಮಹಿಳೆ:

ಈ ಗೊಂಬೆಯು ನೋಡಲು ತುಂಬ ಸುಂದರವಾಗಿದ್ದು, ಇಲ್ಲಿಯ ಚಿತ್ರದಲ್ಲಿ ಮಹಿಳೆಯು ನಿಜ ಸ್ವರೂಪದಲ್ಲಿ ಕುಳಿತುಕೊಂಡು ಬಿಸುಕಲ್ಲನ್ನು ಬೀಸುತ್ತಿರುವ ಚಿತ್ರವು ತುಂಬ ಸೂಕ್ಷ್ಮ ರೀತಿಯಲ್ಲಿದೆ. ಕಲಾವಿದನು ಕಲಾತ್ಮಕ ವಿನ್ಯಾಸದಿಂದ ಇದನ್ನು ರಚಿಸಿದ್ದಾನೆ. ಇಲ್ಲಿ ಬೀಸುತ್ತಿರುವ ಸನ್ನಿವೇಶಕ್ಕೆ ಬಣ್ಣವು ಮನಮುಟ್ಟುವಂತೆ ಕಲಾವಿದನು ಬಳಸಿದ್ದಾನೆ. ಇದರ ಕಣ್ಣು, ಮೂಗು ಬಾಯಿ, ಕೇಶದ ವಿನ್ಯಾಸ ಹಾಗೂ ಸೀರೆ, ಒಳ ಉಡುಪಿನ ವಿನ್ಯಾಸ ಹಾಗೂ ಕುಳಿತ ಭಂಗಿಯನ್ನು ಮರದಿಂದ ಸುಂದರವಾದ ರೀತಿಯಲ್ಲಿ ಇದನ್ನು ತಯಾರು ಮಾಡಿದ್ದಾನೆ. ಇದಲ್ಲದೆ ಮುಂದೆ ಇರುವ ಬೀಸುಕಲ್ಲು ತುಂಬ ಕಲಾತ್ಮಕ ರೂಪದಲ್ಲಿ ನಿರ್ಮಿಸಿದ್ದಾನೆ. ಚಿತ್ರದಲ್ಲಿ ಮಹಿಳೆ ಬೀಸುಕಲ್ಲಿನಿಂದ ಬೀಸುತ್ತಿರುವ ದೃಶ್ಯವಿದೆ. ಅದೇ ರೀತಿಯಾಗಿ ಬಣ್ಣದ ಕೆಲಸವನ್ನು ಕಲಾವಿದನು ಇದರ ಉಡುಪು, ಕೂದಲಿನ ಬಣ್ಣ ಹಾಗೂ ಮುಖ, ಮೈಬಣ್ಣವನ್ನು ಸನ್ನಿವೇಶಕ್ಕೆ ಒಪ್ಪುವ ರೀತಿಯಲ್ಲಿ ಬಳಸಿದ್ದಾನೆ.

ಬಾವಿಯಿಂದ ನೀರು ಸೇದುತ್ತಿರುವ ಮಹಿಳೆ:

ಈ ಗೊಂಬೆಯಲ್ಲಿ ನಿಂತ ತಾಯಿ ಮತ್ತು ಮಗಳ ಚಿತ್ರ ಇದೆ. ಈ ಚಿತ್ರ ಗೊಂಬೆಯಲ್ಲಿ ತಾಯಿ ಗೊಂಬೆಯು ಭಾವಿಯಲ್ಲಿ ನೀರನ್ನು ಸೇದುತ್ತಿರುವ ಸನ್ನಿವೇಶವಿದೆ. ಮಕ್ಕಳು ತಾಯಿ ಇರುವ ಕಡೆಯಲ್ಲಿ ಹಿಂಬಾಲಿಸುವದನ್ನು ತೋರಿಸುವ ಸುಂದರ ಚಿತ್ರದ ಗೊಂಬೆ ಇದಾಗಿದೆ. ಈ ಚಿತ್ರದಲ್ಲಿ ತಾಯಿಯು ನಿಂತಿರುವ ಭಂಗಿಯು, ಬಾವಿಗೆ ಹಗ್ಗವನ್ನು ಜಿಗಿದು ಬಾವಿಯೊಳಕ್ಕೆ ಕೊಡವನ್ನು ಬಿಡುವ ದೃಶ್ಯವಿದೆ. ಮಗಳು ತನ್ನ ತಾಯಿಯ ಹಿಂದೆ ನಿಂತು ತನ್ನ ತಾಯಿಯನ್ನು ನೋಡುತ್ತಿರುವ ದೃಶ್ಯವಿದೆ. ತಾಯಿ ಗೊಂಬೆ ಅಂಗಾಂಗಳ ರಚನೆ, ಉಡುಪು ಮತ್ತು ಕಾರ್ಯ ಚಟುವಟಕೆಯ ಸನ್ನಿವೇಶವನ್ನು ಬಹಳ ಸೊಗಸಾಗಿ ಕರಕುಶಲ ಕರ್ಮಿ ನಿರ್ಮಿಸಿದ್ದಾನೆ. ಅಲ್ಲದೆ ಬಣ್ಣದಿಂದ ಉಡುಪು, ಮೈಬಣ್ಣ, ಕೇಶವಿನ್ಯಾಸ ಹಾಗೂ ಮುಖ, ಮೂಗು ಬಾಯಿ, ಬಣ್ಣಗಳ ರಚನೆ, ಕೈಗಳಿಗೆ ಹಾಕಿಕೊಂಡ ಬಳೆಗಳು ಮತ್ತು ಧರಿಸಿರುವ ಸೀರೆ ರವಿಕೆ ಬಣ್ಣವನ್ನು ಚೆನ್ನಾಗಿ ಬಳಸಲಾಗಿದೆ. ಹಿಂದೆ ಇರುವ ಪುಟ್ಟ ಗೊಂಬೆಯನ್ನು ಸಹ ಅದರ ಲಂಗ, ಮೇಲಿನ ಅಂಗಿ, ಕೇಶರಾಶಿಯ ವಿನ್ಯಾಸ, ಮೂಗು, ಕಿವಿ, ಕಣ್ಣುಗಳನ್ನು ಬಹಳ ಅಂದವಾಗಿ ಚಿತ್ರಿಸಲಾಗಿದೆ. ಇದಲ್ಲದೆ ಬಾವಿಯ ಆಕಾರ ಮತ್ತು ಬಿಂದಿಗೆ ಆಕಾರ ಇದಕ್ಕೆ ಕಟ್ಟಿದ ಹಗ್ಗವು ನೋಡಲು ತುಂಬ ಸುಂದರವಾಗಿದೆ. ಈ ಚಿತ್ರ ಗೊಂಬೆಯಲ್ಲಿ ನಿಜವಾಗಿಯೂ ಬಾವಿಯಲ್ಲಿ ನೀರು ಸೇದಲು ಸಿದ್ಧವಾಗಿರುವ ಸ್ತ್ರೀಯ ಚಿತ್ರವೆಂದು ನೋಡಿದವರ ಕಣ್ಣನ್ನು ಸೆಳೆಯುತ್ತದೆ.

ಛತ್ರಿ ಹಿಡಿದು ನಿಂತಿರುವ ಮಹಿಳೆ:

ಈ ಗೊಂಬೆಯಲ್ಲಿ ಒಬ್ಬ ಸ್ತ್ರೀಯು ಮಳೆ ಅಥವಾ ಬಿಸಿಲು ಸಂರಕ್ಷಣೆಗೆ ಛತ್ರಿಯನ್ನು ಹಿಡಿದುಕೊಂಡು ನಿಂತಿರುವ ದೃಶ್ಯವಿರಬಹುದೆಂದು ಊಹಿಸಬಹುದಾಗಿದೆ. ಈ ಬೊಂಬೆಯಲ್ಲಿ ಉಡುಪಿನ ವಿನ್ಯಾಸ ಅಂಗಾಂಗಗಳ ವಿನ್ಯಾಸ ಮುಖದ ವಿನ್ಯಾಸ ಕೇಶರಾಶಿಯ ವಿನ್ಯಾಸ ಕಿವಿಗಳು ಬಹಳ ಸುಂದರವಾಗಿವೆ. ಈ ಬೊಂಬೆಯು ತನ್ನ ಎಡಗೈಯಲ್ಲಿ ಛತ್ರಿಯನ್ನು ಹಿಡಿದು ನಿಂತಿರುವ ದೃಶ್ಯವು ಮನ ಮೋಹಕವಾಗಿದೆ. ಬೊಂಬೆಗೆ ಕಾಲಿನಿಂದ ಮೇಲಕ್ಕೆ ಸೀರೆಯನ್ನು ತೊಡಿಸಲಾಗಿದೆಯೇನೋ ಎನ್ನುವಂತೆ ಭಾಸವಾಗುತ್ತದೆ. ಸೀರೆಯನ್ನು ಕೆಂಪು ಮತ್ತು ನೀಲಿ ಕೇಸರಿ ಮತ್ತು ಹಳದಿ ಬಣ್ಣದಿಂದ ಇದನ್ನು ಪೂರ್ಣಗೊಳಿಸಲಾಗಿದೆ. ಇದಲ್ಲದೆ ಮೈ ಬಣ್ಣಕ್ಕೆ ಒಪ್ಪುವಂತೆ ಚರ್ಮದ ಬಣ್ಣವನ್ನು ಇಲ್ಲಿ ಬಳಸಲಾಗಿದೆ. ತಾನು ಹಿಡಿದುಕೊಂಡ ಛತ್ರಿಯ ಬಣ್ಣವು

ವಸ್ತ್ರವಿನ್ಯಾಸಕ್ಕೆ ಬಳಸಲಾದ ಬಣ್ಣವನ್ನು ಬಳಸಿ ಪೂರ್ಣಗೊಳಿಸಲಾಗಿದೆ. ಇದರ ಕೇಶ ವಿನ್ಯಾಸಕ್ಕೆ ಕಪ್ಪು ಬಣ್ಣವನ್ನು ಮತ್ತು ಕಣ್ಣು, ಮೂಗು, ಹುಬ್ಬುಗಳಿಗೆ ಕಪ್ಪು ಬಣ್ಣದಿಂದ ಪೂರ್ಣಗೊಳಿಸಲಾಗಿದೆ. ಅಲ್ಲದೆ ಗೊಂಬೆಯ ಕೆಳಭಾಗದಲ್ಲಿಯು ಕಪ್ಪು ಬಣ್ಣವನ್ನು ತಳಪಾಯಕ್ಕೆ ಉಪಯೋಗಿಸಲಾಗಿದೆ. ತುಟಿಯನ್ನು ಅಂದಗೊಳಿಸಲು ಕೆಂಪು ಬಣ್ಣವನ್ನು ಬಳಸಲಾಗಿದೆ. ಒಟ್ಟಾರೆ ಛತ್ರಿಯನ್ನು ಹಿಡಿದು ನಿಂತಿರುವ ಮಹಿಳಾ ಬೊಂಬೆಯ ಚಿತ್ರವು ಸುಂದರವಾಗಿದೆ.

ಮಹಿಳೆಯರು:-

ಈ ಗೊಂಬೆಗಳನ್ನು ವೀಕ್ಷಿಸಿದಾಗ ಮಹಿಳೆಯರು ಗಾಢ ಚರ್ಚೆಯಲ್ಲಿ ತೊಡಗಿರುವುದು ನೋಡಬಹುದಾಗಿದೆ. ಕಟ್ಟಿಗೆಯಿಂದ ಇವುಗಳ ಆಕಾರಗಳನ್ನು ನಿರ್ಮಿಸಿ ಹಲವು ಬಣ್ಣಗಳಿಂದ ಈ ಗೊಂಬೆಗಳನ್ನು ಪೂರ್ಣಗೊಳಿಸಲಾಗಿದೆ. ಹಸಿರು, ಕೆಂಪು, ಬಣ್ಣಗಳಿಂದ ಸೀರೆಗಳನ್ನು ತೋರಿಸಲಾಗಿದೆ. ಇವೇ ಬಣ್ಣಗಳಿಂದ ರವಿಕೆಗೂ ತೋರಿಸಲಾಗಿದೆ. ಮೈಬಣ್ಣ ಹೊಂದುವಂತಹ ಬಣ್ಣಗಳನ್ನು ಉಪಯೋಗಿಸಿ ಕೈ, ಮುಖ ತೋರಿಸಲಾಗಿದೆ. ಕಪ್ಪು ಬಣ್ಣದಿಂದ ಕಣ್ಣು, ಹುಬ್ಬುಗಳು ತೋರಿಸಲಾಗಿದೆ. ಅಲ್ಲಲ್ಲೇ ಅಲಂಕಾರಿಕ ನಕ್ಷಾ ಚಿತ್ರಗಳನ್ನು ರಚಿಸಿ ಪೂರ್ಣಗೊಳಿಸಲಾಗಿದೆ.

ದಸರಾ ಮೆರವಣಿಗೆಯ ಗೊಂಬೆಗಳು:

ಈ ಬೊಂಬೆಗಳ ಜೋಡಣೆಯನ್ನು ನೋಡಿದರೆ ನಿಜಕ್ಕೂ ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವ ಮೈಸೂರು ದಸರಾ ಮೆರವಣಿಗೆ ನೆನಪಾಗುತ್ತದೆ. ಆನೆಯನ್ನು ರಚಿಸಿ ಅದರ ಮೇಲೆ ಅಂಬಾರಿಯನ್ನು ಮಾಡಲಾಗಿದೆ. ಆನೆಯ ಮುಂದೆ ನಾಲ್ಕು ಜನ ಸೈನಿಕರು ಶಿಸ್ತಿನಿಂದ ಧ್ವಜವನ್ನು ಹಿಡಕೊಂಡು ನಿಂತಿರುವ ದೃಶ್ಯವು ಇಲ್ಲಿ ಇದೆ. ಅಂಬಾರಿಯ ಹಿಂದೆ ಇಬ್ಬರೂ ಸೈನಿಕರು ಆನೆಯನ್ನು ಹಿಂಬಾಲಿಸಿಕೊಂಡು ಬರುತ್ತಿದ್ದಾರೆ. ಆನೆಯನ್ನು ಸಿಂಗರಿಸಲು ಕಂದು ಬಣ್ಣವನ್ನು ಬಳಸಿಕೊಳ್ಳಲಾಗಿದೆ. ಅದರ ಮೇಲೆ ಅಂಬಾರಿಯನ್ನು ಬಂಗಾರದ ಬಣ್ಣದಿಂದ ರಚಿಸಿದ್ದು, ಚಿನ್ನದ್ದು ಎಂಬುವಂತೆ ತೋರಿಸಲಾಗಿದೆ. ಅಂಬಾರಿಯ ಮುಂದಿನ ಸೈನಿಕರನ್ನು ಕೆಂಪು ಬಣ್ಣದಿಂದ ಹಾಕಿರುವ ಅಂಗಿಯ ವಸ್ತ್ರವನ್ನು ತೋರಿಸಲಾಗಿದೆ. ಟೋಪಿಗೆ ಹಸಿರನ್ನು ಬಳಸಿಕೊಳ್ಳಲಾಗಿದೆ. ಇದಲ್ಲದೆ ಕೈಯಲ್ಲಿ ಬಾವುಗಟಗಳನ್ನು ಕೊಡಲಾಗಿದೆ. ಇದೇ ರೀತಿ ಹಿಂದಿನ ಸೈನಿಕರಿಗೂ ಹಸಿರು ಹಾಗೂ ಕೆಂಪು ಬಣ್ಣದಿಂದ ತಲೆಯ ಟೋಪಿ ಮತ್ತು ವಸ್ತ್ರವನ್ನು

ತೋರಿಸಲಾಗಿದೆ. ಇದಲ್ಲದೆ ಕಣ್ಣುಗಳನ್ನು ಮತ್ತು ಮೂಗು, ಬಾಯಿಯನ್ನು ಗುರುತಿಸಲು ಕಪ್ಪು ಬಣ್ಣವನ್ನು ಬಳಸಲಾಗಿದೆ.

ಕುದುರೆ ಸವಾರ:

ಈ ಗೊಂಬೆಯಲ್ಲಿ ಕುದುರೆನ್ನೇರಿಕೊಂಡು ಹೋಗುತ್ತಿರುವ ಸೈನಿಕ ಸಿಪಾಯಿಯನ್ನು ತೋರಿಸಲಾಗಿದೆ. ಕುದುರೆಯನ್ನು ಹಳದಿ ಬಣ್ಣದಿಂದ ಪೂರ್ಣಗೊಳಿಸಿ, ಕಪ್ಪು ಬಣ್ಣದ ಸಹಾಯದಿಂದ ಕಣ್ಣು, ಕಾಲಿನ ಭಾಗವನ್ನು ಕೆಲವು ರೇಖೆಗಳಿಂದ ಕುತ್ತಿಗೆಯವರೆಗೆ ಪಟ್ಟಿಗಳನ್ನು ಹಾಗೂ ಚುಕ್ಕಿಗಳನ್ನು ಇಡಲಾಗಿದೆ. ಇದಲ್ಲದೆ ಬಿಳಿಯ ಬಣ್ಣದ ಕೆಲವು ಗೆರೆಗಳಿಂದ ಹೊಟ್ಟೆಯ ಸುತ್ತ ಬಳಸಲಾಗಿದೆ. ಕುದರೆಯ ಮೇಲೆ ಕುಳಿತ ಸವಾರನನ್ನು ಕೆಂಪು ಬಣ್ಣದಿಂದ ಮೇಲಿನ ಉಡುಪನ್ನು ತೋರಿಸಲಾಗಿದೆ. ತಲೆಯ ಮೇಲಿನ ಟೋಪಿಯನ್ನು ನೀಲಿ ಬಣ್ಣದಿಂದ ತೋರಿಸಲಾಗಿದೆ. ಕಪ್ಪು ತಲೆ ಕೂದಲು, ಕಣ್ಣು,ಮೂಗು, ಮೀಸೆ, ಹುಬ್ಬುಗಳು, ಅಂಗಿಯ ಜೇಬಿನ ಭಾಗ, ತೋರಿಸಲು ಅಂಗಿಯ ಗುಂಡಿಗೆ ಮತ್ತು ಕಾಲಿನ ಕೆಳ ಭಾಗಕ್ಕೂ ಬಳಸಲಾಗಿದೆ. ಕೈ ಕಾಲು ಮತ್ತು ಮುಖಕ್ಕೆ ವಾರನಿಶ್‌ನ್ನು ಉಪಯೋಗಿಸಲಾಗಿದೆ. ಇದಲ್ಲೆ ಕುದರೆಯ ಮೂಗಿನ ದಾರವನ್ನು ತೋರಿಸಲು ಲೇಸ್‌ನಂತಹ ದಾರವನ್ನು ಕಟ್ಟಿ ಅದರ ತುದಿಯನ್ನು ಕುದುರೆ ಸವಾರನ ಕೈಗೆ ಕಟ್ಟಲಾಗಿದೆ.

ಹಾವಾಡಿಗ:

ಈ ಬೊಂಬೆಯು ಕುಳಿತುಕೊಂಡ ಭಂಗಿಯಲ್ಲಿ ಪುಂಗಿಯನ್ನು ತನ್ನ ಎಡಗೈ ಸಹಾಯದಿಂದ ನುಡಿಸುತ್ತಿರುವ ದೃಶ್ಯವಿದೆ. ಹಾವಾಡಿಗನು ಕುಳಿತುಕೊಂಡು ಪುಂಗಿಯ ಸಹಾಯದಿಂದ ತನ್ನ ಮುಂದಿನ ಭಾಗದಲ್ಲಿ ಇಟ್ಟಿರುವ ಪುಟ್ಟಿಯಲ್ಲಿ ಹಾವು ಹೊರಬರುತ್ತಿರುವುದು ಇಲ್ಲಿ ನೋಡಬಹುದಾಗಿದೆ. ಈ ಬೊಂಬೆಗಳ ಜೋಡಣೆಯನ್ನು ತಳಭಾಗದಲ್ಲಿ ಚಿಕ್ಕ ಹಲಗೆಯನ್ನು ಅಳವಡಿಸಿ, ಹಲಗೆ ಮೇಲೆ ಹಾವಾಡಿಗನ ದೃಶ್ಯದ ಬೊಂಬೆಗಳನ್ನು ಜೋಡಿಸಲಾಗಿದೆ. ಕಪ್ಪು ಮತ್ತು ಕೆಂಪು ಬಣ್ಣಗಳು ಮಾತ್ರ ಕೆಲವು ಭಾಗಗಳಿಗೆ ಬಳಸಲಾಗಿದೆ. ಹಾವಿನ ಹೆಡೆಯ ಭಾಗಕ್ಕೆ ಕಪ್ಪು ಬಳಸಿ, ಹಾವಾಡಿಗನ ಕಣ್ಣು, ಹುಬ್ಬಿನ ಕೂದಲುಗಳಿಗೆ, ಮೀಸೆಗಳಿಗೆ ಮಾತ್ರ ಬಳಸಲಾಗಿದೆ. ಕೆಂಪು ಬಣ್ಣವನ್ನು ಹಾವಿನ ಹೆಡೆಯ ತುದಿಯ ಭಾಗಕ್ಕೆ ಮತ್ತು ಹಾವಾಡಿಗೆ ತುಟಿಗೆ ಬಳಸಲಾಗಿದೆ. ಇನ್ನೂ ಉಳಿದ ಭಾಗಗಳಿಗೆ ಮರದ ನೈಜತೆಯ ರೀತಿಯಲ್ಲಿ ಹಾಗೆಯೇ

ಬಿಡಲಾಗಿದೆ. ಹಾವಾಡಿಗನ ತಲೆಯ ಮೇಲ್ಭಾಗದಲ್ಲಿ ನಾರಿನಂತಹ ವಸ್ತುವಿನಿಂದ ಕೂದಲನ್ನು ತೋರಿಸಲಾಗಿದೆ.

ರಾಜ-ರಾಣಿ ಬೊಂಬೆಗಳು:

ಗೊಂಬೆಗಳ ಮುಖಗಳನ್ನು ನೈಜ ರೀತಿಯಲ್ಲಿ ನಿರ್ಮಿಸಿ, ದೇಹದ ಭಾಗವನ್ನು ಕ್ರಿಯಾತ್ಮಕವಾಗಿ ಮಾಡಲಾಗಿದೆ. ತಲೆಯ ಮೇಲಿನ ಟೋಪಿಗೆ ಕೀರಿಟವನ್ನು ನಿರ್ಮಿಸಿ ಇದಕ್ಕೆ ಗುಲಾಬಿ ಬಣ್ಣದಿಂದ ಪೂರ್ಣಗೊಳಿಸಲಾಗಿದೆ. ಮುಖದ ಭಾಗಕ್ಕೆ ತಿಳಿ ಹಳದಿ ಬಣ್ಣವನು ಉಪಯೋಗಿಸಲಾಗಿದೆ. ಕಪ್ಪು ಬಣ್ಣವನ್ನು ಉಪಯೋಗಿಸಿಕೊಂಡು ಕಣ್ಣು, ಮೂಗು, ಹುಬ್ಬು, ಮೀಸೆಗಳನ್ನು ತೋರಿಸಲಾಗಿದೆ. ತುಟಿಗಳಿಗೆ ಕೆಂಪು ಬಣ್ಣವನ್ನು ಬಳಸಲಾಗಿದೆ. ರಾಣಿ ಗೊಂಬೆಗೆ ಕುತ್ತಿಗೆಯಿಂದ ಕೆಳ ಭಾಗದವರೆಗೆ ಬಟ್ಟೆಯಂತೆ ತೋರಿಸಿರುತ್ತಾರೆ. ವಿನ್ಯಾಸಕ್ಕೆ ಕಡು ನೀಲಿ ಬಣ್ಣವನ್ನು ಉಪಯೋಗಿಲಾಗಿದೆ. ರಾಜ ಗೊಂಬೆಗೆ ಕುತ್ತಿಗೆಯಿಂದ ಕೆಳಭಾಗದವರೆಗೆ ಹಸಿರು, ಕಂದು ಮಿಶ್ರಿತ ಕಪ್ಪು ವರ್ಣಗಳಿಂದ ನೀಳವಾದ ಮೇಲಿನ ಉಡುಪನ್ನು ತೋರಿಸಲಾಗಿದೆ. ತಳಭಾಗಗಳನ್ನು ದುಂಡದಾದ ಆಕಾರದಲ್ಲಿ ನಿಂತುಕೊಳ್ಳುವ ರೀತಿಯಲ್ಲಿ ಸುಂದರವಾಗಿ ತಯಾರಿಸಲಾಗಿದೆ.

ಲಿಂಗಗಳು:

ಪೂಜೆಗೆ ಸಿದ್ಧವಾಗಿರುವ ರೀತಿಯಲ್ಲಿ ಈ ಲಿಂಗವನ್ನು ತಯಾರಿಸಲಾಗಿದೆ. ಲಿಂಗಗಳನ್ನು ನಿಜವಾದ ಲಿಂಗಸ್ವರೂಪ ಹೋಲುವಂತೆ ಶೈಲಿ ಹಾಗೂ ತಂತ್ರದಿಂದ ತಯಾರಿಸಲಾಗಿದೆ. ಇಲ್ಲಿ ಕಾಣುವ ಲಿಂಗಗಳನ್ನು ಕಪ್ಪು ಬಣ್ಣದಿಂದ ಪೂರ್ಣಗೊಳಿಸಿ, ಬಿಳಿಯ ಬಣ್ಣದಿಂದ ವಿಭೂತಿಯ ಪಟ್ಟಿಗಳನ್ನು ಎಳೆಯಲಾಗಿದೆ. ಪಟ್ಟಿಗಳ ಮೇಲೆ ಹಳದಿ ಮತ್ತು ಕೆಂಪು ಬಣ್ಣದಿಂದ ಕುಂಕುಮ ರೀತಿಯಲ್ಲಿ ಬೊಟ್ಟನ್ನು ಇಡಲಾಗಿದೆ. ಅಲ್ಲದೆ ಲಿಂಗಗಳಿಗೆ ಬಿಳಿ, ಹಳದಿ ಕೆಂಪು ಹಸಿರು ಗುಲಾಬಿ ಬಣ್ಣವನ್ನು ಬಳಸಿಕೊಂಡು ಲಿಂಗಗಳಿಗೆ ಹಾರವನ್ನು ಚಿತ್ರಿಸಲಾಗಿದೆ.

ತಬಲಗಳು:

ಮರದಿಂದ ಅಂದವಾದ ರೀತಿಯಲ್ಲಿ ತಬಲಗಳನ್ನು ನಿರ್ಮಿಸಲಾಗಿದೆ. ತಬಲಕ್ಕೆ ಲಯಗಳಿಗೆ ತಕ್ಕಂತೆ ಬೇರೆ ಬೇರೆ ರೀತಿಯಲ್ಲಿ ದಾರವನ್ನು ಸಡಿಲುಗೊಳಿಸಲು ಮತ್ತು

ಬಿಗಿಯಾಗಿಸಲು ಕೆಲವು ಮರದ ಚೆಕ್ಕೆಗಳನ್ನು ಸಹ ಇಲ್ಲಿ ಬಳಸಲಾಗಿದೆ. ದಾರದಿಂದ ತಬಲದ ಮೇಲ್ಭಾಗದಿಂದ ತಳಭಾಗಕ್ಕೆ ಬಿಗಿಯಾಗಿ ಎಳೆದು ಕಟ್ಟಲಾಗಿದೆ. ತಬಲಗಳಿಗೆ ಹಸಿರು, ಗುಲಾಬಿ ಬಣ್ಣಗಳಿಂದ ಲೇಪಿಸಲಾಗಿದೆ. ಅಲ್ಲದೆ ಕೆಲವು ಗೆರೆಗಳನ್ನು ವಿದ್ಯುತ್ ಯಂತ್ರದ ಸಹಾಯದಿಂದ ರಚಿಸಲಾಗಿದೆ. ಅನೇಕ ಬಣ್ಣ-ಬಣ್ಣದ ತಬಲಗಳನ್ನು ನಿರ್ಮಿಸಲಾಗಿದೆ. ಇಲ್ಲಿ ನೈಜವಾದ ತಬಲಗಳು ಹೋಲುವಂತೆ ಸಿದ್ಧಪಡಿಸಲಾಗಿದೆ.

ಲೇಖನಿಯ ಸ್ಟಾಂಡ್:

ಈ ಸ್ಟ್ಯಾಂಡ್‌ಗಳನ್ನು ಪೆನ್ನು, ಪೆನ್ಸಿಲ್ ಇನ್ನೂ ಕೆಲವು ವಸ್ತುಗಳನ್ನು ಇಡಲು ಬಳಸುತ್ತಾರೆ. ಸ್ಟ್ಯಾಂಡಗಳು ಅನೇಕ ರೀತಿ ಆಕಾರಗಳಲ್ಲಿ ವಿವಿಧ ಶೈಲಿಗಳಿಂದ ಹಾಗೂ ಹಲವು ಬಣ್ಣಗಳನ್ನು ಲೇಪಿಸಿ ಸಾಕಷ್ಟು ಬಗೆ ಬಗೆಯ ಲೇಖನಿ ಸ್ಟ್ಯಾಂಡಗಳನ್ನು ನಿರ್ಮಿಸಿದ್ದಾರೆ. ಇಲ್ಲಿ ಲೇಖನಿಯ ಸ್ಟಾಂಡ್ ದುಂಡಾದ ತಳಪಾಯದಿಂದ ನಿರ್ಮಿಸಲ್ಪಟ್ಟಿವೆ. ಇದಕ್ಕೆ ಹಸಿರು ಹಾಗೂ ಹಳದಿ ಬಣ್ಣಗಳನ್ನು ಲೇಪಿಸಲಾಗಿದೆ. ಇದರ ಮೇಲೆ ಅನೇಕ ಹೂವಿನ ಚಿತ್ರಗಳು ಹಾಗೂ ನಕ್ಷೆಗಳನ್ನು ಕುಂಚದ ಸಹಾಯದಿಂದ ಬಿಡಿಸಲಾಗಿದೆ. ಇನ್ನೂ ಹಲವು ಪೆನ್ನಿನ ಸ್ಟಾಂಡ್‌ಗಳಿಗೆ ಅನೇಕ ಬಣ್ಣಗಳು, ನಕ್ಷೆ ಚಿತ್ರಗಳನ್ನು ಹಾಕಿ ಇವುಗಳನ್ನು ಇನ್ನಷ್ಟು ಸುಂದರಗೊಳಿಸಲಾಗಿದೆ.

ಆಟದಲ್ಲಿ ತೊಡಗಿರುವ ಮಕ್ಕಳು:

ಈ ಗೊಂಬೆಗಳ ಚಿತ್ರದಲ್ಲಿ ಎರಡು ಸಣ್ಣ ಹುಡುಗಿಯರು ಮತ್ತು ಒಂದು ಸಣ್ಣ ಹುಡುಗ ಹೋಲುವ ಬೊಂಬೆಗಳನ್ನು ನಿರ್ಮಿಸಲಾಗಿದೆ. ಹುಡುಗಿ ಗೊಂಬೆಯ ಆಟಿಕೆಯನ್ನು ಉದ್ದವಾದ ಕಟ್ಟಿಗೆಯನ್ನು ನಿರ್ಮಿಸಿ, ಕುದರೆ ಮುಖಗಳನ್ನು ಮಾಡಿ ಅದನ್ನು ಹಿಡಿದು ಕುಳಿತುಕೊಳ್ಳುವ ರೀತಿಯಲ್ಲಿ ನಿರ್ಮಿಸಲಾಗಿದೆ. ಈ ಬೊಂಬೆಗಳ ಕೆಲವು ಭಾಗಗಳಿಗೆ ಮಾತ್ರ ಕೆಂಪು ಬಣ್ಣದಿಂದ ಕೈಗಳ ತುದಿಗೆ ಮತ್ತು ತುಟಿಗೆ ಹಾಗೂ ಕುದುರೆಯ ಕಿವಿಗಳಿಗೆ ಬಳಸಲಾಗಿದೆ. ಕಪ್ಪು ಬಣ್ಣವನ್ನು ಬೊಂಬೆಯ ಕಣ್ಣುಗಳಿಗೆ ತೋರಿಸಲಾಗಿದೆ. ಇವೇ ಬಣ್ಣಗಳನ್ನು ಕುದರೆಯ ಕಣ್ಣು, ಬಾಯಿ ಭಾಗಕ್ಕೆ ಬಳಸಲಾಗಿದೆ. ಹುಡುಗಿ ಗೊಂಬೆಗೆ ತಲೆ ಮೇಲಿನ ಟೋಪಿಯನ್ನು ತೋರಿಸಲು ವೆಲವೆಟ್‌ನಂತಹ ಬಟ್ಟೆಯನ್ನು ಬಳಸಲಾಗಿದೆ. ಪಕ್ಕದಲ್ಲಿನ ಹುಡುಗಿ ಗೊಂಬೆಯು ಹಗ್ಗದ ಆಟವಾಡುವ ರೀತಿಯಲ್ಲಿ ತೋರಿಸಲಾಗಿದೆ. ಹಗ್ಗವನ್ನು ತೋರಿಸಲು ತಂತಿಯಿಂದ ವಸ್ತುವನ್ನು ಬಳಸಲಾಗಿದೆ.

ರೈಲಿನಂತೆ ಚಲಿಸುವ ಆಟಿಕೆಗಳು:

ಇಲ್ಲಿ ಎಲ್ಲಾ ರೀತಿಯ ವಾಹನಗಳನ್ನು ಹೋಲುವ ಆಟಿಕೆಗಳನ್ನು ತಯಾರಿಸಲಾಗುತ್ತದೆ. ರೈಲು, ಲಾರಿ, ಬಸ್ಸು, ಆಟೋ, ಸೈಕಲ್ ಹಾಗೂ ಕಾರುಗಳಂತಹ ಹತ್ತು ಹಲವು ಬಗೆ ಬಗೆಯ ಕುಶಲ ಕರ್ಮಿಗಳು ಕ್ರಿಯಾತ್ಮಕವಾದ ಆಕಾರಗಳನ್ನು ನೀಡಿ ತಯಾರಿಸಿದ್ದಾರೆ. ಕೆಲವನ್ನು ಪ್ರಾಣಿ, ಪಕ್ಷಿಗಳನ್ನು ಹೋಲುವಂತೆ ರಚಿಸಿರುವುದು ನಾವು ನೋಡಬಹುದಾಗಿದೆ. ಇವುಗಳು ಚಲಿಸುವುದಕ್ಕೆಂದು ಗಾಲಿಗಳನ್ನು ಮಾಡಲಾಗಿದೆ. ನೈಜವಾದ ವಾಹನಗಳನ್ನು ನೋಡಲು ಯಾವ ರೀತಿಯಲ್ಲಿ ಇರುತ್ತವೆಯೋ ಸ್ವಲ್ಪವು ಕುಂದು-ಕೊರೆತೆಗಳ ತೋರಿಸದೆ ಸಾಕಷ್ಟು ಜಾಣ್ಮೆಯಿಂದ ನಿರ್ಮಿಸಲಾಗಿದೆ. ಇಂತಹ ಆಟಿಕೆಗಳಿಗೆ ಕೆಂಪು, ನೀಲಿ, ಕಪ್ಪು, ಹಸಿರು ಕೆಲವು ಬಾರಿ ನೇರವಾಗಿ ಇನ್ನೂ ಕೆಲವು ಬಾರಿ ಮಿಶ್ರಣ ಮಾಡಿದ ಬಣ್ಣಗಳನ್ನು ಬಳಸಲಾಗಿದೆ. ಬೇರೆ ಯಾವುದೇ ವಸ್ತುಗಳನ್ನು ಬಳಸದೇ ಸಂಪೂರ್ಣವಾಗಿ ಮರದ ಕಟ್ಟಿಗೆಯಿಂದಲೇ ನಿರ್ಮಿಸಿದ್ದಾರೆ. ಮಕ್ಕಳು ಹಗ್ಗದ ಸಹಾಯದಿಂದ ಅಥವಾ ಕೈಯಿಂದ ನೂಕಲು ಅನುಕೂಲವಾಗುವಂತೆ ಚಲಿಸುವ ವಾಹನದಂತಹ ಅನೇಕ ವಸ್ತುಗಳನ್ನು ಇಲ್ಲಿ ನಿರ್ಮಿಸಿದ್ದಾರೆ.

ಎತ್ತಿನ ಗಾಡಿ:

ಎತ್ತಿನ ಗಾಡಿಯು ನಿಜವಾದ ಗಾಡಿಯಂತೆ ಸಿದ್ಧವಾಗಿ ಚಲಿಸಲು ಹೂಡಿರುವಂತೆ ಎನಿಸುತ್ತದೆ. ಎತ್ತಿನ ಗಾಡಿಯ ಚಕ್ರ ಮತ್ತು ಹೂಡಿರುವ ಎತ್ತುಗಳನ್ನು ಬಹಳ ಸುಂದರವಾಗಿ ಮಾಡಲಾಗಿದೆ. ಈ ಗಾಡಿಯನ್ನು ನಡೆಸಲು ಎತ್ತಿನ ಕೆಳಗೆ ಸಣ್ಣದಾದ ಚಕ್ರಗಳನ್ನು ನಿರ್ಮಿಸಿದ್ದಾರೆ. ಇದರ ಹಿಂದೆ ದೊಡ್ಡದಾದ ಚಕ್ರಗಳನ್ನು ಸಹ ಮಾಡಲಾಗಿದೆ. ಎತ್ತುಗಳಿಗೆ ಬಿಳಿಯ ಬಣ್ಣದಿಂದ ಇವುಗಳನ್ನು ಪೂರ್ಣಗೊಳಿಸಲಾಗಿದೆ. ಕಪ್ಪು ಬಣ್ಣದಿಂದ ಇವುಗಳ ಕಣ್ಣು ಮತ್ತು ಮೂಗಿಗೆ ಕಪ್ಪು ರೇಖೆಗಳಿಂದ ತೋರಿಸಲಾಗಿದೆ. ನೈಜ ಎತ್ತುಗಳೇ ಎಂಬ ನಿಜ ರೂಪವನ್ನು ಕಲಾವಿದ ರೂಪಿಸಿದ್ದಾನೆ. ಗಾಡಿಯನ್ನು ಮತ್ತು ಗಾಡಿಯ ನೊಗವನ್ನು ಬಿಳಿಯ ಬಣ್ಣಗಳಿಂದ ಪೂರ್ಣಗೊಳಿಸಿ, ಗಾಡಿಯ ನೊಗಕ್ಕೆ ಕೆಂಪು ಬಣ್ಣವನ್ನು ಲೇಪಿಸಲಾಗಿದೆ. ಕೆಂಪು ಬಣ್ಣವನ್ನು ಗಾಡಿಯ ಹಿಂದಿನ ಚಕ್ರಕ್ಕೆ ಉಪಯೋಗಿಸಲಾಗಿದೆ. ಹಳದಿ ಬಣ್ಣವನ್ನು ಚಕ್ರ ಮತ್ತು ಗಾಡಿಯ ಅಕ್ಕಪಕ್ಕದ ಭಾಗಗಳಿಗೆ ಬಳಸಲಾಗಿದೆ. ಹಿಂದೆ ಮುಂದೆ ಚಕ್ರಗಳಿರುವುದರಿಂದ ದಾರಕಟ್ಟಿ ಎಳೆಯಲು ಅಥವಾ ದೂಡುವ ರೀತಿಯಲ್ಲೂ ಇದನ್ನು ಬಳಸಿಕೊಂಡು ಮಕ್ಕಳು ಆಡಬಹುದಾದ

ರೀತಿಯಲ್ಲಿವೆ. ಹಿಂಬದಿಯಲ್ಲಿ ತಡಿಕೆಗಳನ್ನು ನಿರ್ಮಿಸಿ ಮಧ್ಯಭಾಗದಲ್ಲಿ ಕುಳಿತುಕೊಳ್ಳುವ ಜಾಗವನ್ನು ತೋರಿಸಲಾಗಿದೆ.

ಬಸವಣ್ಣ:

ಚಿತ್ರದಲ್ಲಿ ಗೊಂಬೆಯು ನೋಡಲು ಅತ್ಯಂತ ಆಕರ್ಷಕವಾದ ರೀತಿಯಲ್ಲಿದೆ. ಬಸವಣ್ಣ ತಯಾರಿಕೆಯಲ್ಲಿ ಸಾಕಷ್ಟು ಬಿಡಿ ಭಾಗಗಳ ಸಾಮಾನುಗಳನ್ನು ಬಳಸಲಾಗಿದೆ. ಕಾಲು, ಕಿವಿ, ಕೊಂಬು, ಬಾಲ, ಕುತ್ತಿಗೆ, ತಲೆ ಭಾಗಗಳನ್ನು ಕಟ್ಟಿಗೆಯಿಂದ ನಿರ್ಮಿಸಿ ಜೋಡಿಸಲಾಗಿದೆ. ಇದಕ್ಕೆ ಬಿಳಿಯ ಬಣ್ಣದಿಂದ ಪೂರ್ಣಗೊಳಿಸಲಾಗಿದೆ. ನಂತರ ಕುತ್ತಿಗೆಯಿಂದ ಕಾಲುಗಳ ಸ್ವಲ್ಪ ಮೇಲಿನ ಭಾಗದವರೆಗೆ ಹಾಗೂ ಬೆನ್ನಿನ ಭಾಗದವರೆಗೆ ಹಸಿರು, ನೆರಳೆ, ಕೇಸರಿ ಹಾಗೂ ಕೆಂಪು ಬಣ್ಣಗಳಿಂದ ಸುಂದರವಾದ ನಕ್ಷಾ ಚಿತ್ರವನ್ನು ಬಿಡಿಸಲಾಗಿದೆ. ಕಣ್ಣುಗಳಿಗೂ, ಬಾಯಿಯ ಭಾಗಕ್ಕೆ ಕಪ್ಪು ಬಣ್ಣದಿಂದ ಗುರುತಿಸಲಾಗಿದೆ. ಕಪ್ಪು ಬಣ್ಣವನ್ನು ಕೊಂಬಿಗೆ, ಕಣ್ಣುಗಳಿಗೆ, ಕಾಲಿನ ತುದಿಯ ಭಾಗವನ್ನು ಹಾಗೂ ಬಾಲಕ್ಕೆ ತೋರಿಸಲಾಗಿದೆ. ಕಿವಿಗೆ ಕೇಸರಿ ಮಧ್ಯಭಾಗದಲ್ಲಿ ಕೆಂಪು ವರ್ಣದಿಂದ ಪೂರ್ಣಗೊಳಿಸಲಾಗಿದೆ. ಕಾಲಿನ ಮೇಲ್ಭಾಗಕ್ಕೆ ಕೆಂಪು ಬಣ್ಣದಿಂದ ಚುಕ್ಕೆಗಳನ್ನು ನೋಡಲು ಆಕರ್ಷಕವಾಗಿದೆ.

ನೀರು ತರುತ್ತಿರುವ ಮಹಿಳೆ:

ಚಿತ್ರದಲ್ಲಿನ ಬೊಂಬೆಯು ನಿಂತ ಭಂಗಿಯಲ್ಲಿದೆ. ಕೊಡಗಳು ಕೈಗಳು, ಕಿವಿ, ತಲೆ ಹಿಂಬದಿಯ ತುರುಬ ಹಾಲೆಮರದ ಕಟ್ಟಿಗೆಯಲ್ಲಿ ನಿರ್ಮಿಸಿ ಜೋಡಿಸಲಾಗಿದೆ. ಕೆಂಪು ಹಸಿರು, ನೀಲಿ, ಹಳದಿ, ಕಂದು, ಕಪ್ಪು ಹಾಗೂ ಬಿಳಿಯ ಬಣ್ಣಗಳನ್ನು ಉಪಯೋಗಿಸಲಾಗಿದೆ. ನೀರಿನ ಕೊಡವನ್ನು ಸೊಂಟದ ಮೇಲೆ, ತಲೆಯ ಮೇಲೆ ಹೊತ್ತು ನಿಂತಿರುವ ಭಂಗಿ ನೋಡಲು ಬಹಳ ಸೊಗಸಾಗಿದೆ. ಕೊಡಗಳ ವಿನ್ಯಾಸವನ್ನು ತುಂಬ ಕಲಾತ್ಮಕ ರೂಪದಲ್ಲಿ ನಿರ್ಮಿಸಿದ್ದಾರೆ. ಕೆಂಪು ಬಣ್ಣವನ್ನು ಬಾಯಿಗೆ ಹಣೆಯ ಮೇಲಿನ ಕುಂಕುಮ, ಮೇಲಿನ ರವಿಕೆ ಕಿವಿ ಭಾಗಕ್ಕೆ ಉಪಯೋಗಿಸಲಾಗಿದೆ. ಸೀರೆಯ ಭಾಗಕ್ಕೆ ಕೆಂಪು ಬಣ್ಣ ಹಾಗೂ ನೀಲಿ ಹಳದಿ, ಹಸಿರು ಬಣ್ಣಗಳಿಂದ ನಕ್ಷಾ ಚಿತ್ರಗಳಿಂದ ಪೂರ್ಣಗೊಳಿಸಲಾಗಿದೆ. ಬಿಳಿಯ ಬಣ್ಣವನ್ನು ಸೀರೆ, ಕೊಡಕ್ಕೆ ಸ್ವಲ್ಪ ಮಟ್ಟಿಗೆ ಉಪಯೋಗಿಸಿ ಗೊಂಬೆಯ ಸುಂದರತೆಯನ್ನು ಹೆಚ್ಚಿಸಲಾಗಿದೆ.

ಮೊಟ್ಟೆ ಮತ್ತು ಸರಗಳು:

ಇಲ್ಲಿ ಸರಗಳನ್ನು ಬೊಂಬೆಗಳ ತಯಾರಿಕೆಯಲ್ಲಿ ನಿರುಪಯುಕ್ತವಾಗಿ ಚಿಕ್ಕ ಚಿಕ್ಕ ಮರದ ತುಂಡಗಳಿಂದ ಇವುಗಳನ್ನು ಮಾಡಲಾಗಿದೆ. ಸರವಲ್ಲದೆ ಕೆಲವು ಕಿವಿಯ ಓಲೆಗಳು ಕೈ ಚೈನ್‌ಗಳು ಮತ್ತು ನೆಕಲೇಸ್‌ಗಳು ಉಂಗುರುಗಳು ಇನ್ನೂ ಇತ್ಯಾದಿ ಸಣ್ಣ ಪುಟ್ಟ ಗೊಂಬೆಯ ಜೋಡಣೆಯ ಬೇಕಾಗುವಂತಹ ಸಾಮಾನುಗಳನ್ನು ನಿರ್ಮಿಸುತ್ತಾರೆ. ಚಿತ್ರದಲ್ಲಿ ಚಿಕ್ಕ ಚಿಕ್ಕ ಮಣಿಗಳನ್ನು ತಯಾರಿಸಿ ಕೊರಳ ಸರಗಳನ್ನು ನಿರ್ಮಿಸಲಾಗಿದೆ.

ಇಲ್ಲಿ ನೀಲಿ, ಕೆಂಪು, ಕಪ್ಪು, ಬಿಳಿ, ಹಳದಿ, ಹಸಿರು ಹಾಗೂ ಕಂದು ಬಣ್ಣದ ಮಣಿಗಳನ್ನು ನೋಡಬಹುದಾಗಿದೆ. ಇದೇ ರೀತಿಯಾಗಿ ಹಾಲೆ ಮರದ ಕಟ್ಟಿಗೆಯಿಂದ ತಯಾರಿಸಿದ ಬಣ್ಣ–ಬಣ್ಣದ ಮೊಟ್ಟೆಗಳನ್ನು ನೋಡಬಹುದಾಗಿದೆ. ಮೊಟ್ಟೆಯ ನೈಜ ರೂಪವನ್ನೇ ಹೋಲುವಂತೆ ಇವುಗಳನ್ನು ಸಿದ್ಧಪಡಿಸಲಾಗಿದೆ.

ಮೇಣದ ಬತ್ತಿ ಸ್ಟ್ಯಾಂಡಗಳು:

ವಿವಿಧ ಬಗೆ–ಬಗೆ ಆಕಾರದ ಮೇಣದ ಬತ್ತಿ ಸ್ಟ್ಯಾಂಡಗಳನ್ನು ಸಿದ್ಧಪಡಿಸಲಾಗಿದೆ. ಲಂಬಾಕೃತಿ ಮತ್ತು ಚಿಕ್ಕಾಕೃತಿಯ ಮೇಣದ ಬತ್ತಿ ಸ್ಟ್ಯಾಂಡಗಳನ್ನು ಇಲ್ಲಿ ನಿರ್ಮಿಸಲಾಗಿವೆ. ಮೇಲು ಭಾಗ ತುದಿಯಲ್ಲಿ ಮೇಣದ ಬತ್ತಿಯನ್ನು ಇಡಲು ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಕೆಳಭಾಗಕ್ಕೆ ನೆಲದ ಮೇಲೆ ನಿಲ್ಲಿಸಲು ಅನುಕೂಲವಾಗುವಂತೆ ಇವುಗಳನ್ನು ನಿರ್ಮಿಸಲಾಗಿದೆ. ಅನೇಕ ಬಣ್ಣ–ಬಣ್ಣದ ಮೇಣದ ಬತ್ತಿ ಸ್ಟ್ಯಾಂಡಗಳನ್ನು ಇಲ್ಲಿ ಕಾಣಬಹುದಾಗಿದೆ.

ರಂಗೋಲಿ ರಾಠೆ:

ಇದು ಕೆಲವು ಜಾತ್ರೆ ಮತ್ತು ಹಬ್ಬಗಳ ಸಂದರ್ಭದಲ್ಲಿ ಹಾಗೂ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿ ನಡೆಯುವ ಕೆಲವು ಪ್ರಸಿದ್ಧ ಜಾತ್ರೆಗಳಲ್ಲಿ ಕಂಡುಬರುತ್ತದೆ. ಇದನ್ನು ತಯಾರು ಮಾಡಿರುವ ಕಲಾವಿದನು ನಿಜವಾದ ರಂಗೋಲಿ ರಾಠಿಯೇ ಎಂಬ ಭ್ರಮೆಯನ್ನು ಮೂಡಿಸುವಂತಹ ರೀತಿಯಲ್ಲಿ ಇದನ್ನು ತಯಾರಸಿದ್ದಾನೆ. ಈ ರಂಗೋಲಿ ರಾಠಿಯಲ್ಲಿ ಕುಳಿತುಕೊಳ್ಳಲು ತೊಟ್ಟಿಲುಗಳ ಒಳಗೆ ಜನರು ಮತ್ತು ಮಕ್ಕಳು ಕುಳಿತುಕೊಂಡಿರುವ ರೀತಿಯಲ್ಲಿ ಇದನ್ನು ನಿರ್ಮಿಸಿದ್ದಾನೆ. ಇದನ್ನು ಕೈಯಿಂದ ತಿರುಗಿಸುವ ರೀತಿಯಲ್ಲಿ ಕೈ ಹಿಡಿಯನ್ನು

ಮಾಡಿದ್ದಾನೆ. ಅಲ್ಲದೇ ರಾಶೆಯನ್ನು ಹೊತ್ತು ನಿಂತಿರುವ ಎರಡು ಕಂಬಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಕೆಳಗೆ ರಂಗೋಲಿ ರಾಶಿಯು ನಿಂತಿರುವ ತಳಪಾಯವನ್ನು ನಿರ್ಮಿಸಲಾಗಿದೆ. ರಂಗೋಲಿಯ ರಾಶೆಯಲ್ಲಿ ತಿರುಗುವ ತೊಟ್ಟಿಲುಗಳನ್ನು ಹಾಗೂ ಹಿಡಿಯನ್ನು ಕೇಸರಿ ಮತ್ತು ನೀಲಿ ಬಣ್ಣದಿಂದ ಪೂರ್ಣಗೊಳಿಸಲಾಗಿದೆ. ಇದಲ್ಲದೆ ಕಂಬಗಳಿಗೂ ಕೇಸರಿ ಮತ್ತು ನೀಲಿ ಬಣ್ಣದಿಂದ ಹಾಗೂ ತಿರುಗಿಸುವ ಹಿಡಿಯನ್ನು ಕೇಸರಿ ಹಳದಿ ಬಣ್ಣವನ್ನು ಉಪಯೋಗಿಸಿ ಪೂರ್ಣಗೊಳಿಸಲಾಗಿದೆ. ಕೆಳಗಿನ ತಳಪಾಯವನ್ನು ಗುಲಾಬಿ ಬಣ್ಣದಿಂದ ಹಾಗೂ ಕುಂಚದ ಸಹಾಯದಿಂದ ಕೆಲವು ಬೇರೆ ಬೇರೆ ಬಣ್ಣಗಳನ್ನು ಉಪಯೋಗಿಸಿ ಕೆಲವು ಹೂಬಳ್ಳಿಯ ಚಿತ್ರಗಳನ್ನು ಬರೆಯಲಾಗಿದೆ. ಇದು ನೋಡಲು ಸುಂದರವಾಗಿದೆ.

ತರಕಾರಿ ಮಾರುತ್ತಿರುವ ವ್ಯಕ್ತಿ:

ಮಾರುಕಟ್ಟೆಯಲ್ಲಿ ಕುಳಿತು ತರಕಾರಿಯನ್ನು ಗ್ರಾಹಕರಿಗೆ ಕೊಡಲು ತನ್ನ ತಕ್ಕಡಿಯನ್ನು ಸಿದ್ಧಪಡಿಸುತ್ತಿರುವ ವ್ಯಕ್ತಿಯ ಗೊಂಬೆಯು ಬಹಳ ಸುಂದರವಾಗಿದೆ. ಈ ಮನುಷ್ಯ ಗೊಂಬೆಯು ಕುಳಿತ ಭಂಗಿಯಲ್ಲಿದೆ. ಇದರ ಮುಂದೆ ಟಮೋಟೊ, ಆಲುಗಡ್ಡೆಯಂತ ತರಕಾರಿಯನ್ನು ಬುಟ್ಟಿಯಲ್ಲಿ ಜೋಡಿಸಿ ಇಡಲಾಗಿದೆ. ಇವುಗಳ ನೈಜವಾದ ಬಣ್ಣ ಮತ್ತು ಆಕಾರವನ್ನು ನೀಡಲಾಗಿದೆ. ತರಕಾರಿ ಮಾರುವ ವ್ಯಕ್ತಿಯನ್ನು ಹಾಗೂ ತಕ್ಕಡಿಯನ್ನು ಕಲಾತ್ಮಕವಾಗಿ ನಿರ್ಮಿಸಲಾಗಿದೆ. ಕೆಂಪು, ನೀಲಿ, ಕಪ್ಪು, ಬಿಳಿ ಹಾಗೂ ಹಳದಿ ಬಣ್ಣಗಳಿಂದ ವ್ಯಕ್ತಿಯ ಗೊಂಬೆಯ ಆಕೃತಿಗೆ ಈ ಬಣ್ಣಗಳನ್ನು ಉಪಯೋಗಿಸಿ ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ ನೋಡಲು ಸುಂದರ ಆಕರ್ಷಕವಾದ ರೀತಿಯಲ್ಲಿ ಇದನ್ನು ನಿರ್ಮಿಸಲಾಗಿದೆ.

ವಿವಿಧ ಬಗೆಯ ಸೀಸದ ಕಡ್ಡಿಗಳು:

ಸೀಸ ಕಡ್ಡಿಗಳನ್ನು ವಿವಿಧ ರೀತಿಯ ಕ್ರಿಯಾತ್ಮಕವಾದ ಹಾಗೂ ಆಕರ್ಷಕವಾದ ರೀತಿಯ ಬಗೆ-ಬಗೆಯಾಗಿ ಇವುಗಳನ್ನು ಮರದಿಂದ ಸಿದ್ಧಪಡಿಸಲಾಗಿದೆ. ನೀಲಿ ಹಸಿರು ಕೆಂಪು, ಕಪ್ಪು, ಬೂದುಬಣ್ಣ ಹೀಗೆ ಹತ್ತು ಹಲವು ಬಣ್ಣಗಳಿಂದ ಇವುಗಳನ್ನು ಪೂರ್ಣಗೊಳಿಸಲಾಗಿದೆ. ಚಿಕ್ಕ ಮಕ್ಕಳ ಗಮನ ಸೆಳೆಯುವ ದೃಷ್ಟಿಯಲ್ಲಿ ಕುಶಲಕರ್ಮಿಯ ಕ್ರಿಯಾತ್ಮಕವಾಗಿ ಇವುಗಳು ವಿನ್ಯಾಸಗೊಳಿಸಲಾಗಿದೆ. ಪ್ರಾಣಿ ಪಕ್ಷಿಗಳು ಚಿಟ್ಟೆ ಹಾಗೂ ಜೋಕರ್ ಆಕಾರಗಳನ್ನು ನೀಡಿ ತಂತಿಯ ಸಹಾಯದಿಂದ ಕೈ ಕಾಲುಗಳನ್ನು ಮಾಡಲಾಗಿದೆ. ಕೆಲವು ಗೊಂಬೆಗಳಿಗೆ ಮರದಿಂದಲೇ

ಕಣ್ಣು ಕಿವಿಗಳನ್ನು ಮಾಡಿ ಜೋಡಿಸಲಾಗಿದೆ. ಕೆಲವು ವಿನ್ಯಾಸಕ ನಕ್ಷಾ ಚಿತ್ರಗಳಿಂದ ಇವುಗಳನ್ನು ಪೂರ್ಣಗೊಳಿಸಲಾಗಿದೆ.

ಮಣಿಯ ಮ್ಯಾಟ್:

ಇದನ್ನು ನೋಡುತ್ತಿರುವಾಗ ಆಟದ ಗೋಲಿಗಳನ್ನು ಜೋಡಿಸಿ ಇಟ್ಟಿರುವ ಭ್ರಮೆಯುಂಟಾಗುತ್ತದೆ. ದುಂಡಾದ ಆಕಾರದಲ್ಲಿ ನಿರ್ಮಿಸಿರುವ ಮಣಿಗಳನ್ನು ನೋಡಲು ಆಕರ್ಷಕವಾಗಿದೆ. ಇದನ್ನು ಅಷ್ಟೇ ಕಲಾತ್ಮಕ ರೀತಿಯಲ್ಲಿ ಹೆಣೆಯಲಾಗಿದೆ. ಕಪ್ಪು, ಹಳದಿ, ಕೇಸರಿ ಮಣಿಗಳನ್ನು ಮಧ್ಯದಲ್ಲಿ ಸೇರಿಸಿ ಸುತ್ತಲೂ ಕಪ್ಪು ಮಣಿಗಳಿಂದ ಇದನ್ನು ಪೂರ್ಣಗೊಳಿಸಲಾಗಿದೆ. ಈ ಮಣಿಗಳಿಗೆ **ವೆಜಿಟೇಬಲ್ ಡೈಯಿಸ್** ಬಣ್ಣಗಳನ್ನು ಬಳಸಲಾಗಿದೆ. ಇನ್ನೂ ವಿವಿಧ ಆಕಾರಗಳನ್ನು ಹೋಲುವಂತೆ ತುಂಬ ಅದ್ಭುತವಾಗಿ ಮಣಿಗಳನ್ನು ಪೋಣಿಸಿ ಅನೇಕ ಬಗೆಯ ಮ್ಯಾಟಗಳನ್ನು ನಿರ್ಮಿಸಲಾಗಿದೆ.

ದಂಪತಿ ಗೊಂಬೆಗಳು:

ಇಲ್ಲಿ ದಂಪತಿಗಳು ವಿಶ್ರಾಂತಿ ರೀತಿಯಲ್ಲಿ ಕುಳಿತುಕೊಂಡು ಚರ್ಚಿಸುತ್ತಿರುವಂತೆ ಕಲಾತ್ಮಾಕವಾಗಿ ಗೊಂಬೆಗಳನ್ನು ಕುಶಲಕರ್ಮಿಯು ಈ ಗೊಂಬೆಗಳನ್ನು ಸಿದ್ಧಪಡಿಸಲಾಗಿದೆ. ಈ ಗೊಂಬೆಗಳ ಕುಳಿತ ಭಂಗಿಯಲ್ಲಿವೆ. ಗಂಡು ಗೊಂಬೆಗೆ ಬ್ರಾಹ್ಮಣ ಪುರೋಹಿತ ರೂಪವನ್ನು ನೀಡಲಾಗಿದೆ. ತಲೆ ಹಿಂದಿಯ ಜುಟ್ಟು ಹಣೆಯ ಮೇಲು ನಾಮ ಧರಿಸಿರುವ ಜನಿವಾರ ಹಾಗೂ ಪಂಚೆಯ ಮೇಲುಡುಪು ಆಕರ್ಷಕ ರೀತಿಯಲ್ಲಿ ನಿರ್ಮಿಸಲಾಗಿದೆ. ನೀಲಿ ಹಳದಿ, ಬಿಳಿ ಬಣ್ಣವನ್ನು ವಸ್ತ್ರಗಳಿಗೆ ಉಪಯೋಗಿಸಲಾಗಿದೆ. ಕೇಸರಿ, ನೀಲಿ ಕೆಂಪು, ಕಪ್ಪು ಬಣ್ಣಗಳಿಂದ ಮಣಿ ಸರವನ್ನು ಇನ್ನೊಂದು ಸರವನ್ನು ಬಂಗಾರದ ಬಣ್ಣದಿಂದ ತೋರಿಸಲಾಗಿದೆ. ಬಿಳಿಯ ಬಣ್ಣವನ್ನು ಕಾಲು ಹಣೆಯ ವಿಭೂತಿಯ ನಾಮಕ್ಕೆ ಹಾಗೂ ಜನಿವಾರಕ್ಕೆ ಉಪಯೋಗಿಸಲಾಗಿದೆ. ಹೆಂಡತಿ ಗೊಂಬೆಯನ್ನು ಕುಳಿತ ಭಂಗಿಯಲ್ಲಿ ಕುಟ್ಟುವ ಕೆಲಸದಲ್ಲಿ ತೊಡಗಿರುವ ರೀತಿಯಲ್ಲಿ ಕರಕುಶಲ ಕರ್ಮಿಯು ಕಲಾತ್ಮಕವಾಗಿ ಬೊಂಬೆಗಳನ್ನು ನಿರ್ಮಿಸಿದ್ದಾರೆ. ಹೆಣ್ಣು ಗೊಂಬೆ ನೀಲಿ ಬಣ್ಣದಿಂದ ಸೀರೆಯನ್ನು ಹಾಗೂ ಬಿಳಿಯ ಬಣ್ಣವನ್ನು ಮೇಲಿನ ಉಡುಪಿಗೆ ತೋರಿಸಲಾಗಿದೆ. ತಲೆ ಕೂದಲು, ಕುಟ್ಟುವ ಸಾಧನಕ್ಕೆ ಕಪ್ಪು ಬಣ್ಣವನ್ನು ಉಪಯೋಗಿಸಿ, ಬಹು ಆಕರ್ಷಕ ರೀತಿಯಲ್ಲಿ ಈ ಗೊಂಬೆಗಳನ್ನು ನಿರ್ಮಿಸಲಾಗಿದೆ.

ಅಲಂಕಾರಿಕ ಸರಗಳು ಮತ್ತು ಕಿವಿಯೋಲೆಗಳು:

ಈ ಸರಗಳನ್ನು ನೋಡಿದಾಗ ಇವು ಮರದ ಕಟ್ಟಿಗೆಯಿಂದ ನಿರ್ಮಾಣವಾಗಿರುವುದು ನಂಬಲು ಸಾಧ್ಯವಾಗುವುದಿಲ್ಲ. ಅಷ್ಟೊಂದು ರೀತಿಯ' ಬಗೆ-ಬಗೆ ಕ್ರಿಯಾತ್ಮಕ ರೀತಿಯಲ್ಲಿ ಕುಶಲ ಕರ್ಮಿಯು ಇವುಗಳನ್ನು ನಿರ್ಮಿಸಿದ್ದಾನೆ. ಇದೇ ರೀತಿಯಾಗಿ ಕಿವಿಯೋಲೆಗಳನ್ನು ಸಹ ಸುಂದರ ಕಲಾತ್ಮಕ ರೀತಿಯ ಬಗೆ-ಬಗೆ ಕಿವಿಯೋಲೆಗಳನ್ನು ನಾವು ಇಲ್ಲಿ ನೋಡಬಹುದಾಗಿದೆ. ಕಟ್ಟಿಗೆಯಿಂದ ಸಣ್ಣ ಹಾಗೂ ಅತಿ ಸಣ್ಣ ಮಣಿಗಳನ್ನು ಮಾಡಿ ಅವುಗಳನ್ನು ಕಲಾತ್ಮಕವಾಗಿ ಜೋಡಿಸಿ ಬಣ್ಣಗಳಿಂದ ವಿವಿಧ ಆಕಾರಗಳ ನಕ್ಷಾ ಚಿತ್ರಗಳನ್ನು ನಿರ್ಮಿಸಿರುವುದು ನಿಕ್ಕೂ ಸೋಜಿಗದ ಸಂಗತಿಯೆಂದರೆ ತಪ್ಪಾಗಲಾರದರು. ಇಲ್ಲಿ ಸಾಕಷ್ಟು ಬಗೆ-ಬಗೆಯ ಸೂಕ್ಷ್ಮವಾದ ಆಕಾರಗಳಲ್ಲಿ ಇವುಗಳನ್ನು ನಿರ್ಮಿಸಿರುವುದನ್ನು ನಾವು ನೋಡಬಹುದಾಗಿದೆ.

ದಸರ ಗೊಂಬೆಗಳು:

ಈ ಗೊಂಬೆಗಳನ್ನು ಒಟ್ಟು-ಒಟ್ಟಿಗೆ ನೋಡಿದಾಗ ರಾಮಾಯಣ, ಮಹಾಭಾರತದ ಸನ್ನಿವೇಶಗಳು ಹಾಗೂ ಪಾತ್ರಧಾರಿಗಳು ನೆನಪಾಗುತ್ತಾರೆ. ಕಲಾತ್ಮಕ ರೀತಿಯಲ್ಲಿ ಇವುಗಳನ್ನು ನಿರ್ಮಿಸಿರುವ ಕಲಾವಿದನಿಗೆ ಧನ್ಯವಾದಗಳು ಹೇಳಲೇ ಬೇಕಾಗುತ್ತದೆ. ಯಾಕೆಂದರೆ ಪೌರಾಣಿಕಕ್ಕೆ ಸಂಬಂಧಿಸಿದಂತಹ ಕೆಲವು ಗೊಂಬೆಗಳು ಸ್ತ್ರೀಗೊಂಬೆಗಳು ಸಖಿಯರ ಗೊಂಬೆಗಳು ಹೀಗೆ ದೇವಾನುದೇವತೆಯ ಹತ್ತು ಹಲವು ರೀತಿಯ ಗೊಂಬೆಗಳ ನೋಡಿದಾಗ ರಾಮಾಯಣ, ಮಹಾಭಾರತ ಹಾಗೂ ಪುರಾಣ ಕಥೆಗಳು ನಮ್ಮ ಕಣ್ಣಾ ಮುಂದೆ ಬರುವಷ್ಟು ರೀತಿಯಲ್ಲಿ ಕುಶಲಕರ್ಮಿಯಿಂದ ನಿರ್ಮಾಣವಾಗಿರುವುದು ಇಲ್ಲಿ ನೋಡಬಹುದಾಗಿದೆ. ರಾವಣ, ರಾಮ, ಸೀತೆ, ಹನುಮಂತ, ರಾಜ, ರಾಣಿ, ಶಿವ ಪಾರ್ವತಿ, ಸೈನಿಕ, ಆನೆ, ಕುದುರೆ, ಒಂಟೆ ಹೀಗೆ ಹತ್ತು ಹಲವು ರೀತಿಯ ಗೊಂಬೆಗಳನ್ನು ನಾವು ನೋಡಬಹುದಾಗಿದೆ. ಈ ಎಲ್ಲಾ ಗೊಂಬೆಗಳಿಗೆ, ಕೇಶವಿನ್ಯಾಸ, ವಸ್ತ್ರ ವಿನ್ಯಾಸ, ಆಭರಣ ವಿನ್ಯಾಸಗಳನ್ನು ಪಾತ್ರಗಳಿಗೆ ಒಪ್ಪುವ ಬಣ್ಣಗಳಿಂದ ಈ ಗೊಂಬೆಗಳನ್ನು ಪೂರ್ಣಗೊಳಿಸಲಾಗಿದೆ. ಅಲಂಕಾರಿಕ ಗಿಡಗಳು, ಮನೆಗಳು, ಗುಡಿಸಲಗಳು ಹೀಗೆ ಸನ್ನಿವೇಶಕ್ಕೆ ತಕ್ಕಂತೆ ಕಲಾತ್ಮಕವಾಗಿ ನಿರ್ಮಿಸಲಾಗಿದೆ.

ಜಿಕು ಕುದರೆಗಳು:

ಚಿಕ್ಕ ಮಕ್ಕಳಿಗೆಂದೆ ವಿಶಿಷ್ಟ ರೀತಿಯಾಗಿ ಇವುಗಳ ಕಲಾತ್ಮಕವಾಗಿ ಬಸರಿ ಮರದಿಂದ ನಿರ್ಮಿಸಲಾಗಿದೆ. ಕುದುರೆಗಳ ಮೇಲೆ ಕುಳಿತಾಗ ಹಿಂದಕ್ಕೆ-ಮುಂದಕ್ಕೆ ಬಾಗುವ ರೀತಿಯಲ್ಲಿ ನಿರ್ಮಿಸಲಾಗಿದೆ. ಚಿಕ್ಕ ಮಕ್ಕಳನ್ನು ಆಟಿಕೆಯ ಕುದುರೆ ಮೇಲೆ ಕುಳಿತುಕೊಳ್ಳಲು ಯೋಗ್ಯವಾದ ಸೀಟುಗಳನ್ನು ಮರದಿಂದಲೇ ಮಾಡಲಾಗಿದೆ. ಇಲ್ಲಿ ಸಾಕಷ್ಟು ಬಣ್ಣಗಳ ಕುದುರೆಗಳು ಇಲ್ಲಿ ದೊರೆಯುತ್ತವೆ. ಕಪ್ಪು, ಬಿಳಿ ಬಣ್ಣದಿಂದ ಕುದುರೆ ಕಣ್ಣುಗಳು ಹಾಗೂ ಕಪ್ಪು ಬಣ್ಣವನ್ನು ಉಪಯೋಗಿಸಿ ಕಾಲುಗಳನ್ನು ಪೂರ್ಣಗೊಳಿಸಲಾಗಿದೆ. ಬೇಕಾದ ಕಡೆ ನಕ್ಷಾ ಕೃತಿ ಬಳ್ಳಿಯನ್ನು ಹೋಲುವ ಗೆರೆಗಳನ್ನು ಹಾಕಲಾಗಿದೆ.

ಕುಂಕುಮದ ಭರಣಿಗಳು:

ವಿವಿಧ ಆಕಾರದ ಕುಂಕುಮದ ಭರಣಿಗಳನ್ನು ಇಲ್ಲಿ ನೋಡಬಹುದಾಗಿದೆ. ಈ ಭರಣಿಗಳನ್ನು ಮುಚ್ಚಲು ತೆಗೆಯುವ ರೀತಿಯಲ್ಲಿ ಸಿದ್ಧಪಡಿಸಲಾಗಿದೆ. ಇವುಗಳ ಒಳ ಭಾಗದಲ್ಲಿ ಕುಂಕುಮವನ್ನು ಸಂಗ್ರಹಿಸಲು ಜಾಗವನ್ನು ಅಚ್ಚುಕಟ್ಟಾಗಿ ನಿರ್ಮಿಸಲಾಗಿದೆ. ಅನೇಕ ರೀತಿಯ ಬಣ್ಣ-ಬಣ್ಣದ ಕಲಾತ್ಮಕವಾಗಿ ನಿರ್ಮಿಸಿರುವ ಭರಣಿಗಳನ್ನು ನೋಡಬಹುದಾಗಿದೆ. ಸಣ್ಣ ಚುಕ್ಕೆಗಳು ಹೂ-ಬಳ್ಳಿಗಳ ನಕ್ಷಾ ಚಿತ್ರಗಳನ್ನು ಭರಣಿಯ ಮೇಲೆ ಚಿತ್ರಿಸಿ ಸುಂದರಗೊಳಿಸಲಾಗಿದೆ.

ಏಣಿಕೆಯ ಮಣಿ ಕಟ್ಟುಗಳು:

ಬಣ್ಣ-ಬಣ್ಣದ ಮಣಿಗಳು ನೋಡುತ್ತಲೇ ದೊಡ್ಡವರು ಸಣ್ಣವರು ಎನ್ನದೇ ಎಲ್ಲರನ್ನು ಆಕರ್ಷಿಸುವಂತೆ ಸಿದ್ಧಪಡಿಸಲಾಗಿದೆ. ಎಣಿಕೆಯ ಮಣಿಗಳು ಚಿಕ್ಕಮಕ್ಕಳಿಗೆ ಪಾಠವನ್ನು ಆಟವಾಡುತ್ತಾ ಜ್ಞಾನವನ್ನು ನೀಡಬೇಕಾಗುತ್ತದೆ. ಆಗ ಮಕ್ಕಳು ಆಟದೊಂದಿಗೆ ಪಾಠವನ್ನು ಕಲಿಯುತ್ತಾರೆ. ಮಣಿಗಳಿಗೆ ಆಕರ್ಷಕ ಬಣ್ಣಗಳನ್ನು ಉಪಯೋಗಿಸಿ ಕಟ್ಟಿಗೆಯ ಸ್ಟ್ಯಾಂಡಗೆ ದಪ್ಪದಾದ ತಂತಿ ಅಥವಾ ಕಡ್ಡಿಯಿಂದ ಪೋಣಿಸಲಾಗಿದೆ. ಮಣಿಗಳ ಎಣಿಸುತ್ತಾ ಗಣಿತದ ಲೆಕ್ಕವನ್ನು ಸರಾಗವಾಗಿ ಕಲಿಯಬಹುದಾಗಿದೆ.

ನೀಲ್ಗುದರೆ:

ಈ ಚಿತ್ರದಲ್ಲಿ ಜಾತ್ರೆಗಳ ಸಂದರ್ಭದಲ್ಲಿ ನೋಡುವಂಹ 'ನೀಲ್ಗುದುರೆ' ಆಟದ ರೀತಿ ಹೋಲುವಂತೆ ಇದನ್ನು ನಿರ್ಮಿಸಲಾಗಿದೆ. ಕುದುರೆಯನ್ನು ನಿರ್ಮಿಸಿ ಮೇಲೆ ಮನುಷ್ಯ ಆಕೃತಿಯ ಗೊಂಬೆಯನ್ನು ನಿರ್ಮಿಸಿ ಕುದರೆಗೆ ಕಟ್ಟಿರುವ ಹಗ್ಗವನ್ನು ಇದರ ಕೈಯಲ್ಲಿ ಹಿಡಿದಿರುವಂತೆ ಜೋಡಿಸಲಾಗಿದೆ. ಕೆಳಭಾಗಕ್ಕೆ ಗಾಲಿಗಳನ್ನು ಜೋಡಿಸಲಾಗಿದೆ. ಕುದುರೆಗೆ ಹಸಿರು, ಕಂದು, ಕೆಂಪು, ತಿಳಿ ಹಳದಿ ಹಾಗೂ ಬಿಳಿಯ ಬಣ್ಣಗಳನ್ನು ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಕುದುರೆ ಮುಖಕ್ಕೆ, ಕಿವಿಗೆ, ದೇಹದ ಭಾಗಕ್ಕೆ ಕಪ್ಪು ಬಣ್ಣವನ್ನು, ಕಣ್ಣಿಗೆ, ಬಾಯಿಯ ಮುಂಭಾಗಕ್ಕೆ ತೋರಿಸಲಾಗಿ, ಕುದುರೆಯ ಬಾಲಕ್ಕೆ ಕಂದು ಹಾಗೂ ಕಪ್ಪು ಬಣ್ಣಗಳನ್ನು ಉಪಯೋಗಿಸಿ ಪೂರ್ಣಗೊಳಿಸಲಾಗಿದೆ. ದೇಹದ ಭಾಗಕ್ಕೆ ನಕ್ಷಾ ಚಿತ್ರ ರೇಖೆ ಹಾಗೂ ಚುಕ್ಕಿಗಳಿಂದ ಪೂರ್ಣಗೊಳಿಸಲಾಗಿದೆ. ಮನುಷ್ಯ ಆಕೃತಿಗೆ ಕೆಂಪು ಬಣ್ಣವನ್ನು ಉಪಯೋಗಿಸಿ ಮೇಲಿನ ಅಂಗಿಯನ್ನು ತಿಳಿ ಹಳದಿ, ಕೈಗೆ, ಮುಖಕ್ಕೆ ಬಳಸಲಾಗಿದೆ. ಕಪ್ಪು ಬಣ್ಣವನ್ನು ಕಣ್ಣು, ಮೂಗು, ಮೀಸೆ ಹಾಗೂ ತಲೆಯ ಭಾಗಕ್ಕೆ ಉಪಯೋಗಿಸಿ ಪೂರ್ಣಗೊಳಿಸಲಾಗಿದೆ. ಕೆಳ ಭಾಗದ ಗಾಲಿಗಳಿಗೆ ನೀಲಿ, ಗುಲಾಬಿ, ಕೇಸರಿ, ಹಳದಿ ಬಣ್ಣಗಳಿಂದ ತೋರಿಸಲಾಗಿದೆ. ಒಟ್ಟಾರೆಯಾಗಿ ಬಣ್ಣಗಳನ್ನು ಹಾಲೆ ಮರದ ಕಟ್ಟಿಗೆಯನ್ನು ಉಪಯೋಗಿಸಿ ಸುಂದರವಾಗಿ ಕುದುರೆ ಸವಾರ ಗೊಂಬೆಯನ್ನು ನಿರ್ಮಿಸಿ, ತೋರಿಸಲಾಗಿದೆ.

ಟೆಂಪೋ ವಾಹನ:

ಇದನ್ನು ನೋಡಿದರೆ ತಕ್ಷಣ ಎಲ್ಲೋ ದೂರದಲ್ಲಿ ನಿಜವಾದ ಟೆಂಪೋವನ್ನೆ ನೋಡುವ ಅನುಭವಾಗುತ್ತದೆ. ಅಷ್ಟು ಕಲಾತ್ಮಕವಾಗಿ ಸುಂದರವಾಗಿ ನಿರ್ಮಿಸಲಾಗಿದೆ. ವಾಹನದ ನಾಲ್ಕು ಗಾಲಿಗಳು ನೈಜ ರೂಪದ ಬಣ್ಣವನ್ನು ನೀಡಲಾಗಿದೆ. ವಾಹನದ ಮೇಲುಭಾಗದ ಒಳಗಡೆ ಚಾಲಕನು ಕುಳಿತುಕೊಳ್ಳುವ ಸೀಟನ್ನು ಸಹ ನಿರ್ಮಿಸಲಾಗಿದೆ. ಮುಂಭಾಗ, ಪಕ್ಕದ ಭಾಗದಲ್ಲಿ ಕಿಟಕಿಗಳನ್ನು ನಿರ್ಮಿಸಲಾಗಿದೆ. ಹಿಂಬದಿಯಲ್ಲಿ ನೈಜ ವಾಹನಗಳಲ್ಲಿ ಸರಕನ್ನು ಸಾಗಿಸುವ ರೀತಿಯಲ್ಲಿ ಸ್ಥಳಾವಕಾಶವನ್ನು ನಿರ್ಮಿಸಲಾಗಿದೆ. ಮರದ ನೈಜ ಬಣ್ಣವನ್ನು ಉಳಿಸಿ, ಪಾಲಿಶ್, ಬಿಳಿ, ನೀಲಿ ಹಾಗೂ ಕೆಂಪು ಬಣ್ಣಗಳನ್ನು ಅವಕಾಶವಿರುವ ಜಾಗಕ್ಕೆ ಬಳಸಿ

ಪೂರ್ಣಗೊಳಿಸಲಾಗಿದೆ. ಮುಂಭಾಗ ವಾಹನ ಲೈಟ್‌ಗಳನ್ನು ಹೋಲುವಂತಹ ಗುಂಡಿ (ಬಟನ್)ಗಳನ್ನು ಬಳಸಲಾಗಿದೆ.

ಕೀ ಬಂಚುಗಳು:

ಕ್ರಿಯಾತ್ಮಕ ಹಾಗೂ ಬಹು ಆಕರ್ಷಕ ನೋಡಲು ಸುಂದರ, ನೋಡಿದೊಡನೆ ತೆಗೆದುಕೊಳ್ಳಬೇಕೆನ್ನುವ ಆಸೆ ನೋಡಿದ ಪ್ರತಿಯೊಬ್ಬರಿಗೂ ಮನಸ್ಸಿನಲ್ಲಿ ಉಂಟಾಗುವಂತಹ ಸುಂದರ, ಕ್ರಿಯಾತ್ಮಕ ಕೀ ಬಂಚುಗಳನ್ನು ಇಲ್ಲಿ ನೋಡಬಹುದಾಗಿದೆ. ಅನೇಕ ಆಕಾರ ಮನುಷ್ಯನಂತೆ ಹೋಲುವ ಗೊಂಬೆ, ಪ್ರಾಣಿಗಳಂತೆ, ಪಕ್ಷಿಗಳಂತೆ, ವಿವಿಧ ಆಕಾರಗಳನ್ನು ಹೋಲುವಂತೆ ಇವುಗಳನ್ನು ನಿರ್ಮಿಸಲಾಗಿದೆ. ಇವುಗಳನ್ನು ಅಷ್ಟೇ ಅಚ್ಚುಕಟ್ಟಾಗಿ ಪೋಣಿಸಿ ಮಾರಾಟಕ್ಕೆ ಸಿದ್ಧಪಡಿಸಲಾಗಿದೆ. ವಿವಿಧ ಬಣ್ಣಗಳ ಕೀ ಬಂಚುಗಳನ್ನು ನೋಡಬಹುದಾಗಿದೆ. ಕೆಲವು ಗೊಂಬೆಗಳಿಗೆ ಟೋಪಿಗಳು ಹಾಗೂ ಕಿರೀಟದಂತಹ ಆಕೃತಿ ಹೋಲುವಂತೆ ಸಿದ್ಧಪಡಿಸಿ, ಕೈ ಕಾಲುಗಳನ್ನು ಹೋಲುವಂತೆ ಪೋಣಿಸಿರುವುದು ನಿಜಕ್ಕೂ ನೋಡಲು ವಿಸ್ಮಯವಾಗಿದೆ.

ಶುಭ ಸಮಾರಂಭದ ಗೊಂಬೆಗಳು:

ಈ ಗೊಂಬೆಗಳನ್ನು ನೋಡಿದರೆ ನಾವು ಯಾವುದೋ ಶುಭ ಸಮಾರಂಭಕ್ಕೆ ಬಂದಿರುವಂತೆ ಒಂದು ನಿಮಿಷ ಭ್ರಮೆಯುಂಟಾಗುತ್ತದೆ. ಇಲ್ಲಿ ಎಲ್ಲಾ ಗೊಂಬೆಗಳು ಕುಳಿತ ಭಂಗಿಯಲ್ಲಿವೆ. ಇವುಗಳಿಗೆ ವಸ್ತ್ರಗಳಿಗೆ ಹಸಿರು, ಬಿಳಿ, ಕೆಂಪು ಬಣ್ಣಗಳಿಂದ ಪೂರ್ಣಗೊಳಿಸಿ, ಕಣ್ಣು, ಮೀಸೆ, ಹುಬ್ಬುಗಳನ್ನು ಕಪ್ಪು ಬಣ್ಣದಲ್ಲಿ ತೋರಿಸಲಾಗಿದೆ. ತಲೆಯ ಮೇಲೆ ಪೇಟವನ್ನು ಅತ್ಯಂತ ಸುಂದರ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಶುಭ ಸಮಾರಂಭಕ್ಕೆ ನುಡಿಸುವ ಎಲ್ಲಾ ತರಹದ ವಾದ್ಯಗಳನ್ನು ಇಲ್ಲಿ ಸುಂದರ ಹಾಗೂ ಕಲಾತ್ಮಕವಾಗಿ ನಿರ್ಮಿಸಲಾಗಿದೆ. ನಿಜವಾದ ವಾದ್ಯಗಳನ್ನು ಹೋಲುವಂತೆ ಸಾಮಾನುಗಳನ್ನು ಸಿದ್ಧಪಡಿಸಲು ಸಾಕಷ್ಟು ತಾಳ್ಮೆ, ಕ್ರಿಯಾತ್ಮಕತೆ ಬುದ್ಧಿವಂತಿಕೆ ವ್ಯಯಿಸಿ ಗೊಂಬೆಗಳನ್ನು ಪೂರ್ಣಗೊಳಿಸಲಾಗಿದೆ.

ಪೌರಾಣಿಕ ಗೊಂಬೆಗಳು:

ದೋಣಿಯಲ್ಲಿ ಕುಳಿತುಕೊಂಡು ಹೋಗುತ್ತಿರುವಂತೆ ಇವುಗಳನ್ನು ನಿರ್ಮಿಸಲಾಗಿದೆ. ದೋಣಿಯನ್ನು ಕೆಂಪು, ಬಿಳಿ, ಹಸಿರು, ಕಪ್ಪು, ಹಳದಿ, ಬಣ್ಣಗಳಿಂದ ಕಲಾತ್ಮಕ ನಕ್ಷಾ ಚಿತ್ರಗಳಿಂದ

ಪೂರ್ಣಗೊಳಿಸಲಾಗಿದೆ. ಇನ್ನೂ ದೋಣಿಯಲ್ಲಿ ಕುಳಿತು ಚರ್ಚಿಸುತ್ತಾ ಸಾಗುತ್ತಿರುವ ದೇವಾನುದೇವತೆಗಳ ಗೊಂಬೆಗಳನ್ನು ಸುಂದರವಾಗಿ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ತಲೆಯ ಮೇಲಿನ ಕೀರಿಟ, ಕೊರಳಲ್ಲಿ ಧರಿಸಿದ ಆಭರಣಗಳನ್ನು ಸುಂದರವಾಗಿ ನಿರ್ಮಿಸಲಾಗಿದೆ. ನೀಲಿ, ಕೇಸರಿ, ಹಳದಿ, ಬಣ್ಣಗಳಿಂದ ವಸ್ತ್ರ, ಮೈಬಣ್ಣವನ್ನು ಪೂರ್ಣಗೊಳಿಸಿ, ಕಪ್ಪು ಬಣ್ಣದಿಂದ ಕಣ್ಣು, ಕೇಶವನ್ನು ತೋರಿಸಲಾಗಿದೆ. ದೋಣಿಯಲ್ಲಿ ಚರ್ಚೆಯೊಂದಿಗೆ ಸಾಗುತ್ತಿರುವ ದೃಶ್ಯವೂ ಸಹ ಇಲ್ಲಿ ಕಾಣಬಹುದು.

ಜೋಕರ್ ಗೊಂಬೆಗಳು:

ಇಲ್ಲಿ ಜೋಡಿ ಗೊಂಬೆಗಳು ಮನಸ್ಸಿಗೆ ಮುದ ನೀಡುವಂತೆ ಇವುಗಳನ್ನು ನಿರ್ಮಿಸಲಾಗಿದೆ. ತಲೆಯ ಮೇಲೆ ಉದ್ದವಾದ ಟೋಪಿ ನೋಡಲು ಸೊಗಸಾಗಿ ಕಾಣುವಂತಿದೆ. ದೇಹದ ಭಾಗಕ್ಕೆ ಚಕ್ರಗಳು ಹೋಲುವಂತಹ ಬಿಲ್ಲೆಗಳನ್ನು ರಚಿಸಿದ್ದಾರೆ. ಇವುಗಳನ್ನು ತಳಭಾಗಕ್ಕೆ ವೃತ್ತಕಾರದಿಂದ ಮೇಲ್ಭಾಗದವರೆಗೆ ಒಂದೇ ಕಟ್ಟಿಗೆ ಕಡ್ಡಿಯಿಂದ ಮಾಡಿ, ಇದಕ್ಕೆ ದೊಡ್ಡದು, ಚಿಕ್ಕದಾದ ಬಿಲ್ಲೆಗಳನ್ನು ನೀಳುವಾದ ಅಂಗಿಯನ್ನು ಹೋಲುವಂತೆ ಪೋಣಿಸಲಾಗಿದೆ. ಈ ಬಿಲ್ಲೆಗಳನ್ನು ಸರಾಗವಾಗಿ ತಿರುಗಿಸಬಹುದಾಗಿದೆ. ಟೋಪಿ ಕೆಂಪು, ಬಣ್ಣವನ್ನು ಬಾಯಿಗೆ, ಹುಬ್ಬಿಗೆ, ಉಡುಪಿಗೆ ಹಾಗೂ ತಲೆಯ ಮೇಲಿನ ಟೋಪಿ ಭಾಗಕ್ಕೆ ಬಳಸಲಾಗಿದೆ. ಕಪ್ಪು ಬಿಳಿಯ ಬಣ್ಣವನ್ನು ಕಣ್ಣುಗಳನ್ನು ತೋರಿಸಲು ಇಲ್ಲಿ ಬಳಸಲಾಗಿದೆ. ಜೋಕರ್ ಗೊಂಬೆಗಳು ನೋಡಲು ಆಕರ್ಷವಾಗಿ ವಿನ್ಯಾಸ ಮಾಡಲಾಗಿದೆ.

ಮನುಷ್ಯ ಗೊಂಬೆ:

ಈ ಗೊಂಬೆಯನ್ನು ಮನುಷ್ಯ ಆಕೃತಿ ಹೋಲುವಂತೆ ಕಲಾತ್ಮಕವಾಗಿ ನಿರ್ಮಿಸಿದ್ದಾರೆ. ತಳಭಾಗದಿಂದ ಕುತ್ತಿಗೆಯ ಭಾಗದವರೆಗೂ ಒಂದೇ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ತಲೆಭಾಗದಿಂದ ಅಲುಗಾಡುವ ರೀತಿಯಲ್ಲಿ ಇದನ್ನು ಮಾಡಲಾಗಿದೆ. ದೇಹದ ಭಾಗದಿಂದ ನೀಳವಾದ ಕೋಟನ್ನು ಹೋಲುವಂತಹ ಉಡುಪನ್ನು ನಿರ್ಮಿಸಲಾಗಿದೆ. ಕೆಳಭಾಗಕ್ಕೆ ಸ್ವಲ್ಪ ಧೋತ್ರವು ಕಾಣುವಂತೆ ಮಾಡಲಾಗಿದೆ. ದೊಡ್ಡದಾದ ಕಣ್ಣುಗಳು, ಮೂಗನ್ನು ಹಾಗೂ ಸ್ವಲ್ಪ ಮೀಸೆಯನ್ನು ತೋರಿಸಲಾಗಿದೆ. ತಲೆಯ ಪೇಟದ ಭಾಗಕ್ಕೆ ನೀಲಿ ಬಿಳಿ ಕಂದು ಬಣ್ಣಗಳಿಂದ ತೋರಿಸಲಾಗಿದೆ. ನೀಳವಾದ ಮೇಲಿನ ಉಡುಪಿಗೆ ಕೆಂಪು ಬಣ್ಣವನ್ನು ಧೋತ್ರದ ಭಾಗಕ್ಕೆ

ಬಿಳಿಯ ಬಣ್ಣವನ್ನು ಬಳಸಲಾಗಿದೆ. ತಳಪಾಯಕ್ಕೆ ಕಪ್ಪು ಬಣ್ಣವನ್ನು ಉಪಯೋಗಿಸಿ ಗೊಂಬೆಯನ್ನು ಪೂರ್ಣಗೊಳಿಸಲಾಗಿದೆ. ಈ ಸ್ಪ್ರಿಂಗ್ ಗೊಂಬೆ ನೋಡಲು ಅದ್ಭುತವಾಗಿದೆ.

ವಕೀಲ ಗೊಂಬೆಗಳು:

ಇಲ್ಲಿ ಅನೇಕ ಸುಂದರವಾದ ಹಾಗೂ ಆಕರ್ಷಕವಾದ ಸಣ್ಣಗೊಂಬೆಗಳು ಹಾಗೂ ವ್ಯಕ್ತಿ ಗೊಂಬೆಗಳನ್ನು ನೋಡಬಹುದಾಗಿದೆ. ಸಣ್ಣ ಗೊಂಬೆಗಳು ಇಲ್ಲಿ ವಿಶಿಷ್ಟ ರೀತಿಯಲ್ಲಿ ನಿರ್ಮಿಸಲಾಗಿದೆ. ಇವುಗಳ ತಲೆಯ ಮೇಲೆ ತೆಂಗಿನ ನಾರು, ಬಟ್ಟೆ ತುಂಡುಗಳನ್ನು ಅಂಟಿಸಲಾಗಿದೆ. ಮೈ ಮೇಲೆ ಸಣ್ಣದಾದ ಬಣ್ಣದ ಬಟ್ಟೆಗಳ ತುಂಡುಗಳಿಂದ ಅಲಂಕರಿಸಲಾಗಿದೆ. ಕಪ್ಪು ಬಣ್ಣಗಳಿಂದ ಕಣ್ಣು, ಮೂಗು, ಬಾಯಿಯನ್ನು ತೋರಿಸಲಾಗಿದೆ. ಕೋರ್ಟಿಗೆ ವಾದ ಮಂಡಿಸಲು ಸಿದ್ಧವಾಗಿ ನಿಂತಿರುವ ವಕೀಲರಂತೆ ಇವುಗಳನ್ನು ಒಂದೇ ಕಟ್ಟಿಗೆಯ ಪಟ್ಟಿಯಲ್ಲಿ ಜೋಡಿಸಲಾಗಿದೆ.

ಎಣಿಕೆಯ ಗೊಂಬೆಗಳು:

ಈ ಗೊಂಬೆಗಳು ಚಿಕ್ಕ ಮಕ್ಕಳಿಗೆ ಗಣಿತ ಕಲಿಕೆಗೆ ಸಹಾಯವಾಗುವಂತೆ ಗೊಂಬೆಗಳ ಆಕಾರದಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಬಿಲ್ಲೆ ಆಕಾರಗಳಲ್ಲಿ ನಿರ್ಮಿಸಿ ತೆಳುವಾದ ಕಟ್ಟಿಗೆ ಜೋಡಿಸಿ ಇದರ ತಲೆಯನ್ನು ವಿವಿಧ ಆಕಾರಗಳನ್ನು ನೀಡಿ ಕೆಲವು ಸುಲಭವಾಗಿ ಎಳೆಯುವುದಕ್ಕೆ ಗೊಂಬೆಗಳಿಗೆ ಗಾಲಿ ಚಕ್ರವನ್ನು ಅಳವಡಿಸಲಾಗಿದೆ. ಕಣ್ಣು ಮೂಗು, ಕಿವಿಗಳನ್ನು ಜೋಡಿಸಿ ಮಾರ್ಕರು ಪೆನ್ನಿನಿಂದ ಕಣ್ಣು, ಬಾಯಿ ತೋರಿಸಲಾಗಿದೆ.

ನೆನಪಿನ ಕಾಣಿಕೆಗಳು:

ಇಲ್ಲಿ ವಿವಿಧ ಬಗೆಯ ತಂತ್ರ, ಶೈಲಿ, ಹಾಗೂ ವಿಧಾನಗಳಿಂದ ವೃತ್ತಕಾರ, ಚೌಕಾಕಾರ, ಆಯತಾಕಾರಗಳ ರೀತಿಯಲ್ಲಿ ನಿರ್ಮಿಸಲಾಗಿದೆ. ಸಣ್ಣದಿಂದ ದೊಡ್ಡ ನೆನಪಿನ ಕಾಣಿಕೆಗಳನ್ನು ಮಾಡಲಾಗಿದೆ. ಇಲ್ಲಿ ವಿಶೇಷವೇನೆಂದರೆ ಶಾಶ್ವತವಾದ ಮರದ ಬಣ್ಣವನ್ನು ಉಳಿಸಿ, ಚೆನ್ನಾಗಿ ಹೊಳೆಯುವಂತೆ ಪಾಲಿಶ್ ಮಾಡಿ ಇವುಗಳೀಗೆ ಅಂದವನ್ನು ಹೆಚ್ಚಿಸಲಾಗಿದೆ. ಮೇಲ್ಭಾಗಕ್ಕೆ ಅನೇಕ ಆಕಾರಗಳನ್ನು ನೀಡಿ, ಕೆಳ ಭಾಗಕ್ಕೆ ತಳಪಾಯಗಳನ್ನು ನೀಡಲಾಗಿದೆ. ನೋಡಲು ಆಕರ್ಷಕ ಸುಂದರವಾಗಿವೆ.

ಕಪ್ಪರ್ ಬಾಲುಗಳು:

ಕಟ್ಟಿಗೆಯಿಂದ ಉದ್ದವಾದ ಕೋಲನ್ನು ನಿರ್ಮಿಸಿ ಇದರ ತುದಿಯ ಭಾಗದಲ್ಲಿ ಕಪ್ಪನ್ನು ಸಿದ್ಧಪಡಿಸಲಾಗಿದೆ. ಈ ಕಪ್ಪಿನ ಕೆಳಭಾಗಕ್ಕೆ ದಾರದ ಸಹಾಯದಿಂದ ಬಾಲನ್ನು ಕಟ್ಟಲಾಗಿದೆ. ಕೈಯಿಂದ ಎಳೆದು ಬಾಲನ್ನು ಕಪ್ಪಿನಲ್ಲಿ ಹಾಕಬೇಕು. ಒಂದು ರೀತಿ ಮನಸ್ಸಿಗೆ ಮುದ ನೀಡುವ ಅಟವಾಗಿದೆ. ಕಪ್ಪರ್ ಬಾಲುಗಳನ್ನು ವಿವಿಧ ಬಣ್ಣಗಳನ್ನು ಉಪಯೋಗಿಸಿ ನಿರ್ಮಿಸಲಾಗಿದೆ. ಕೆಲವು ಕಪ್ಪರ್ ಬಾಲುಗಳಿಗೆ ನಕ್ಷಾ ಚಿತ್ರಗಳನ್ನು ಬಿಡಿಸಿ, ಕೆಲವನ್ನೂ ಕ್ರಿಯಾತ್ಮಕವಾಗಿ ಸುಂದರವಾಗಿ ನಿರ್ಮಿಸಲಾಗಿದೆ.

ವಿವಿಧ ಬಗೆಯ ಬಳೆಗಳು:

ಬಗೆ-ಬಗೆ ಆಕಾರಗಳನ್ನು ನೀಡಿ ಹಾಲೆಮರದ ಕಟ್ಟಿಗೆಯಿಂದ ಬಳೆಯನ್ನು ತಯಾರಿಸಲಾಗಿದೆ. ನೋಡಲು ಸುಂದರ ಆಕರ್ಷಕವಾಗಿ ಕಾಣುವಂತೆ ಮಾಡಿದ್ದಾರೆ ಸಣ್ಣದಾಗಿ, ದಪ್ಪದಾಗಿ, ಹಾಗೂ ಅತಿ ಸಣ್ಣದಾಗಿ ಬಳೆಗಳನ್ನು ಸಿದ್ಧಪಡಿಸಲಾಗಿದೆ. ಇವುಗಳ ಮೇಲೆ ವೆಜಿಟೇಬಲ್ ಡೈಯಿಸ್‌ನ ಬಣ್ಣವನ್ನು ಲೇಪಿಸಿ, ಅವಶ್ಯಕವಿದ್ದಲ್ಲಿ ಕೆಲವು ಬಣ್ಣಗಳನ್ನು ಉಪಯೋಗಿಸಿಕೊಂಡು ನಾನಾ ರೀತಿಯ ನಕ್ಷಾ ಚಿತ್ರಗಳನ್ನು ಚಿತ್ರಿಸಿ ಇನ್ನಷ್ಟು ಬಳೆಗಳಿಗೆ ಮೆರಗನ್ನು ಕುಶಲ ಕರ್ಮಿಯು ಇವುಗಳ ಅಂದವನ್ನು ಹೆಚ್ಚಿಸಿದ್ದಾನೆ.

ವಿವಿಧ ರೀತಿಯ ಆಟಿಕೆಗಳು:

ಈ ಚಿತ್ರದಲ್ಲಿ ಸಾಕಷ್ಟು ಬಗೆ-ಬಗೆಯ ಸಣ್ಣ ಮಕ್ಕಳ ಆಟಿಕೆಗಳನ್ನು ನಾವು ಇಲ್ಲಿ ನೋಡಬಹುದಾಗಿ ಮಕ್ಕಳು ಆಟಿಕೆ ಆಡುವ ಸಾಮಾನುಗಳೆ ಹೆಚ್ಚಾಗಿ ಇಲ್ಲಿ ತಯಾರಾಗುತ್ತವೆ. ಇಲ್ಲಿ ಕೆಲವು ಕುಳಿತಲ್ಲೆ ಆಟವಾಡುವಂತಹ ಗೊಂಬೆಗಳಾದರೆ ಇನ್ನೂ ಕೆಲವು ಗೊಂಬೆಗಳಿಗೆ ಗಾಲಿಯನ್ನು ಜೋಡಿಸಲಾಗಿದೆ. ಇಂತಹ ಗೊಂಬೆಗಳಿಗೆ ದಾರವನ್ನು ಕಟ್ಟಿ ಎಳೆಯುವಂತೆ ಇವುಗಳನ್ನು ಸಿದ್ಧಪಡಿಸಲಾಗಿದೆ. ವಿವಿಧ ರೀತಿಯ ಪ್ರಾಣಿ, ಪಕ್ಷಿ ಹಾಗೂ ಕ್ರಿಯಾತ್ಮಕ ಗೊಂಬೆಗಳಿಗೆ ಹಲವು ಬಣ್ಣಗಳನ್ನು ಉಪಯೋಗಿಸಿ ಇವುಗಳನ್ನು ಪೂರ್ಣಗೊಳಿಸಲಾಗಿದೆ.

ವಿವಿಧ ಬಗೆಯ ಪಕ್ಷಿಗಳು:

ಇಲ್ಲಿ ನಾನಾ ರೀತಿಯ ಪಕ್ಷಿಗಳನ್ನು ನೋಡಬಹುದಾಗಿದೆ. ಕೋಳಿ, ಕಾಗೆ, ಗಿಳಿ, ಗುಬ್ಬಿ, ನವಿಲು ಬಾತುಕೋಳಿ, ಪಾರಿವಾಳ ಹೀಗೆ ನೋಡಿದಷ್ಟು ಸಾಕಷ್ಟು ಪಕ್ಷಿಗಳನ್ನು ತಯಾರಿಸಿ ಇಟ್ಟಿದ್ದಾರೆ. ವಿವಿಧ ಬಗೆ-ಬಗೆಯ ರೆಕ್ಕೆ ಪುಕ್ಕಗಳನ್ನು ನಿರ್ಮಿಸಿ, ತಳಪಾಯದಿಂದ ಈ ಪಕ್ಷಿಗಳ ದೇಹಕ್ಕೆ ಸ್ಪ್ರಿಂಗ್‌ಗಳನ್ನು ಅಳವಡಿಸಿ ಮುಟ್ಟಿದಾಗ ಅಲುಗಾಡುವ ರೀತಿಯಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಪಕ್ಷಿಗಳ ನಾನಾ ರೀತಿಯ ಕೊಕ್ಕುಗಳನ್ನು ನಿರ್ಮಿಸಿರುವದನ್ನು ಇಲ್ಲಿ ನೋಡ ಬಹುದಾಗಿದೆ. ಕಪ್ಪು, ಗುಲಾಬಿ ಕೆಂಪು, ಹಳದಿ, ಹಸಿರು ಹತ್ತು ಹಲವು ಬಣ್ಣಗಳಿಂದ ಪಕ್ಷಿಗಳನ್ನು ನಿರ್ಮಿಸಿ ಅವಶ್ಯಕವಿರುವ ಕಡೆ ಗೆರೆಗಳನ್ನು ಚುಕ್ಕೆಗಳಿಂದ ಪಕ್ಷಿಗಳನ್ನು ಇನ್ನುಷ್ಟು ಇಲ್ಲಿ ಕಲಾವಿದ ಸುಂದರಗೊಳಿಸಿದ್ದಾನೆ.

ನವಿಲುಗಳು:

ಪಕ್ಷಿಗಳನ್ನು ತಯಾರಿಸಲು ಇದರ ಕೊಕ್ಕು, ತಲೆಯ ಭಾಗ ಮತ್ತು ಮೈಭಾಗಗಳನ್ನು ಇವುಗಳ ರೆಕ್ಕೆ ಪುಕ್ಕಗಳನ್ನು ಹಾಗೂ ಇವು ಕುಳಿತುಕೊಳ್ಳು ತಳಪಾಯಗಳನ್ನು ಬಿಡಿಭಾಗಗಳನ್ನು ತಯಾರಿಸಿ, ನಂತರ ಇವುಗಳನ್ನು ಫೆವಿಕಲ್‌ನ ಸಹಾಯದಿಂದ ಜೋಡಿಸಲಾಗಿದೆ. ನವಿಲಿನ ಬಿಡಿ ಭಾಗಗಳನ್ನು ತಯಾರಿಸಿಕೊಂಡು ನಂತರ ಇದರ ಜೋಡಣೆಯನ್ನು ಮಾಡಲಾಗಿದೆ. ನವಿಲಿನ ಕೊಕ್ಕು, ತಲೆಯ ಭಾಗ, ದೇಹದ ಭಾಗವನ್ನು ಹಾಗೂ ಹಿಂದಿನ ಗರಿಯ ತುರಾಯಿಗೆ ಹಸಿರು ಬಣ್ಣವನ್ನು ಬಳಸಲಾಗಿದೆ. ಇದಲ್ಲದೆ ಕೊಕ್ಕಿನ ಮೇಲೆ ಬಿಳಿಯ ಬಣ್ಣದಿಂದ ಗೆರೆಯನ್ನು ಎಳೆಯಲಾಗಿದೆ. ಕಣ್ಣಿನ ಭಾಗಕ್ಕೆ ಕಪ್ಪು ಮತ್ತು ಬಿಳಿಯ ಬಣ್ಣವನ್ನು ಬಳಸಲಾಗಿದೆ. ಗರಿಯ ಭಾಗಕ್ಕೂ ಸಹ ಬಿಳಿಯ ಮತ್ತು ಕಪ್ಪು ಬಣ್ಣದಿಂದ ನಕ್ಷೆಗಳನ್ನು ಪೂರ್ಣಗೊಳಿಸಲಾಗಿದೆ. ನವಿಲಿನ ತಳಭಾಗಕ್ಕೆ ಸ್ಪ್ರಿಂಗ್‌ನ್ನು ಬಳಸಿ ಈ ಪಕ್ಷಿಗಳು ಅಲುಗಾಡುವ ರೀತಿಯಲ್ಲಿ ಮಾಡಲಾಗಿದೆ. ಇದರ ದುಂಡಾದ ತಳಭಾಗವನ್ನು ಕಪ್ಪು ಬಣ್ಣದಿಂದ ಪೂರ್ಣಗೊಳಿಸಲಾಗಿದೆ. ಇದೇ ರೀತಿಯಾಗಿ ಬೇರೆ ಬೇರೆ ಬಣ್ಣಗಳಿಂದ ಅನೇಕ ನವಿಲನ್ನು ತಯಾರಿಸಲಾಗಿದೆ.

ಪಕ್ಷಿ:

ಪಕ್ಷಿಯನ್ನು ವೀಕ್ಷಿಸಿದಾಗ ಯಾವುದೋ ಚಿಕ್ಕ ಪಕ್ಷಿಯು ಕುಳಿತುಕೊಂಡಿರುವಂತೆ ಭ್ರಮೆಯನ್ನುಂಟು ಮಾಡುತ್ತದೆ. ಪಕ್ಷಿ ಮೈ ಬಣ್ಣಕ್ಕೆ ಹಳದಿ ಬಣ್ಣವನ್ನು ಉಪಯೋಗಿಸಿಸಿ ಕೊಕ್ಕಿನ ಭಾಗಕ್ಕೆ ಕೇಸರಿ ಹಾಗೂ ರೆಕ್ಕೆಯ ಭಾಗಕ್ಕೆ ಕೆಂಪು ಬಣ್ಣಗಳಿಂದ ಪೂರ್ಣಗೊಳಿಸಲಾಗಿದೆ. ಕಪ್ಪು ಬಣ್ಣವನ್ನು ಪಕ್ಷಿಯ ತಳಪಾಯಕ್ಕೆ ಕಣ್ಣಿಗೆ ಉಪಯೋಗಿಸಲಾಗಿದೆ. ಈ ಪಕ್ಷಿ ಗೊಂಬೆ ವಿಶೇಷವೆಂದರೆ ತಳಪಾಯದಿಂದ ಪಕ್ಷಿ ದೇಹಕ್ಕೆ ಸ್ಪ್ರಿಂಗಳನ್ನು ಅಳವಡಿಸಲಾಗಿದೆ. ಇದನ್ನು ಮುಟ್ಟಿದಾಗ ಪಕ್ಷಿ ತೂಗಾಡುತ್ತವೆ.

ಗೊಂಬೆ ತಯಾರು ಮಾಡುತ್ತಿರುವಾಗ ಹಾಲೆಯ ಮರದ ಹೊಟ್ಟು ಅಥವಾ ಪುಡಿಯು ಸಾಕಷ್ಟು ದೊರೆಯುತ್ತದೆ. ಈ ಪುಡಿಯನ್ನು ಊದುಬತ್ತಿ ತಯಾರಿಕೆಯಲ್ಲಿ ಬಳಸುತ್ತಾರೆ. ಪುಡಿಗೆ ಕೆಲವು ಸುಗಂಧ ದ್ರವ್ಯಗಳನ್ನು ಸೇರಿಸಿ ಊದು ಬತ್ತಿಯನ್ನು ತಯಾರಿಸುತ್ತಾರೆ.

ಚನ್ನಪಟ್ಟಣದ ಗೊಂಬೆಗಳ ಆಟಿಕೆಗಳು, ಪ್ರಾಣಿ, ಪಕ್ಷಿಗಳು, ಸ್ತ್ರೀ ಗೊಂಬೆಗಳು, ಪುರುಷ ಗೊಂಬೆಗಳು, ಎತ್ತಿನ ಗಾಡಿಗಳು, ತಬಲಾಗಳು, ವೀಣೆಗಳು, ತೊಟ್ಟಿಲುಗಳು, ಕೀ ಚೈನುಗಳು ಇನ್ನೂ ಹಲವು ಬಗೆಯ ಗೊಂಬೆಗಳ ತಯಾರಿಕೆಯಲ್ಲಿ ಕೆಲವು ಬಟ್ಟೆಯಂತಹ, ದಾರದಂತಹ, ಕೆಲವು ರೀತಿಯ ಶೃಂಗರಿಸುವಂತಹ ಮಣಿ, ಮುತ್ತುಗಳನ್ನು ಬಗೆಬಗೆಯ ಅಲಂಕಾರಿಕ ಸಾಮಾನುಗಳನ್ನು ಬಳಸಿ ಗೊಂಬೆಯನ್ನು ಅಂದಗೊಳಿಸಲು ಅನೇಕ ವಿಧವಾದ ಸಾಮಾನುಗಳನ್ನು ಇಲ್ಲಿ ಬಳಸಲಾಗುತ್ತದೆ. ಗೊಂಬೆಗಳನ್ನು ಹಾಗೂ ಬಿಡಿ ಭಾಗಗಳನ್ನು ಅಂಟಿಸಲು ಫೆವಿಕಲ್‌ನ್ನು ಬಳಸಲಾಗುತ್ತದೆ.



ಬೀಸುವ ಕಲ್ಲು ಬೀಸುತ್ತಿರುವ ಮಹಿಳೆ



ಬಾವಿಯಲ್ಲಿ ನೀರು ಸೇದುತ್ತಿರುವ ಮಹಿಳೆ



ಛತ್ರಿ ಹಿಡಿದು ನಿಂತಿರುವ ಮಹಿಳೆ



ಮಹಿಳೆಯರು



ದಸರ ಮೇರವಣಿಗೆ



ಕುದುರೆ ಸವಾರ



ಹಾವಾಡಿಗ



ರಾಜ ರಾಣಿ



ಲಿಂಗಗಳು





ಲೇಖನಿ ಸ್ಟಾಂಡ್



ಚಿಕ್ಕ ಮಕ್ಕಳು ಆಟವಾಡುತ್ತಿರುವ ದೃಶ್ಯ





ಎತ್ತಿನ ಗಾಡಿ



ಬಸವಣ್ಣ



ನೀರು ತರುತ್ತಿರುವ ಮಹಿಳೆ



ಬಸವಣ್ಣ ಗೊಂಬೆ ಬಿಡಿಭಾಗಗಳು



ಮೊಟ್ಟೆ ಮತ್ತು ಸರಗಳು



ಮೇಣದ ಬತ್ತಿ ಸ್ಟಾಂಡ್‌ಗಳು




ರಂಗೋಲಿ ರಾಟೆ



ತರಕಾರಿ ಮಾರುತ್ತಿರುವ ವ್ಯಕ್ತಿ



ವಿವಿಧ ಬಗೆಯ ಸೀಸದ ಕಡ್ಡಿಗಳು



ಮಣಿಯ ಮ್ಯಾಟ್



ಅಲಂಕಾರಿಕ ಕಿವಿ ಓಲೆ ಮತ್ತು ಸರಗಳು









ದಸರಾ ಹಬ್ಬದ ಅಲಂಕಾರಿಕ ಗೊಂಬೆಗಳು



ಆಟಿಕೆಯ ಕುದುರೆಗಳು



ಕುಂಕುಮ ಭರಣಿಗಳು



ಎಣಿಕೆಯ ಮಣಿಗಳು



ನೀಲಗುದರೆ



ಟೇಂಪೊ





ಶುಭ ಸಮಾರಂಭದ ಗೊಂಬೆಗಳು



ದಂಪತಿ ಗೊಂಬೆಗಳು



ಪೌರಣಿಕ ಗೊಂಗಳು



ಜೋಕರ ಗೊಂಬೆಗಳು



ಸ್ಪ್ರಿಂಗ್ ವ್ಯಕ್ತಿ ಗೊಂಬೆ





ಏರಿಕೆಯ ಗೊಂಬೆಗಳು



ನೆನಪಿನ ಕಾಣಿಕೆಗಳು



ವಿವಿಧ ಬಗೆಯ ಬಳೆಗಳು






ವಿವಿಧ ಬಗೆಯ ಆಟಿಕೆಗಳು







ಹಲವು ಬಗೆಯ ಪಕ್ಷಿಗಳು



ನವಿಲುಗಳು



ಅಧ್ಯಾಯ – ಐದು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಕಲಾವಿದರು

ಅಧ್ಯಾಯ – ಐದು

ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಕಲಾವಿದರು

ಕಲೆ ತನ್ನ ಸಂಪೂರ್ಣ ಸತ್ವದ ಅಭಿವ್ಯಕ್ತಿಗಾಗಿ ಎಲ್ಲರನ್ನು ಸ್ವಾಗತಿಸಿದರೂ ಅದರ ಮೂಲಚೂಲಗಳನ್ನು ಅರಿತು ಅನುಭವಿಸಿ ದ್ಯಾನಿಸಿ ಅನುಸಂಧಾನ ಮಾಡಿ ಅದರ ಆರಾಧನೆಯಲಿ ತೊಡಗಿ ತಮ್ಮನ್ನು ಸಂಪೂರ್ಣವಗಿ ಅದಕ್ಕೆ ತೆತ್ತುಕೊಂಡವರು ಬಹು ಕಡಿಮೆ. ಪ್ರತಿಯೊಬ್ಬ ಮನುಷ್ಯನ ಆಂತರ್ಯದಲ್ಲೂ ಈ ಕಲಾಶಕ್ತಿ ವಿವಿಧ ಪ್ರಮಾಣದಲ್ಲಿ ಸುಪ್ತವಾಗಿ ಅಡಗಿರುತ್ತದೆ. ಈ ಕಲಾ ಪ್ರಜ್ಞೆ ಮತ್ತು ಕಲಾಭಿರುಚಿಗಳು ವ್ಯಕ್ತಿತ್ವನ್ನು ಅವನ ಅಂತರ್ಯದೊಳಗಿನಿಂದ ರೂಪಿಸುತ್ತ ಶ್ರೇಷ್ಠ ಕಲಾವಿದನನ್ನಾಗಿ ಶಿಲ್ಪಕಲಾವಿದನನ್ನಾಗಿ, ಚಿಂತಕನ್ನಾಗಿ, ಶ್ರೇಷ್ಠ ವ್ಯಕ್ತಿಯಾಗಿ ರೂಪಿಸುತ್ತಾ ಹೋಗುತ್ತದೆ. ಮಣ್ಣು, ಮರ, ಕಲ್ಲು, ಬಣ್ಣ, ನಾದ, ನೃತ್ಯ ಹಾಗೂ ನಟನೆ ಮುಂತಾದವುಗಳ ಮೂಲಕ ಬಗೆ ಬಗೆಯಾಗಿ ಬಿಚ್ಚಿಕೊಳ್ಳುವ ಈ ಕಲಾಲೋಕ ಮನುಷ್ಯ ಲೋಕದಲ್ಲಿ ಮಾತ್ರವಲ್ಲದೆ ಪ್ರಕೃತಿಲೋಕದಲ್ಲಿಯೂ ತನ್ನ ಅನಂತ ಸ್ವರೂಪಗಳನ್ನು ಅತ್ಯಂತ ವಿನೂತನವಾಗಿ ಪಡಿಮೂಡಿಸುತ್ತಾ ಇಡೀ ಜಗತ್ತನ್ನೇ ಆಸ್ವಾದನೀಯವಾಗಿ ಮಾಡಿ ಬಿಡುತ್ತದೆ. ಮನುಷ್ಯರಲ್ಲಿ ಸೌಂದರ್ಯಕ್ಕೆ ಮತ್ತು ಕಲೆಗೆ ಒಲಿಯುವ ಹೃದಯ ಸಹಜವಾಗಿಯೇ ಇದ್ದರೂ ಎಲ್ಲರಿಗೂ ಇದರ ಅಂತರಾಳವನ್ನು ಪ್ರವೇಶಿಸುವುದು, ಅದರೊಳಗಿನ ನಿಗೂಢವಾದ ರಹಸ್ಯಗಳನ್ನು ತಮ್ಮ ಕಲ್ಪನೆ, ಆಲೋಚನೆ ಮತ್ತು ಮಾಧ್ಯಮಗಳ ಮೂಲಕ ಸಮರ್ಥವಾಗಿ ಸೃಷ್ಟಿಸುವುದು ಸಾಧ್ಯವಾಗುವುದಿಲ್ಲ.

ನಮ್ಮ ಪುರಾಣಗಳು, ಇತಿಹಾಸಗಳು, ಪುರಾತತ್ವದ ದಾಖಲೆಗಳು ಭಾರತದಲ್ಲಿ ಅನಾದಿ ಕಾಲದಿಂದಲೂ ಮಹತ್ವ ಪಡೆದಿವೆ. ಕಲಾ ಸಾಧಕರು ಇದ್ದುದನ್ನು ಮತ್ತು ಅಪೂರ್ವ ಕಲಾಕೃತಿಗಳನ್ನು ರಚಿಸಿದ್ದನ್ನು ಸಾದರ ಪಡಿಸುತ್ತವೆ. ಆಧುನಿಕ ಭಾರತ ಕೂಡ ಇಂತಹ ಸಾವಿರಾರು ಕಲಾವಿದರನ್ನು ಸೃಷ್ಟಿಸಿದೆ. ಭಾರತೀಯ ಪರಂಪರೆಯ ಕಲಾ ಮಹೋನ್ನತಿಯನ್ನು ಮೈಗೂಡಿಸಿಕೊಳ್ಳುವುದರ ಜೊತೆಗೆ ಅನೇಕ ಕಾಲ ಘಟ್ಟಗಳಲ್ಲಿ ಪ್ರಪಂಚದ ಬೇರೆ–ಬೇರೆ ಭಾಗಗಳಲ್ಲಿ ಮೈದೋರಿದ ಹೊಸ–ಹೊಸ ಕಲಾ ಪಂಥಗಳನ್ನು ಚಿಂತನೆಗಳನ್ನು ತಂತ್ರಗಳನ್ನು ವಿಶಿಷ್ಠ ಮಾಧ್ಯಮಗಳನ್ನು ರೂಢಿಸಿಕೊಂಡು ರಾಷ್ಟ್ರೀಯ, ಅಂತರಾಷ್ಟ್ರೀಯ ಕೀರ್ತಿಯನ್ನು ಪಡೆದ ಕಲಾವಿದರು ನಮ್ಮಲ್ಲಿರುವುದು ತುಂಬ ಅಭಿಮಾನದ ಸಂಗತಿಯಾಗಿದೆ. ಭಾರತೀಯರಲ್ಲಿ ಈ ಎಲ್ಲ ಕಲಾವಿದರ ಜೀವನದ ಮತ್ತು ಸಾಧನೆಗಳ ಬಗೆಗಿನ ಸ್ಪಷ್ಟ ಹಾಗೂ ವಿಸ್ತೃತ ಹಾಗೂ ಅಧಿಕೃತ ದಾಖಲೆಗಳು ಅಧಿಕ ಪ್ರಮಾಣದಲ್ಲಿ ದೊರೆಯದಿರುವುದು ವಿಷಾದದ ಸಂಗತಿಯಾಗಿದೆ. ಸೋಪಜ್ಞಶೀಲ ಸಾಧನೆಯನ್ನು ಕಲಾಲೋಕದಲ್ಲಿ ಮಾಡಿದರೂ ಎಲೆಮರೆಯ ಕಾಯಿಗಳಾಗಿ ಉಳಿದುಕೊಂಡು ಕಲಾವಿದರೇ ಅಧಿಕ. ಕಲಾ ಕ್ಷೇತ್ರಗಳ ಮಹಾ ಸಾಧಕರನ್ನು ಅವರ ಸಿದ್ಧಿ, ಸಾಧನೆಗಳನ್ನು ಅವರ ಜೀವನ ಏರಿಳಿತಗಳು ಅವರು ಅನುಭವಿಸಿದ ಸಂಕಷ್ಟ ಸಂತೋಷಗಳನ್ನು ಪರಿಚಯಿಸುವ ಗ್ರಂಥಗಳು ವಿರಳವೆಂದೇ ಹೇಳಬೇಕು.

ಕಲಾವಿದರನ್ನು ವಿಶೇಷ ವ್ಯಕ್ತಿ ಎಂದು ತಿಳಿಯದೇ ಹೋದರೂ ಅವನ ಸ್ವಭಾವ, ಮಾನಸಿಕ ಪ್ರವೃತ್ತಿ, ಗುಣ ಅವನ ಸೌಂದರ್ಯ ಗುಣ ಗ್ರಹಣದ ಬಗೆಗಿನ ತೀವ್ರತೆ ಹಾಗೂ ಸಂವೇದನೆ ಶೀಲತೆಯನ್ನು ಬೆಳೆಸಿಕೊಂಡು ಬರಲು ಅವನಿಗೆ ವಿಶೇಷವಾದ ಉಪಚಾರ ಹಾಗೂ ಪರಿಸರವನ್ನು ಒದಗಿಸುವ ಬಗ್ಗೆ ಕಾಳಜಿ ವಹಿಸಬೇಕಾಗುತ್ತದೆ. ಕಲೆ ಹುಟ್ಟಿನಿಂದ ಬರುವಂತಹದು ಎಂದು ಬಹುಜನರು ಹೇಳುತ್ತಾರೆ. ಆದರೆ ಹುಟ್ಟಿನಿಂದಲೇ ಕಲಾವಿದರಾಗಿವವರು ವಿರಳ. ಒಳ್ಳೆಯ ಪರಿಸರ ಒಬ್ಬ ಒಳ್ಳೆಯ ಕಲಾವಿದನನ್ನು ಸೃಷ್ಟಿಸಬಹುದು ಎಂಬುದನ್ನು ಅನೇಕರು ಒಪ್ಪುತ್ತಾರೆ. ಪರಿಸರದಲ್ಲಿ ಬೆಳೆದ ಕಲಾವಿದರಾದವನೇ ಬಹಳಷ್ಟು ಜನ. ಹುಟ್ಟು ಕಲಾವಿದರು ಅಸಾಧಾರಣ ಬುದ್ಧಿಶಕ್ತಿ ಹೊಂದಿದ್ದು, ಪ್ರತಿಭಾವಂತರಾಗಿರುತ್ತಾರೆ. ಸೂಕ್ಷ್ಮ ಮನಸ್ಸಿನ ಶೀಘ್ರಗ್ರಾಹಿಗಳಾಗಿರುತ್ತಾರೆ. ಮಾನಸಿಕ ಉದ್ವೇಗ ಅವೇಗ ಹಾಗೂ ಕಳವಳದ ಭಾವದ ವಿಲಕ್ಷಣವಾದ ಹುಟ್ಟು ಸ್ವಭಾವದಿಂದ ಕೂಡಿದವರಾಗಿರುತ್ತಾರೆ. ಅಲ್ಲದೇ ಅದ್ಭುತವಾದ ಅಂತರ್‌ದೃಷ್ಟಿ, ಅಂತಃಸ್ಫೂರ್ತಿ ಹಾಗೂ ಒಳ ಅರಿವನ್ನು ಹೊಂದಿದವರಾಗಿರುತ್ತಾರೆ. ಅವರಿಗೆ ಉಹಾತ್ಮಕ ಕಲ್ಪನಾಶಕ್ತಿ, ಭಾವನಾಶಕ್ತಿ,

ಯೋಜನಾಶಕ್ತಿ ತರ್ಕಶಕ್ತಿ ಇವೆಲ್ಲಾ ಮೈಗೂಡಿಸಿಕೊಂಡಿರುತ್ತದೆ. ಸ್ವಂತಿಕೆಯನ್ನು ಪಡೆದವನಾಗಿರುತ್ತಾನೆ.

ಒಂದು ಕಾಲದಲ್ಲಿ ಕೆತ್ತುವ, ಕೊರೆಯುವ ಶ್ರಮದಾಯಕ ಕೆಲಸದಿಂದ ಹೆಚ್ಚಿನ ಕಾಲಾವಧಿ ತೆಗೆದುಕೊಂಡು ರೂಪಗೊಳ್ಳುತ್ತಿದ್ದ ಗೊಂಬೆಗಳು ಈಗ ವಿದ್ಯುಚ್ಚಾಲಿತ ಯಂತ್ರಗಳ ಸಹಯೋಗದಲ್ಲಿ ನೋಡ ನೋಡುತ್ತಿದ್ದಂತೆಯೇ ಚಟಪಟನೆ ರೂಪಗೊಳ್ಳುವ ಕಾಲಾಕೌಶಲಂತೂ ವಿಸ್ಮಯ ಜನಕವಾದ್ದು ಮೈತುಂಬು ಮರದ ಒಟ್ಟು ಒಂದು ಮಾಸಿರುವ ಬನಿಯನ್, ಬಣ್ಣ ಕಳೆದುಕೊಂಡು ಹಳೆಯದಾದ ಚಡ್ಡಿ ಇಲ್ಲವೆ ಪ್ಯಾಂಟ್ ಧರಿಸಿ ಅವಿದ್ಯಾವಂತ ಮುಗ್ಗರೇ ಈ ಬೆಡಗಿನ ಬೊಂಬೆಗಳ ಸೃಷ್ಟಿಕರ್ತನೆಂದರೆ ನಂಬಲಾರದಷ್ಟು ಅಚ್ಚರಿಯಾಗುತ್ತದೆ. ಇಂತಹ ಕಲಾವಿದರ ಕಿರುಪರಿಚಯವನ್ನು ಇಲ್ಲಿ ನೋಡಬಹುದಾಗಿದೆ.

ಚನ್ನಪಟ್ಟಣದಲ್ಲಿರುವ ಗೊಂಬೆ ಕಾರ್ಖಾನೆಗಳಲ್ಲಿ ಅತ್ಯಂತ ಹಳೆಯದಾದ ಓರಿಯಂಟಲ್ ಇಂಡಸ್ಟ್ರೀಯಾಗಿದೆ. ೧೯೪೦ ರಲ್ಲಿ ಜಪಾನಿಗೆ ಭೇಟಿ ನೀಡಿದ ಮಲ್ಲಿಕ್ ಅಲ್ಲಾದಾದ್ ಅಲಿಯಾಸ್ ಬಾವಸಮಿಯಾ ಅಲ್ಲಿನ ಗೊಂಬೆ ಕಲೆಯಿಂದ ಸ್ಫೂರ್ತಿಗೊಂಡು ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ದೊಡ್ಡ ಉದ್ಯಮವಾಗಿ ರೂಪಿಸುವ ಸಾಹಸಕ್ಕೆ ಕೈ ಹಾಕಿದರು. ಜಪಾನಿನಿಂದ ಬಂದ ಮೇಲೆ ೧೯೪೬ರಲ್ಲಿ ಯಾಕೂಬ್ ಮಿಯಾರ ಕಾಲಾವಧಿಯಲ್ಲಿ ಆಧುನಿಕ ಯಂತ್ರಗಳನ್ನು ಅಳವಡಿಸಿಕೊಂಡು ಅದೇ ಬೊಂಬೆಗಳ ತಂತ್ರ ಶೈಲಿಯನ್ನು ಅಳವಡಿಸಿಕೊಂಡು ಸಾಕಾಷ್ಟು ಗೊಂಬೆಗಳನ್ನು ತಯಾರಿಸುವಲ್ಲಿ ಯಶಸ್ವಿಯಾದರು. ಇವರು ಒಟ್ಟು ಇಪ್ಪತ್ತು ಜನ ಕೆಲಸಗಾರರ ದೊಡ್ಡ ಉದ್ಯಮವಾಗಿ ಬೆಳೆಯಿತು. ನಂತರ ಸೈಯದ್ ಅಲಮ್ ಅನ್ಸಾರರವರು ಚಿಕ್ಕಂದಿನಿಂದ ಈ ಉದ್ಯಮದೊಂದಿಗೆ ಹೆಜ್ಜೆಗಳನ್ನಿರಿಸಿರುವ ಇವರಿಗೆ ಉದ್ಯಮದ ಒಳಹೊರಗೆಲ್ಲ ಚೆನ್ನಾಗಿ ಗೊತ್ತಿದ್ದರಿಂದ ವೃತ್ತಿಯಲ್ಲಿ ಶಿಕ್ಷಕರಾಗಿರುವ ಇವರು ಗೊಂಬೆ ಕಲೆಯತ್ತ ಆಕರ್ಷಿತರಾದ ಸೈಯದ್ ನಿಜಾಮ್ ಎನ್ನುವವರು ಜಪಾನಿಗೆ ಬೇಟಿ ನೀಡಿ ಅಲ್ಲಿ ಗೊಂಬೆಗಳು ತಯಾರಿಸುವ ವಿಧಾನ, ಕ್ರಿಯಾತ್ಮಕವಾಗಿ ತಯಾರಿಸಿದಂತ ಕೆಲವು ಬೊಂಬೆಗಳನ್ನು ತಂದು ಗೊಂಬೆ ಕಲೆಗೆ ಹೊಸ ಜೀವ ಚೈತನ್ಯ ತುಂಬಿ ಅಭಿವೃದ್ಧಿಗೆ ಪೂರಕವಾಗುವಂಥ ಕೊಡುಗೆಗಳನ್ನು ನೀಡಿದ್ದಾರೆ. ಮಕ್ಕಳ ಆಟದ ಗೊಂಬೆಗಳು, ರೈಲು, ವಿಮಾನ, ಹೆಲಿಕ್ಯಾಪ್ಟರ, ಬಸ್ಸು, ಮಣಿ ಪಕ್ಷಿ ಪ್ರಾಣಿಗಳು ಇವುಗಳ ತಯಾರಿಕೆಗೆ ಸೀಮಿತವಾಗಿದ್ದ ಚನ್ನಪಟ್ಟಣದ ಕುಶಲಕರ್ಮಿಗಳಿಗೆ ಕಲೆಯ ಹೊಸ

ಪ್ರಯೋಗಗಳನ್ನು ಮಾಡಿ ವಿದೇಶಿಯರೂ ಮೆಚ್ಚುವಂಥ ಕ್ರಿಯಾತ್ಮಕ ಹಾಗೂ ಸ್ಪ್ರಿಂಗ್ ಗೊಂಬೆಗಳನ್ನು ತಯಾರಿಸಿ ಅಚ್ಚರಿ ಮೂಡಿಸಿದ ಅಪೂರ್ವ ಕಲಾವಿದರಿವರು.

ಮಾಯಾ ಆರ್ಗ್ಯಾನಿಕ್ ಟ್ರಸ್ಟ್:

ಅನಿಲಕುಮಾರ ವ್ಯವಸ್ಥಾಪಕ:

ಇವರು ೧೮ ವರ್ಷಗಳಿಂದ ಇಲ್ಲಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಎನ್.ಜಿ.ಓ ಸಂಯೋಗದೊಂದಿಗೆ 'ಮಾಯ ಆರ್ಗ್ಯಾನಿಕ' ಟ್ರಸ್ಟ್ ಪ್ರಾರಂಭವಾದ ಈ ಸಂಸ್ಥೆ ಇಲ್ಲಿಗಾಗಲೇ ಸಾಕಷ್ಟು ಜನರಿಗೆ ಮಾಸಿಕ ಭತ್ಯದೊಂದಿಗೆ ತರಬೇತಿಯನ್ನು ನೀಡಿ ಗೊಂಬೆ ತಯಾರಿಕೆಯ ಕುಶಲಕರ್ಮಿಗಳನ್ನಾಗಿ ರೂಪಿಸಿದೆ. ಸ್ಥಳೀಯವಾಗಿ ಬಾಲಕಾರ್ಮಿಕ ನಿರ್ಮೂಲನೆ, ಕೆಲಸ ಕಾರ್ಯಗಳಲ್ಲಿ ಲಿಂಗ ಭೇದವಿಲ್ಲದೆ ಸಮಾನ ಅವಕಾಶ ಸಿಗುವಂತೆ ಬೊಂಬೆ ತಯಾರಿಕೆಯ ತರಬೇತಿಯನ್ನು ನೀಡುತ್ತಿದೆ. ಹೆಚ್ಚಿನದಾಗಿ ಹೆಣ್ಣುಮಕ್ಕಳಿಗೆ ಆದ್ಯತೆಯನ್ನು ನೀಡಲಾಗುತ್ತದೆ. ನಕ್ಷಾಕಾರ, ನಿರ್ಮಾಣಕಾರರು, ಪ್ಯಾಕಿಂಗ್, ಗೊಂಬೆಗಳ ಅಳತೆಗೆ ಆಲೆ ಮರಗಳನ್ನು ಕತ್ತರಿಸುವ, ಹೀಗೆ ಹತ್ತು ಹಲವಾರು ಕೆಲಸವನ್ನು ಅನೇಕ ಕೆಲಸಗಾರರು ಇಲ್ಲಿ ದುಡಿಯುತ್ತಿದ್ದಾರೆ. ರೂ. ೫೦೦೦/- ರಿಂದ ರೂ. ೧೫,೦೦೦/- ಗಳ ವರೆಗೆ ಗಳಿಸುತ್ತಿದ್ದಾರೆ. ಒಳ್ಳೆಯ ಗುಣಮಟ್ಟದ ಗೊಂಬೆಗಳನ್ನು ನಿರ್ಮಿಸುತ್ತಾರೆ. ಇಲ್ಲಿಯ ಕುಶಲಕರ್ಮಿಗಳು ಇಡೀ ಗೊಂಬೆಗಳನ್ನು ನಿರ್ಮಿಸದೆ, ಒಬ್ಬರು ಒಂದೊಂದು ಬಿಡಿಭಾಗಗಳನ್ನು ಇಲ್ಲಿಯ ಕಲಾವಿದರು ನಿರ್ಮಿಸುತ್ತಾರೆ. ಉದಾ:- ನೀರು ತರತ್ತಿರುವ ಮಹಿಳೆ ಗೊಂಬೆಗೆ ಬೇಕಾಗುವ ಕೈ, ಕಾಲುಗಳು, ಕುತ್ತಿಗೆಯ ಭಾಗ, ದೇಹದ ಭಾಗ, ನೀರಿನ ಕೊಡ, ಸ್ತ್ರೀ ಗೊಂಬೆಯ ತಲೆಯ ಹಿಂಬಾಗದ ತುರುಬು, ಕಿವಿಗಳು, ಇದಕ್ಕೆ ಬೇಕಾಗುವ ಬಿಡಿ ಭಾಗಗಳನ್ನು ಒಬ್ಬರು ಒಂದೊಂದು ಮಾಡುತ್ತಾರೆ. ನಂತರ ಬೇಕಾದ ಭಾಗಗಳಿಗೆ ವಿವಿಧ ಬಣ್ಣಗಳಿಂದ ಕಣ್ಣು, ಮೂಗು. ಬಳೆ, ಹಣೆಯ ಕುಂಕುಮ, ಕೂದಲು, ಬಟ್ಟೆಯ ನಕ್ಷಾಚಿತ್ರಗಳನ್ನು ಬೇರೆ ಕಲಾವಿದರು ಚಿತ್ರಿಸಿ ಜೋಡಿಸಿ ಸ್ತ್ರೀಗೊಂಬೆಯನ್ನು ಪೂರ್ಣಗೊಳಿಸುತ್ತಾರೆ. ಇಲ್ಲಿ ಒಂದೇ ರೀತಿಯ ಬಿಡಿ ಭಾಗವನ್ನು ನಿರ್ಮಿಸುವುದರಿಂದ ಅಳದಲ್ಲಿಯಾಗಲ್ಲಿ, ಅಳತೆಯಲ್ಲಿಯಾಗಲಿ ಸ್ವಲ್ಪವು ವ್ಯತ್ಯಾಸವಾಗುವುದಿಲ್ಲ. ತಯಾರಾದ ಒಟ್ಟು ಗೊಂಬೆಗಳು ನೋಡಲು ಸುಂದರ ಹಾಗೂ ಆಕರ್ಷಕವಾಗಿ ಕಾಣಬಹುದಾಗಿದೆ. ಈ ಸಂಸ್ಥೆಯಲ್ಲಿ ೧೦೦ ರಿಂದ ೨೦೦ ರೀತಿಯ ಬಗೆ-ಬಗೆಯ ಗೊಂಬೆಗಳನ್ನು ನಿರ್ಮಿಸುತ್ತಾರೆ. ಬೇರೆ ಹೊರರಾಜ್ಯಗಳಿಂದ ಅವಕಾಶಗಳು ಬಂದರೂ

ಸಹ ಗೊಂಬೆಗಳನ್ನು ನಿರ್ಮಿಸಿಕೊಡುತ್ತಾರೆ. ಕೆಲಸದ ಸಮಯ ಬೆಳಿಗ್ಗೆ ೯ ಗಂಟೆಯಿಂದ ಸಂಜೆ ೬ ಗಂಟೆ. ಇಲ್ಲಿ ತಯಾರಾದ ವಸ್ತುಗಳು ಕರ್ನಾಟಕ, ಚೆನ್ನೈ, ಬಾಂಬೆ, ಮದ್ರಾಸ್, ಅಲ್ಲದೆ ಹೊರ ರಾಷ್ಟ್ರಗಳಿಗು ರಫ್ತಾಗುತ್ತದೆ. ಇಲ್ಲಿಯ ಕುಶಲಕರ್ಮಿಗಳಿಗೆ ಇ.ಎಸ್.ಐ. ವೈದ್ಯಕೀಯ ಸವಲತ್ತು ಜೀವ ವಿಮೆಯ, ಪಿ.ಎಫ್. ಸವಲತ್ತುಗಳನ್ನು ಕೊಟ್ಟಿದೆ.

ರಾಮಪ್ಪ:

ಇವರು ಹುಟ್ಟಿದ್ದು, ಚೆನ್ನಪಟ್ಟಣದಲ್ಲಿ ತಂದೆ ವೆಂಕಟಯ್ಯ ತಾಯಿ ವೆಂಕಟಲಕ್ಷ್ಮಮ್ಮ, ಇವರ ತಂದೆ ಹಳೆಯದಾದ ಪಟ್ರಿ ಪದ್ಧತಿಯನ್ನು ಅಳವಡಿಸಿಕೊಂಡು ಸಾಕಷ್ಟು ವರ್ಷ ಸಣ್ಣ ಸಣ್ಣ ಮಣಿಗಳನ್ನು ತಯಾರಿಸುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂತಹ ವಾತಾವರಣದಲ್ಲಿ ಬೆಳೆದ ರಾಮಪ್ಪನವರು, ಗೊಂಬೆ ತಯಾರಿಕೆಯ ಬಗ್ಗೆ ಆಸಕ್ತಿ ಮೂಡಿದ್ದರಿಂದ ಈ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬೇರೆ ಫ್ಯಾಕ್ಟರಿ ಕೂಲಿ ಕೆಲಸದಂತೆ ೧೦ ವರ್ಷ ಕೆಲಸ ನಿರ್ವಹಿಸಿ ಈಗ ಪ್ರಸ್ತುತ ಮಾಯಾ ಸಂಸ್ಥೆಯಲ್ಲಿ ದುಡಿಯುತ್ತಿದ್ದಾರೆ. ಬುಗುರಿ, ಬಾಲ್, ಪ್ಲೇಟ್ಸ್‌ಗಳು, ಸ್ತ್ರೀ-ಪುರುಷ ಗೊಂಬೆಗಳು ಪ್ರಾಣಿ-ಪಕ್ಷಿಗಳು ಅನೇಕ ಬಗೆಯ ಬೊಂಬೆಗಳನ್ನು ತಯಾರಿಸಿದ್ದಾರೆ. ಚನ್ನಪಟ್ಟಣದ ಗೊಂಬೆಗಳಿಗೆ ಸಾಕಷ್ಟು ಬೇಡಿಕೆಯಿದೆ. ಶ್ರದ್ಧೆ ವಹಿಸಿ ಕೆಲಸ ಮಾಡಿದರೆ ಲಾಭವಿದೆ. ಕಷ್ಟ ಪಟ್ಟರೆ ಸುಖ ಸಿಗುತ್ತೆ ಎನ್ನುತ್ತಾರೆ.

ನಾಜೀಯಾ:

ಇವರು ಪ್ರಸ್ತುತ ಚನ್ನಪಟ್ಟಣದವರೆ, ಮನೆಯಲ್ಲಿ ಕುಟುಂಬದ ನಿರ್ವಹಣೆಗೆಂದು ಗೊಂಬೆ ತಯಾರಿಕೆ ಕೆಲಸವನ್ನು ಮಾಯ ಆರ್ಗ್ಯನಿಕ್ ಸಂಸ್ಥೆಯಲ್ಲಿ ಆರು ತಿಂಗಳು ತರಬೇತಿಯನ್ನು ಪಡೆದ ನಂತರ ಇಲ್ಲಿಯೇ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ತಂದೆ ಸಲೀಂ, ತಾಯಿ ಮಲ್ಲಿಕಾ ಕೂಲಿ ಕೆಲಸವನ್ನು ಮಾಡುತ್ತಾರೆ. ಹೆಣ್ಣು-ಗಂಡು ಬೇದವಿಲ್ಲದೆ ಈ ಕೆಲಸವನ್ನು ಮಾಡಬಹುದು. ಮಾಯ ಸಂಸ್ಥೆಯಲ್ಲಿ ನನ್ನಂತಹ ಸಾಕಷ್ಟು ಹೆಣ್ಣು ಮಕ್ಕಳಿಗೂ ತರಬೇತಿಯನ್ನೂ ನೀಡಿ ಜೀವ ನಿರ್ವಹಣೆ ದಾರಿಯನ್ನು ತೋರಿಸಿಕೊಟ್ಟಿದೆ. ಆದ್ದರಿಂದ ಈ ಸಂಸ್ಥೆಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಎನ್ನುತ್ತಾರೆ ನಾಜೀಯಾ.

ಶಿಲ್ಪಾ ಟ್ರಸ್ಟ್:

ವ್ಯವಸ್ಥಾಪಕ ಶ್ರೀ ದೀಲಿಪಕುಮಾರ.

SHILPA: Self Help Incentive Linking Progressive artisan, ಧ್ಯೇಯವನ್ನು ಹೊಂದಿದ ಸಂಸ್ಥೆ ಇದಾಗಿದೆ. ಈ ಸಂಸ್ಥೆಯ ನ್ಯಾಯ ವ್ಯಾಪಾರ ಸೂತ್ರಗಳು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಕುಶಲ ಕಾರ್ಮಿಕರಿಗೆ ಒದಗಿಸುವುದು. (Creating opportunities for economically disadvantaged artisan), ಪಾರದರ್ಶಕತೆ ಮತ್ತು ಪ್ರಾಮಾಣಿಕತೆಯಿಂದ ಮಾಡುವ ಕೆಲಸದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳುವುದು. (Transparency and Accountability), ವಿಚಾರ ವಿನಿಮಯ/ತರಬೇತಿಯಿಂದ ಜ್ಞಾನವೃದ್ದಿ ಮತ್ತು ನಿರ್ವಹಣಾಬಿವೃದ್ಧಿ (Capacity Building), ನ್ಯಾಯ ವ್ಯಾಪಾರವನ್ನು ಬೆಳೆಸುವುದು. (Promoting Fair Trade), ಒಳ್ಳೆಯ ಗುಣಮಟ್ಟ ವಸ್ತುಗಳು ಅದಕ್ಕೆ ತಕ್ಕ ಬೆಲೆ (Payment of a fair prince), ಕೆಲಸ ಕಾರ್ಯಗಳಲ್ಲಿ ಲಿಂಗ ಬೇಧವಿಲ್ಲದೆ ಸಮಾನ ಅವಕಾಶ (Gender equity), ಕೆಲಸ ಮಾಡುವ ಜಾಗದಲ್ಲಿ ಪರಿಶುದ್ಧತೆಯನ್ನು ಕಾಪಾಡುವುದು (Ideal Working Conditional), ಮಕ್ಕಳು ಹಕ್ಕುಗಳು ಗೌರವಿಸುವುದು (Right of the children), ಪರಿಸರ ಸಂರಕ್ಷಣೆ (Protecting of the environment), ವ್ಯಾಪಾರ ಮತ್ತು ವ್ಯವಹಾರ ಸಂಬಂಧಗಳು (Trade Relations), ಈ ಎಲ್ಲಾ ಸೂತ್ರಗಳನ್ನು ಅಳವಡಿಸಿಕೊಂಡು ನಮ್ಮ ಸಂಸ್ಥೆ ಕಾರ್ಯ ನಿರ್ವಹಿಸುತಿದ್ದೆ. ನಮ್ಮ ತಂದೆಯವರಾದ ಮಾಧವಚಾರ್ ಹಾಗೂ ಎಮ್.ಭೂಪತಿ ಸಂಸ್ಥೆ ಕಟ್ಟಿ ಬೆಳೆಸಿದ್ದಾರೆ. ೧೯೯೨ರಲ್ಲಿ ಶಿಲ್ಪ ಸಂಸ್ಥೆ ಪ್ರಾರಂಭವಾಯಿತು. ಹೆಚ್ಚಿನದಾಗಿ ಮಹಿಳೆಯರಿಗೆ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಯ ಸಮಯದಲ್ಲಿ ತಿಂಗಳ ಭತ್ಯೆಯನ್ನು ನೀಡಿ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ತರಬೇತಿ ಪಡೆದ ನಂತರ ಇಲ್ಲಿಯೇ ಗೊಂಬೆ ತಯಾರಿಕೆ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಿಂಗಳಿಗೆ ರೂ. ೬೦೦೦/–ಗಳಿಂದ ರೂ. ೧೮೦೦೦/– ವರೆಗೆ ಸಂಬಳ ನೀಡಲಾಗುತ್ತದೆ. ಇಲ್ಲಿ ಕೆಲಸ ಮಾಡುವ ಕುಶಲಕರ್ಮಿಗಳು ಮಕ್ಕಳಿಗೆ ಶಿಕ್ಷಣಕ್ಕೆ ಧನ ಸಹಾಯವನ್ನು ನೀಡುತ್ತೇವೆ. ಶಿಲ್ಪ ಟ್ರಸ್ಟ್‌ನಲ್ಲಿ Quality, Creativityಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುತ್ತದೆ. ಇಲ್ಲಿ ನಾನಾ ರೀತಿಯ ಆಟಿಕೆ ಸಾಮಾನುಗಳು, ಗೊಂಬೆಗಳನ್ನು

ತಯಾರಿಸುತ್ತಾರೆ. ಕರ್ನಾಟಕ ಹಾಗೂ ಹೊರ ರಾಜ್ಯಗಳಿಗೂ, ಹೊರ ರಾಷ್ಟ್ರಗಳಾದ ಜರ್ಮನ್, ಯುರೋಪ ಯು.ಎಸ್.ಎ. ಹೀಗೆ ಸಾಕಷ್ಟು ಕಡೆಗಳಲ್ಲಿ ಚನ್ನಪಟ್ಟಣದ ಗೊಂಬೆಗಳನ್ನು ರಫ್ತು ಮಾಡಲಾಗುತ್ತದೆ. ಕೆಂಗೇರಿಯಲ್ಲಿ ಶಿಲ್ಪ ಟ್ರಸ್ಟನಿಂದ ಕಾವೇರಿ ಎಂಪೋರಿಯನಲ್ಲೂ ಇಲ್ಲಿ ತಯಾರಿಸಿದ ಗೊಂಬೆಗಳನ್ನು ಮಾರಾಟ ಮಾಡಲಾಗುತ್ತದೆ. ಲಕ್ಷ್ಮಣ, ಬಸವರಾಜ್, ಚಂದ್ರ, ಬಾಬುಲಾಲ್, ಭೈರವ, ಕೃಷ್ಣ, ಕಸ್ತೂರಿ ದೊಡ್ಡಮ್ಮ, ಸಿದ್ದಮ್ಮ, ಹಾಗೂ ಲಕ್ಷ್ಮಿ ಇನ್ನೂ ಅನೇಕ ಕುಶಲಕರ್ಮಿಗಳು ಇಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಕಲಾವಿದೆ ದೊಡ್ಡಮ್ಮ ಅಂಬೇಡ್ಕರ ನಗರ ಚನ್ನಪಟ್ಟಣ:

ಇವರು ಮೂಲತಃ ವಿಜಾಪುರದವರು ಇವರ ಗಂಡ ಜೆ.ಸಿ.ಬಿ.ಯನ್ನು ನಡೆಸಲು ಕೂಲಿ ಕೆಲಸಕ್ಕೆಂದು ಚನ್ನಪಟ್ಟಣಕ್ಕೆ ಕುಟುಂಬದೊಂದಿಗೆ ಬಂದ ಇವರು ೧೫ ವರ್ಷಗಳಿಂದ ಇಲ್ಲಿ ನೆಲೆಸಿದ್ದಾರೆ. ಇವರು ಮಾಯ ಆರ್ಗ್ಯನಿಕ ಸಂಸ್ಥೆಯಲ್ಲಿ ತರಬೇತಿಯನ್ನು ಪಡೆದು ಪ್ರಸ್ತುತ ಶಿಲ್ಪ ಟ್ರಸ್ಟ್‌ನಲ್ಲಿ ಗೊಂಬೆ ತಯಾರಿಕೆ ಕೆಲಸವನ್ನು ಮಾಡುತ್ತಿದ್ದಾರೆ. ಇಲ್ಲಿ ಗೊಂಬೆಗಳ ಬಿಡಿ ಭಾಗಗಳನ್ನು ತಯಾರಿಸುತ್ತಾರೆ. ಚನ್ನಪಟ್ಟಣ ನಾನು ಮೊದಲು ಬಂದಾಗ ನಮ್ಮ ಯಜಮಾನರು ಕೆಲಸಕ್ಕೆಂದು ಹೋಗುತ್ತಿದ್ದರು. ನಂತರ ಮಕ್ಕಳು ಸಹ ಶಾಲೆಗೆ ಹೋಗುತ್ತಿದ್ದರು. ನಾನು ಒಬ್ಬಳೆ ಮನೆಯಲ್ಲಿಯೇ ಇರುತ್ತಿದ್ದೆ. ಸ್ಥಳೀಯವಾಗಿ ಗೊಂಬೆಯ ತಯಾರಿಸುತ್ತಿದ್ದನ್ನು ನೋಡಿ ನಾನು ಸಹ ಕಲಿಯಬೇಕೆಂದು ಮಾಯ ಟಾಯ್ಸ್ ಸೆಂಟರ್‌ನಲ್ಲಿ ೬ ತಿಂಗಳ ಕಾಲ ಅಲ್ಲಿ ತರಬೇತಿಯನ್ನು ಪಡೆದೆ. ನಂತರ ಅಲ್ಲಿಯೇ ಗೊಂಬೆ ತಯಾರಿಕೆ ಕೆಲಸವನ್ನು ಸ್ವಲ್ಪ ದಿನಗಳ ಕಾಲ ಮಾಡಿದೆ. ನಮ್ಮ ಮನೆಯಿಂದ ಮಾಯಾ ಸಂಸ್ಥೆ ದೂರವಿದ್ದರಿಂದ ಹತ್ತಿರವಿದ್ದ ಶಿಲ್ಪಾ ಟಾಯ್ಸ್ ಸಂಸ್ಥೆಗೆ ಸೇರಿಕೊಂಡು ಗೊಂಬೆ ತಯಾರಿಕೆ ಬಿಡಿ ಭಾಗಗಳನ್ನು ಮಾಡುತ್ತಿದ್ದೇನೆ ಎನ್ನುತ್ತಾರೆ ಕಲಾವಿದೆ ದೊಡ್ಡಮ್ಮ.

ಸಿದ್ದಮ್ಮ:

ಇವರು ಕಳೆದ ಎರಡು ವರ್ಷಗಳಿಂದ ಶಿಲ್ಪಾ ಟ್ರಸ್ಟನಲ್ಲಿ ಗೊಂಬೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಮೂಲತಃ ನಮ್ಮ ಮನೆಯಲ್ಲಿ ಯಾರಿಗೂ ಗೊಂಬೆ ತಯಾರಿಕೆ ಕೆಲಸ ಗೊತ್ತಿಲ್ಲ. ನಾನು ಮದುವೆಯಾಗಿ ಬಂದಾಗ ಚನ್ನಪಟ್ಟಣ ಗೊಂಬೆಗಳ ಬಗ್ಗೆ ಕುಶಲಕರ್ಮಿಗಳು ಬಳಸುವ ತಂತ್ರಗಳನ್ನು ಸೂಕ್ಷ್ಮವಾಗಿ ಗ್ರಹಿಸಿಕೊಳ್ಳುತ್ತ ಗೊಂಬೆ ತಯಾರಿಕೆಯಲ್ಲಿ

ಆರು ತಿಂಗಳವರೆಗೆ ಮಾಯಾ ಸಂಸ್ಥೆಯಲ್ಲಿ ತರಬೇತಿ ಪಡೆದೆ. ನಂತರ ಗೊಂಬೆ ತಯಾರಿಕೆ ಕೆಲಸವನ್ನು ಮುಂದುವರೆಸುತ್ತಿದ್ದೇನೆ.

ಹೆಣ್ಣು ಮಕ್ಕಳು ಸ್ವಂತ ಫ್ಯಾಕ್ಟರಿ ಮಾಡಿಕೊಂಡರೆ ಅದನ್ನು ನಿಭಾಯಿಸಲು ಕಷ್ಟ, ಕೆಲಸಕ್ಕೆ ಕಟ್ಟಿಗೆ ತರಬೇಕು. ಬಣ್ಣ ತಯಾರಿ ಮಾಡಬೇಕು, ಹಾಗೂ ನಾವು ತಯಾರಿಸಿದ ಸಮಾನುಗಳನ್ನು ಮಾರಾಟ ಮಾಡಬೇಕು. ಇದೆಲ್ಲ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಬೇರೆ ಫ್ಯಾಕ್ಟರಿಗೆ ಹೋಗಿ ಕೆಲಸ ಮಾಡುವುದರಿಂದ ಇವೆಲ್ಲ ಕಷ್ಟಗಳು ನಮಗೆ ಇರೋಲ್ಲ ಆರಾಮಾಗಿ ಬಂದು ಇವರು ಕೊಟ್ಟ ಕೆಲಸವನ್ನು ಮಾಡಿ ಮನೆಗೆ ಹೋಗಬಹುದು. ತಿಂಗಳಿಗೆ ರೂ. ೬೦೦೦/- ನನಗೆ ಸಂಬಳ ಕೊಡುತ್ತಾರೆ ಎನ್ನುತ್ತಾರೆ ಸಿದ್ದಮ್ಮ.

ರಾಜ್ಯ ಪ್ರಶಸ್ತಿ ಪುರಸ್ಕಾರರಾದ ಹಿರಿಯ ಕಲಾವಿದರ ಕೆಂಚಯ್ಯ:

ಕೆ.ಕೆಂಚಯ್ಯ ದಿನಾಂಕ ೦೫.೦೪.೧೯೪೧ರಲ್ಲಿ ಜನಿಸಿದರು. ತಂದೆ ಕಲಾಶಯ್ಯ ತಾಯಿ ಮುತ್ತಮ್ಮ. ಇವರು ರಾಮನಗರ ಜಿಲ್ಲೆಯ ಚನ್ನಪಟ್ಟಣದವರು. ಇವರ ಶಿಕ್ಷಣ ಐದನೇ ತರಗತಿವರೆಗೆ ವಿದ್ಯಾಭ್ಯಾಸವನ್ನು ಮುಗಿಸಿರುವ ಇವರು ಚನ್ನಪಟ್ಟಣ ಗೊಂಬೆಯ ಕಲೆಗಾರಿಕೆಯಲ್ಲಿ ಹೆಚ್ಚಿನ ಅವಿಷ್ಕಾರ ಕಲಾವಂತಿಕೆ ಮೆರೆದು ದೇಶ-ವಿದೇಶಗಳಿಗೆ ಕೀರ್ತಿ ಹರಡಿಸಿದ್ದಾರೆ. ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ಗೊಂಬೆ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕೆಂಚಪ್ಪನವರು ಇಂದಿನವರೆಗೂ ಗೊಂಬೆ ತಯಾರಿಕೆಯ ವೃತ್ತಿಯನ್ನು ಪ್ರವೃತ್ತಿ ಮಾಡಿಕೊಂಡಿದ್ದಾರೆ. ಕಡುಬಡತನದಲ್ಲಿ ಬೆಳೆದ ಇವರು ಗುರುಗಳಾದ ಸಯದ್ ನಿಜಾಮ್‌ರವರು ಜಪಾನ ದೇಶಕ್ಕೆ ಹೋಗಿ, ಅಲ್ಲಿಂದ ಮರಳಿದ ಮೇಲೆ ಹಾಲೆ ಮರದಲ್ಲಿ ತಯಾರಿಸುವ ಗೊಂಬೆಗಳಿಗೆ, ಆಟಿಕೆಗಳಿಗೆ ಹೊಸ ರೂಪಕೊಟ್ಟರು. ಇವರು ಜಪಾನಿನಿಂದ ಕೆಲವು ಕಲಾತ್ಮಕ ಗೊಂಬೆಗಳನ್ನು ತಂದು ಚನ್ನಪಟ್ಟಣದ ಕಲಾವಿದರಿಗೆ ಪರಿಚಯಿಸಿದರು. ನಂತರ ಕೆಲವು ಗೊಂಬೆಗಳನ್ನು ಚನ್ನಪಟ್ಟಣದಲ್ಲಿಯೇ ತಯಾರಿಸಿದರು. ಇಂತಹ ಗೊಂಬೆಗಳ ತಯಾರಿಕೆಯಿಂದ ವಿಶ್ವ ಪ್ರಸಿದ್ಧಿಯನ್ನು ಪಡೆಯಿತು. ಈ ಗೊಂಬೆಗಳ ತಯಾರಿಕೆಯಲ್ಲಿ ಕೆಂಚಪ್ಪರವರು ಸಹ ಸಾಕಷ್ಟು ಕೆಲಸ ಮಾಡಿದ್ದಾರೆ. ಮೊದ-ಮೊದಲು ಆಟದ ಗೊಂಬೆಯನ್ನು ತಯಾರಿಸುತ್ತಿದ್ದ ಕೆಂಚಪ್ಪನವರು ನಂತರ ದಿನಗಳಲ್ಲಿ ಪೌರಾಣಿಕ ಗೊಂಬೆಗಳಾದ ಶಕ್ತಿ, ರಾಮ ಸೀತೆ, ಅಂಜನೇಯ, ಗಣೇಶ ಅಲ್ಲದೆ ಐತಿಹಾಸಿಕ ವ್ಯಕ್ತಿಗಳ ಮೂರ್ತಿಗೊಂಬೆಗಳನ್ನು ತಯಾರಿಸಲು ಪ್ರಾರಂಭಿಸಿದರು.

೧೯೮೭ರಲ್ಲಿ ಕಾವೇರಿ ಹ್ಯಾಂಡಿಕ್ರಾಫ್ಟ್, ಬೆಂಗಳೂರು ವತಿಯಿಂದ 'ಶಕ್ತಿ ಪೂಜಾರಿ' ಕಲಾಕೃತಿಗೆ ಬಹುಮಾನವು ಬಂತು. ತಮ್ಮ ಗೊಂಬೆ ಕಲಾಕೃತಿಗಳನ್ನು ಬೆಂಗಳೂರು, ಪಂಜಾಬ್, ದೆಹಲಿ, ಮುಂಬಯಿ, ಹರಿಯಾಣ, ಓರಿಸ್ಸಾ, ತಂಜಾವೂರು, ಮದ್ರಾಸ್, ಪಾಂಡಿಚೇರಿ ಹಾಗೂ ಹೊರದೇಶಗಳಾದ ಫ್ರಾನ್ಸ್, ಜರ್ಮನ್, ಬಾರ್ಸಿಲೋನಾ, ಪ್ಯಾರಿಸ್ ಮೊದಲಾದ ಕಡೆಗಳಲ್ಲೂ ಪ್ರದರ್ಶಿಸಿದ್ದಾರೆ.

ಇವರಿಗೆ ೨೦೦೨ರಲ್ಲಿ ತಾವು ರಚಿಸಿದ ಆಂಜನೇಯ ಗೊಂಬೆ ಕಲಾಕೃತಿಗೆ ಕರ್ನಾಟಕ ರಾಜ್ಯ ಪ್ರಶಸ್ತಿಯೂ ಲಭಿಸಿದೆ. ಕಲಾವಿದ ಕೆಂಚಪ್ಪನವರು ಕನ್ನಡ, ತೆಲುಗು, ಹಿಂದಿ, ಉರ್ದು ಹಾಗೂ ತಮಿಳ್‌ನ್ನು ಸರಾಗವಾಗಿ ಮಾತನಾಡುವ ಪಂಚ ಭಾಷಾ ಪ್ರವೀಣರು. ಇವರು ೨೪ ವರ್ಷದವರಿದ್ದಾಗಲೇ ಮರವನ್ನು ಕತ್ತರಿಸುವ ಸಂದರ್ಭದಲ್ಲಿ ತಮ್ಮ ಕೈಯನ್ನು ಊನ ಮಾಡಿಕೊಂಡಿದ್ದಾರೆ. ಆದರೂ ಗೊಂಬೆ ತಯಾರಿಸುವದನ್ನು ಮಾತ್ರ ನಿಲ್ಲಿಸಿಲ್ಲ. ಗೊಂಬೆಗಳನ್ನು ಕೆತ್ತುವುದು. ಬಣ್ಣ ಹಚ್ಚುವುದು ಎಲ್ಲಾ ಕಾರ್ಯವನು ಸರಾಗವಾಗಿ ಮಾಡುತ್ತಾರೆ. ಇವರು ಧರ್ಮಪತ್ನಿಯಾದ ಕಲ್ಯಾಣಮ್ಮ ಸಹ ಜೊತೆಗೂಡಿ ಗೊಂಬೆಗಳ ತಯಾರಿಕೆಯಲ್ಲಿ ಸಹಾಯವನ್ನು ಮಾಡುತ್ತಾರೆ. ಗೊಂಬೆಗಳಿಗೆ ಬಣ್ಣ ಹಚ್ಚುವದು, ಅವುಗಳಿಗೆ ಅಲಂಕಾರಿಕ ನಕ್ಷೆಗಳನ್ನು ಬಹಳ ಸೊಗಸಾಗಿ ನಿರ್ಮಿಸುತ್ತಾರೆ. ಈ ದಂಪತಿಗೆ ಒಟ್ಟು ಆರು ಜನ ಮಕ್ಕಳು. ಎಲ್ಲಾ ಮಕ್ಕಳಿಗೂ ಈ ಗೊಂಬೆ ತಯಾರಿಕೆಯ ಕಲೆಯ ಪರಿಣಿತಿ ನೀಡಿದ್ದಾರೆ. ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಪರಿಷತ್ತು 'ಸಾಂಸ್ಕೃತಿಕ ಲೋಕ' ೦೩.೦೩.೨೦೧೪ರಂದು ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಈಗಾಗಲೇ ಅನೇಕ ಸಂಘ ಸಂಸ್ಥೆಗಳು ಕಲಾವಿದ ಕೆಂಚಪ್ಪನವರ ಕಲಾವಂತಿಕೆ ಗುರುತಿಸಿ ಅನೇಕ ಪ್ರಶಸ್ತಿ ಗೌರವಗಳನ್ನು ನೀಡಿ ಸನ್ಮಾನಿಸಿದೆ.

ಕಲಾವಿದ ಪರಶಿವಯ್ಯ:

ಪರಶಿವಯ್ಯನವರು ಹುಟ್ಟಿದ್ದು ೦೫.೦೪.೧೯೬೪ ಚನ್ನಪಟ್ಟಣದಲ್ಲಿ ಜನಿಸಿದರು. ತಂದೆ ಮರಿಯಪ್ಪ ತಾಯಿ ಜಯಮ್ಮ ಒಟ್ಟು ಆರು ಜನ ಮಕ್ಕಳೊಂದಿಗೆ ತುಂಬು ಕುಟುಂಬದಲ್ಲಿ ಬೆಳೆದವರು. ಶಿಕ್ಷಣ ೫ ನೇ ತರಗತಿಯವರೆಗೆ ಮಾತ್ರ. ತಂದೆಯ ವೃತ್ತಿ ಗಾರೆ ಕೆಲಸ ಹಾಗೂ ಮೀನು ಹಿಡಿಯುವ ವೃತ್ತಿಯಿಂದ ಕುಟುಂಬ ನಿರ್ವಹಣೆ ಮಾಡುತ್ತಿದ್ದರು. ಪರಶಿವಯ್ಯನವರು ಓದನ್ನು ಮೊಟಕುಗೊಳಿಸಿ ಧನ ಕುರಿ ಮೆಯಿಸಲು ತೊಡಗಿದರು. ನಂತರ ದಿನಗಳಲ್ಲಿ ಮನೆಗೆ

ಹಿರಿಯ ಮಗನಾಗಿದ್ದರಿಂದ ಕುಟುಂಬದ ಜವಾಬ್ದಾರಿ ಜಾಸ್ತಿಯಾಗಿದ್ದರಿಂದ ತಂದೆಯವರು ರಾಚಯ್ಯ ಟಾಯ್ಸ್ ಫ್ಯಾಕ್ಟರಿಗೆ ಗೊಂಬೆ ತಯಾರಿಕೆ ಕೆಲಸಕ್ಕೆ ಸೇರಿಸಿದರು. ೨೦ ರೂಪಾಯಿಗಳ ಕೂಲಿಯಂತೆ ಇಲ್ಲಿ ೧೦ ವರ್ಷಗಳ ಕಾಲ ಕೆಲಸವನ್ನು ನಿರ್ವಹಿಸಿದರು. ನಂತರ ವಾರದ ಕೂಲಿಯಂತೆ ಸಾವಜಾನ್ ಎಂಬುವರ ಫ್ಯಾಕ್ಟರಿಯಲ್ಲೂ ೬ ವರ್ಷಗಳ ಕಾಲ ಕೆಲಸವನ್ನು ನಿರ್ವಹಿಸಿದ್ದಾರೆ. ಬ್ಯಾಂಕಿನಿಂದ ಧನ ಸಹಾಯವನ್ನು ತೆಗೆದುಕೊಂಡು ಸ್ವಂತ ಟಾಯ್ಸ್ ಫ್ಯಾಕ್ಟರಿಯನ್ನು ಹಾಕಿದ್ದಾರೆ. ಇವರ ಮಡದಿ ಜಯಲಕ್ಷ್ಮೀ ಕೂಡ ಗೊಂಬೆ ತಯಾರಿಕೆಯಲ್ಲಿ ಸಿದ್ಧಹಸ್ತರು. ಈ ದಂಪತಿಗಳಿಗೆ ಮೂರು ಜನ ಮಕ್ಕಳು ಸುನೀತಾ ಬಿ.ಎ.,ಬಿ.ಇಡಿ, ಸಿಂಧೂ ಬಿ.ಎ ಹಾಗೂ ಮಗ ಸುಜಾಯ್ ಪಿ.ಯು.ಸಿ ಯನ್ನು ಮುಗಿಸಿದ್ದಾರೆ. ಇವರ ಮೂವರು ಮಕ್ಕಳು ಶಿಕ್ಷಣದ ಜೊತೆ ಗೊಂಬೆ ತಯಾರಿಸುವ ಕೆಲಸದಲ್ಲಿ ನಿಪುಣರಿದ್ದಾರೆ. ಜಯಲಕ್ಷ್ಮೀಯವರು ಸ್ತ್ರೀಶಕ್ತಿ ಸಂಘ ಸಂಸ್ಥೆಗಳ ಸಹಾಯದಿಂದ ತಾವು ಮಾಡಿದ ಬೊಂಬೆಗಳನ್ನು ಗೋವಾ, ದೆಹಲಿ, ಮೈಸೂರು, ಶಿವಮೊಗ್ಗ, ಹೈದ್ರಾಬಾದ್ ಮುಂತಾದ ಕಡೆಗಳಿಗೆ ಹೋಗಿ ಮಾರಾಟವನ್ನು ಮಾಡಿದ್ದಾರೆ. ಬುಗರಿ, ಬಳೆಗಳು, ಷೋಕೆಸಿನ ಸಾಮಾನುಗಳು, ಸ್ತ್ರೀ- ಪುರುಷ ಗೊಂಬೆಗಳು ಪ್ರಾಣಿ-ಪಕ್ಷಿಗಳ ಗೊಂಬೆಗಳು, ಸ್ಪ್ರಿಂಗ್ ಗೊಂಬೆಗಳು ಹತ್ತು ಹಲವು ರೀತಿಯ ಗೊಂಬೆಗಳನ್ನು ತಯಾರಿಸುತ್ತಾರೆ.

ನಕ್ಷಾ ಚಿತ್ರಕಾರ ಕಲಾವಿದ ಚಂದ್ರು:

ಚಂದ್ರುರವರ ಮೂಲತಃ ಚನ್ನಪಟ್ಟಣದವರೆ. ತಂದೆ ಕೆಂಚಯ್ಯ ತಾಯಿ ಚೆಲುವಮ್ಮ, ಶಿಕ್ಷಣ ೫ನೇಯ ತರಗತಿವರೆಗೆ, ಮನೆಯಲ್ಲಿ ತಂದೆಯವರು ಗೊಂಬೆಯ ಕೆಲಸವನ್ನು ಮಾಡುತ್ತಿರುವುದನ್ನು ಇವರ ಮೇಲೆ ಪ್ರಭಾವ ಬೀರಿ ಶಿಕ್ಷಣವನ್ನು ಮೊಟಕುಗೊಳಿಸಿ, ಗೊಂಬೆ ತಯಾರಿಕೆ ಕೆಲಸ ಹೆಚ್ಚು ಆಸಕ್ತಿ ಇದ್ದರಿಂದ ಇದನ್ನೇ ಚಿಕ್ಕ ವಯಸ್ಸಿನಿಂದಲೂ ಮುಂದುವರೆಸಿಕೊಂಡು ಬಂದಿದ್ದಾರೆ. ೩೫ ವರ್ಷಗಳಿಂದ ಗೊಂಬೆ ತಯಾರಿಕೆ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಶಿಲ್ಪಾ ಟ್ರಸ್ಟ್‌ನಲ್ಲಿ ಗೊಂಬೆ ತಯಾರಿಕೆ ಹಾಗೂ ನಕ್ಷಾ ಚಿತ್ರಕಾರರಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಇವರ ಕೆಲಸದ ವೇಳೆ ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ, ಸಾಯಂಕಾಲ ಸಮಯದಲ್ಲಿ ಸುಮ್ಮನೆ ಕಾಲ ಕಳೆಯುವುದಿಲ್ಲ. ಮನೆಯಲ್ಲಿ ವಿದ್ಯುತ್ ಯಂತ್ರವನ್ನು ಅಳವಡಿಸಿಕೊಂಡಿದ್ದಾರೆ. ಬೇರೆ ಬೇರೆ ಕಡೆಯಿಂದ ಗೊಂಬೆಗಳ

ತಯಾರಿಕೆಯ ಬೇಡಿಕೆಗಳು ಬಂದಾಗ ಅವುಗಳನ್ನು ಸಹ ತಯಾರಿಸಿ ಕೊಡುತ್ತಾರೆ. ಇವರು ತಯಾರಿಸಿದ ಗೊಂಬೆಗಳನ್ನು ದೆಹಲಿ ಪಾಂಡಿಚೇರಿ, ಬಾಂಬೆ, ಕೇರಳ ಕೊಯಮತ್ತೂರು, ಹಾಗೂ ಕರ್ನಾಟಕದಲ್ಲಿಯೂ ಸಾಕಷ್ಟು ಕಡೆ ಹೋಗಿ ಚನ್ನಪಣ್ಣಣದ ಗೊಂಬೆಗಳನ್ನು ವ್ಯಾಪಾರವನ್ನು ಮಾಡಿದ್ದಾರೆ. ಎಲ್ಲಾ ಸ್ಥಳಗಳಲ್ಲಿ ಗೊಂಬೆಗಳ ಬೇಡಿಕೆ ಸಾಕಷ್ಟು ಇದೆ ಎನ್ನುತ್ತಾರೆ ಕಲಾವಿದ ಚಂದ್ರು.

ಸಿದ್ದರಾಮಯ್ಯ:

ತಂದೆ ಶಿವಣ್ಣ ತಾಯಿ ಭೌರಮ್ಮ ದಂಪತಿಗಳಿಗೆ ಮೂರು ಜನ ಮಕ್ಕಳಲ್ಲಿ ಹಿರಿಯ ಮಗನಾದ ಸಿದ್ದರಾಮಯ್ಯನವರು ಶಿಕ್ಷಣ ಎಸ್.ಎಸ್.ಎಲ್.ಸಿ. ಅನುತ್ತೀರ್ಣರಾಗಿದ್ದಾರೆ. ನಂತರ ಸರಕಾರದ ವತಿಯಿಂದ ಗೊಂಬೆ ತಯಾರಿಕೆಯ ಕೇಂದ್ರದಲ್ಲಿ ಒಂದು ವರ್ಷಗಳ ಕಾಲ ತರಬೇತಿಯನ್ನು ಪಡೆದು ನಂತರ ಬೇರೆ ಟಾಯ್ಸ್ ಫ್ಯಾಕ್ಟರಿ ಯಲ್ಲಿ ೪ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ನಂತರ ದಿನಗಳಲ್ಲಿ ಸ್ವಂತ ವಿದ್ಯುತ್ ಚಾಲಿತ ಯಂತ್ರವನ್ನು ಅಳವಡಿಸಕೊಂಡು ಗೊಂಬೆಗಳ ತಯಾರಿಕೆ ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದೇನೆ. ಮೂಲತಃ ತಂದೆ ಶಿವಣ್ಣನವರು ಮನೆಯಲ್ಲಿ ಗೊಂಬೆಗಳ ಕೆಲಸವನ್ನು ಮಾಡುತ್ತಿದ್ದರು. ಮೊದಲು ನೀಲಸಂದ್ರದಲ್ಲಿ ಕುಟುಂಬ ನೆಲೆಸಿತ್ತು. ನಂತರ ತಂದೆ ಸರಕಾರದ ವತಿಯಿಂದ ಕಲಾನಗರದಲ್ಲಿ ಮನೆಯನ್ನು ನೀಡಲಾಯಿತು. ತಂದೆಯವರು ಕೊಕ್ಕರೆ, ಪೋಲೀಸ್, ಸ್ಪ್ರಿಂಗ್ ಗೊಂಬೆಗಳ ಪ್ರಾಣಿ–ಪಕ್ಷಿಗಳು ಸಿದ್ಧಪಡಿಸುವಲ್ಲಿ ಸಾಕಷ್ಟು ಪರಿಣಿತಿಯನ್ನು ಹೊಂದಿದ್ದಾರೆ. ನಾನು ಸಹ ಕೊಕ್ಕರೆ ವಾಹನಗಳಂತ ಬಸ್ಸು, ರೈಲು, ಕಾರು, ಮೋಹಿನಿ, ದೇವರ ಮಂಟಪಗಳು, ಬಳೆಸ್ಟಾಂಡ್, ಹೀಗೆ ಹತ್ತು ಹಲವು ರೀತಿಯ ಬಗೆಯ ವಸ್ತುಗಳನ್ನು ನಿರ್ಮಿಸುತ್ತೇನೆ. ನಾವು ತಯಾರಿಸುವ ವಸ್ತುಗಳನ್ನು ಸ್ಥಳೀಯವಾಗಿ ಅಂಗಡಿಗಳಿಗೆ ಮಾರಾಟ ಮಾಡುತೇವೆ. ಇದರಿಂದ ನಮಗೆ ಹೆಚ್ಚಿನದಾಗಿ ಲಾಭ ಸಿಗುವುದಿಲ್ಲ. ಅಲ್ಲದೆ ಬೇರೆ ಕಡೆ ಹೋಗಿ ಮಾರಾಟ ಮಾಡಲು ಸಾಧ್ಯವಿಲ್ಲ. ಅದಕ್ಕೆಂದು ಹೆಚ್ಚಿನ ಬಂಡವಾಳ ಬೇಕಾಗುತ್ತದೆ. ಆದ್ದರಿಂದ ಸ್ಥಳೀಯವಾಗಿ ಮಾರಾಟ ಮಾಡುತ್ತೇವೆ. ನನ್ನ ಮಕ್ಕಳಿಗೆ ಗೊಂಬೆ ತಯಾರಿಕೆ ವೃತ್ತಿಯನ್ನು ಕಲಿಸಿಲ್ಲ. ಅವರು ಚೆನ್ನಾಗಿ ಓದಿ ಬೇರೆ ಕೆಲಸವನ್ನು ಮಾಡಲಿ ಗೊಂಬೆ ತಯಾರಿಕೆಯಿಂದ ಲಾಭವಿಲ್ಲ ಎನ್ನುತ್ತಾರೆ.

ಕುಲಾವ್:

ಇವರು ಪ್ರಸ್ತುತ ಕಲಾನಗರದಲ್ಲಿ ಯುನಿಯನ್ ಬ್ಯಾಂಕ್ ಧನ ಸಹಾಯದಿಂದ ವಿದ್ಯುತ್‌ಚಾಲಿತ ಯಂತ್ರವನ್ನು ಅಳವಡಿಸಿಕೊಂಡು ಮಕ್ಕಳಾದ ಫೈರಜ್ ಹಾಗೂ ಅಫರಜ್‌ರೊಂದಿಗೆ ಗೊಂಬೆಯ ತಯಾರಿಕಾ ಕೆಲಸವನ್ನು ಮಾಡುತ್ತಿದ್ದಾರೆ. ತಾಯಿ ಫಾತಿಮಾ, ತಂದೆ ಸಾಹಿಬ್‌ಮಿಯಾ ಪಟ್ರಿ ಲೇತ್‌ನಲ್ಲಿ ಮಣಿ ತಯಾರಿಕೆ ಕೆಲಸವನ್ನು ಮಾಡುತ್ತಿದ್ದರು. ನೋಡು-ನೋಡುತ್ತಾ ನಾನು ಕಲಿತು ಕೊಂಡು ಸರಿಸುಮಾರು ೩೫ ವರ್ಷಗಳಿಂದ ಗೊಂಬೆಗಳ ತಯಾರಿಕೆ ಕೆಲಸವನ್ನು ಮಾಡುತ್ತಿದ್ದೇನೆ. ಸಾಕಷ್ಟು ಲಾಭವನ್ನು ತರುವಂತಹ ಉದ್ಯಮವಿದಾಗಿದೆ. ಈಗಾಗಲೇ ಸ್ವಂತ ಮನೆಯನ್ನು ನಿರ್ಮಿಸಿದ್ದೇನೆ. ಉದ್ಯಮಕ್ಕೆಂದು ಬ್ಯಾಂಕಿನಿಂದ ತೆಗೆದುಕೊಂಡ ಸಾಲವನ್ನು ತೀರಿಸಿಕೊಂಡಿದ್ದೇನೆ. ಮಕ್ಕಳಿಗೆ ತಕ್ಕಮಟ್ಟಿಗೆ ವಿದ್ಯಾಭ್ಯಾಸವನ್ನು ಕಲಿಸಿದ್ದೇನೆ. ಇನ್ನೂ ಓದಿತ್ತಿದ್ದರೇ ನಾನು ಶಿಕ್ಷಣವನ್ನು ಕೊಡಿಸುತ್ತೀದ್ದೆ. ಆದರೆ ಇವರಿಗೆ ಆಸಕ್ತಿಯಿಲ್ಲ. ಆದ್ದರಿಂದ ನಮ್ಮ ಟಾಯ್ಸ್ ಫ್ಯಾಕ್ಟರಿಯಲ್ಲಿಯೇ ಕೆಲಸವನ್ನು ಮಾಡುತ್ತಾರೆ. ಅಲೆ ಮರದಲ್ಲಿ ಶ್ರೀಗಂಧದ ಮರದಿಂದ ಗೊಂಬೆಯಂತಹ ಸಾಮಾನುಗಳನ್ನು ತಯಾರಿಸಿದ್ದೇನೆ. ಒಟ್ಟು ೧೫೦ ರಿಂದ ೨೫೦ ರೀತಿಯ ಬಗೆ-ಬಗೆಯ ಸಾಮಾನುಗಳನ್ನು ತಯಾರಿಸಿದ್ದೇನೆ. ಪೆನ್ನು, ಅಗರಬತ್ತಿ, ಸ್ಟಾಂಡ್ ದೇವರ ಮಂಟಪ, ಕಿಚನ್ ಸೇಟ್, ನಾನಾ ಬಗೆಯ ಪ್ರಾಣಿ-ಪಕ್ಷಿಗಳು ಹಾಗೂ ಕ್ರಿಯಾತ್ಮಕವಾದ ಗೊಂಬೆಗಳನ್ನು ತಯಾರಿಸಿದ್ದೇನೆ. ಸ್ವಂತಹ ಹಾಗೂ ಮಧ್ಯವರ್ತಿಗಳಿಂದ ಬಂದಂತ ಬೇಡಿಕೆಯ ಗೊಂಬೆಯ ಸಾಮಾನುಗಳನ್ನು ತಯಾರಿಸಿದ್ದೇನೆ.

ದಶರಥ:

ಹನುಮಂತ ನಗರದ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ತಯಾರಿಕೆಯ ಕಲೆಯನ್ನು ಪೋಷಿಸುತ್ತಾ ಬಂದಿರುವ ಹಿರಿಯ ಕುಶಲಕರ್ಮಿ. ದಶರಥನವರ ತಂದೆ ಸಿದ್ದಪ್ಪ, ತಾಯಿ ಶಾರದಮ್ಮನವರ ಮಗನಾದ ಇವರು ತಾಯಿಯ ತಂದೆ ವಿ.ವೆಂಕಟಯ್ಯ ಕುಂಬಾರ ಕಾಲೋನಿಯಲ್ಲಿ ವಾಸವಿದ್ದರು. ಗೊಂಬೆ ತಯಾರಿಕೆಯ ಕೆಲಸವನ್ನು ಇವರಿಂದ ಬಳುವಳಿಯಾಗಿ ಬಂದಿದೆ ಎನ್ನುತ್ತಾರೆ. ೬೦ ವರ್ಷದ ಕುಶಲಕರ್ಮಿ ದಶರಥನವರು. ೭೪ನೇ ಇಸವಿಯಿಂದ ಸರಕಾರದ ವತಿಯಿಂದ ನಡೆಯುವ ಈ ಟಾಯ್ಸ್ ಫ್ಯಾಕ್ಟರಿಯಲ್ಲಿ ದುಡಿಯುತ್ತಿದ್ದೇನೆ. ಒಟ್ಟು ೨೪ ಜನ ದುಡಿಯವಂತಹ ಫ್ಯಾಕ್ಟರಿ ಈಗ ಕೇವಲ ೧೨ ಮಂದಿ ಮಾತ್ರ ಕೆಲಸ ಮಾಡುತ್ತಿದ್ದಾರೆ.

ಒಂದು ದಿನಕ್ಕೆ ೬೦ ರೂಪಾಯಿಗಳು ಬಾಡಿಗೆಯಂತೆ ಇಲ್ಲಿ ವಿದ್ಯುತ್ ಯಂತ್ರಗಳನ್ನು ಉಪಯೋಗಿಸಬಹುದು. ವಿದ್ಯುತ್ತಿನ ಖರ್ಚು ಸರಕಾರವೇ ಭರಿಸಿಕೊಳ್ಳುತ್ತದೆ. ೨೫ ವರ್ಷಗಳ ಕುಂಬಾರ ಕೇರಿ ನಮ್ಮ ತಾತನ ಹತ್ತಿರ ಕೆಲಸವನ್ನು ನಿರ್ವಹಿಸಿದ್ದೇನೆ. ವಿವಿಧ ಬಗೆಯ ಕ್ರಿಯಾತ್ಮಕ ಕೀ ಚೈನಗಳು, ಡೋರ್ ಕರಟನ್ ರಿಂಗಗಳು, ಕೀಟ್‌ಕಿಟೆ, ನ್ಯಾಪಕೀನ್ ರಿಂಗ್, ಬಳೆಗಳು, ಹತ್ತು ಹಲವು ರೀತಿಯ ಸಾಮಾನುಗಳನ್ನು ಮಾಡಿದ್ದೇನೆ.

ಮೊಹಮ್ಮದ್ ಅಲಿಖಾನ್:

ಇವರು ಮೂಲತಃ ಚನ್ನಪಟ್ಟಣದಲ್ಲಿಯೇ ಹುಟ್ಟಿ ಬೆಳೆದವರಾಗಿದ್ದಾರೆ. ದಾವದ್ ಖಾನ್ ಹಾಗೂ ಮುಬಿನಾಬಿ ದಂಪತಿಗಳಿಗೆ ೩ನೇ ಮಗನಾಗಿ ಜನಿಸಿದವರು. ಎಸ್.ಎಸ್.ಎಲ್.ಸಿ ಓದುತ್ತಿರುವಾಗ ತಂದೆ ತೀರಿಕೊಂಡಾಗ ಕುಟುಂಬವನ್ನು ನಡೆಸುವ ಸಲುವಾಗಿ ಸ್ಥಳೀಯವಾಗಿ ಗೊಂಬೆ ತಯಾರಿಕೆ ಹೆಚ್ಚಿದ್ದರಿಂದ ಈ ವೃತ್ತಿಯನ್ನು ಶ್ರದ್ಧೆಯಿಂದ ಗೊಂಬೆಗಳ ತಯಾರಿಕೆಯ ತರಬೇತಿಯನ್ನು ಪಡೆದರು. ಟಾಯ್ಸ್ ಸರ್ಟಿಫೀಕೆಟನೊಂದಿಗೆ ಬೇಬಿ ಲೇತ್ ಯಂತ್ರವನ್ನು ಸರಕಾರದಿಂದ ದೊರೆಯಿತು. ನಂತರ ಅಭಿದ್‌ಪುರ, ಕೋಟೆ, ನಿಜಾಮ್‌ಚೌಕ ಇತರ ಕಡೆಗಳಲ್ಲಿ ಕೂಲಿ ರೀತಿಯಲ್ಲಿ ಗೊಂಬೆ ಕೆಲಸವನ್ನು ನಿರ್ವಹಿಸಿದ್ದಾರೆ. ಬೆಂಗಳೂರಿನ ಕಾವೇರಿ ಎಂಪೋರಿಯಮ್ ಮುಖಾಂತರ ಅನೇಕ ಕಲಾಕೃತಿಗಳನ್ನು ಮಾರಾಟ ಮಾಡಿರುವ ಇವರು ತನ್ನ ಅಣ್ಣನ ಮಕ್ಕಳ ಶಿಕ್ಷಣ ಜವಾಬ್ದಾರಿಯನ್ನು ನೋಡಿಕೊಂಡು ತಮಗಿರುವ ನಾಲ್ಕು ಮಕ್ಕಳಿಗೂ ಒಳ್ಳೆಯ ಶಿಕ್ಷಣ ನೀಡಿದ್ದಾರೆ. ಮಗಳು ಏರೋನಾಟಿಕ್ಸ್ ಇಂಜಿನಿಯರಿಂಗ್, ಮಗ ಬಿ.ಫಾರಂ ಓದುತ್ತಿದ್ದಾನೆ. ಇನ್ನುಳಿದ ಮಕ್ಕಳು ಪ್ರೌಢಶಾಲೆಯ ಹಂತದ ವಿದ್ಯಾಬ್ಯಾಸವನ್ನು ಮಾಡುತ್ತಿದ್ದಾರೆ. ತಾವು ತಯಾರಿಸುವ ಗೊಂಬೆಗಳಿಗೆ ಕೆಲಸಕ್ಕೆ ತಕ್ಕ ಸಂಭಾವನೆ ದೊರಕುವುದಿಲ್ಲ ಎಂಬ ಕೊರತೆ ಕಾಡುತ್ತಿದ್ದರು. ಚನ್ನಪಟ್ಟಣ ಗೊಂಬೆ ಕಾರ್ಮಿಕರಿಗೆ ಸ್ಥಿತಿಯ ಪ್ರತಿಬಿಂಬವಾಗಿದೆ.

ಮೊಹಮ್ಮದ್ ಷರೀಫ್:

೧೦ನೇ ವಯಸ್ಸಿನಲ್ಲಿಯೇ ಗೊಂಬೆ ತಯಾರಿಕೆ ಕಲೆಯನ್ನು ಅಭ್ಯಾಸ ತೊಡಗಿದ ಮೊಹಮ್ಮದ್ ಷರೀಫ್ ಚನ್ನಪಟ್ಟಣ ಕಲಾನರದಲ್ಲಿ ಜನಿಸಿದ ಇವರು ೫ನೇಯ ತರಗತಿಯವರೆಗೆ ವ್ಯಾಸಂಗ ಮಾಡಿದ್ದಾರೆ. ಇವರ ಪತ್ನಿ ಮನೆಯ ಕಾರ್ಯದಲ್ಲಿ ತೊಡಗಿಸಿಕೊಂಡರೆ, ಈ ದಂಪತಿಗೆ ೭ ಜನ ಮಕ್ಕಳಿದ್ದರೆ. ಇವರು ಮೇಣದಬತ್ತಿಯ ಸ್ಟಾಂಡಗಳು, ಬಳೆಗಳು, ರಬ್ಬರ್ ಬ್ಯಾಂಡಗಳು

ಬ್ರಾಸಲೈಟ್, ಮಂಟಪ ಅಲ್ಲದೇ ಸಾಕಷ್ಟು ರೀತಿಯ ಗೊಂಬೆಯ ಕಲಾಕೃತಿಗಳನ್ನು ರಚಿಸಬಲ್ಲವರಾಗಿದ್ದಾರೆ. ದೆಹಲಿ, ಚೈನ್ನೈ, ಸಿಲೋನ್, ಹೈದ್ರಾಬಾದ್, ತಿರುಪತಿ ಅಲ್ಲದೆ ಕರ್ನಾಟಕದಲ್ಲಿ ಎಲ್ಲೇ ಪ್ರದರ್ಶನ ಮೇಳಗಳು ಇದ್ದಲ್ಲಿ ಮೊಹಮ್ಮದ್ ಷರೀಫ್ ಅವರ ಗೊಂಬೆ ಕಲಾಕೃತಿಗಳು ಹಾಗೂ ಸಾಮಾನುಗಳು ಪ್ರದರ್ಶನಗೊಳ್ಳುತ್ತವೆ.

ಷರೀಫ್ ಅಹಮ್ಮದ್:

೫೪ ಹರೆಯದ ಎಸ್.ಎಸ್.ಎಲ್.ಸಿ ಓದಿದ ಇವರು ನಂತರ ಚನ್ನಪಟ್ಟಣದ ಗೋಮಬೆ ತಯಾರಿಕೆ ಕೆಲಸಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಈ ಕ್ಷೇತ್ರದಲ್ಲಿ ೩೫ ವರ್ಷ ಪರಿಣಿತಿಯನ್ನು ಹೊಂದಿದ್ದಾರೆ. ಮೊದಲು ಕೇಂದ್ರ ಸರಕಾರದಿಂದ ಗೊಂಬೆ ತಯಾರಿಕೆ ತರಬೇತಿಯ ೧ ವರ್ಷಗಳ ಕಾಲ ಪಡೆದಿದ್ದಾರೆ. ಬೇರೆ-ಬೇರೆ ಗೊಂಬೆ ಫ್ಯಾಕ್ಟರಿಗಳಲ್ಲಿ ದಿನಕೂಲಿಯಂತೆ ದುಡಿದಿದ್ದಾರೆ. ನಂತರ ದಿನಗಳಲ್ಲಿ ಈ ಕೆಲಸವನ್ನು ಬಿಟ್ಟು ಬೆಂಗಳೂರಿನ ರಸಾಯನಿಕ ಮಾರಾಟ ಕಾರ್ಖಾನೆಯ ೩ ವರ್ಷಗಳ ಕಾಲ ಕೆಲಸವನ್ನು ನಿರ್ವಹಿಸಿ ಅಲ್ಲಿಂದ ವಾಪಸ್ಸ ಬಂದು ಗೊಂಬೆಯ ನಿರ್ಮಿಸುವ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಗೊಂಬೆಗಳ ತಯಾರಿಕೆ ಮಾರಾಟದ ಬಗ್ಗೆ ಕೇಳಿದಾಗ ಗೊಂಬೆಗಳ ತಯಾರಿಸುವ ಅಲೆ ಮರವು ಹೆಚ್ಚಾಗಿ ಸಿಗುವುದಿಲ್ಲ. ಪ್ರಸ್ತುತ ಇದರ ಬೆಲೆ ಟನ್ ಒಂದಕ್ಕೆ ರೂ. ೪೦೦೦/- ರಿಂದ ರೂ. ೫೦೦೦ ರೂ. ಗಳವರೆಗೆ ಇದೆ. ಮತ್ತೆ ಅಂಗು, ವಿದ್ಯುತ್ ಬಿಲ್ಲು ಹೀಗೆ ಎಲ್ಲಾ ಕಳೆದು ಒಂದು ದಿನಕ್ಕೆ ರೂ. ೧೫೦ ರಿಂದ ೩೦೦ ರೂ.ಗಳು ಉಳಿಸಬಹುದು. ನಾವು ತಯಾರಿಸುವ ವಸ್ತುಗಳಿಗೆ ಅರ್ಧದಷ್ಟು ಕಮ್ಮಿ ದುಡ್ಡಿಗೆ ಮಧ್ಯವರ್ತಿಗಳಿಗೆ ಕೊಡಬೇಕಾಗುತ್ತದೆ. ಕೆಲವು ಕರ್ಮಿಕರು ಅಗ್ಗವಾಗಿ ಸಿಗುವ ಬಣ್ಣಗಳನ್ನು ಉಪಯೋಗಿ ಗೊಂಬೆಗಳ ಗುಣಮಟ್ಟವನ್ನು ಹಾಳುಮಾಡಿದ್ದಾರೆ. ಇದರಿಂದ ಹೊರ ರಾಜ್ಯ ಹಾಗೂ ಹೊರ ರಾಷ್ಟ್ರ ರಫ್ತು ಉದ್ಯಮ ಕಡಿಮೆಯಾಗಿದೆ. ಇಲ್ಲಿ ಎಲ್ಲಾ ಕುಶಲಕರ್ಮಿಗಳು ಒಂದೇ ರೀತಿಯ ವಸ್ತುಗಳ ತಯಾರಿಸುವುದರಿಂದ ವ್ಯಾಪಾರ ಕಡಿಮೆ, ನಮ್ಮ ಕುಟುಂಬಗಳ ನಿರ್ವಹಣೆ ನಡೆಯಬೇಕಾದರೆ ಕೆಲಸವನ್ನು ರಜೆಯಿಲ್ಲದೆ ನಾವು ದುಡಿಯಬೇಕು. ಮರದ ಧೂಳಿನಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ತಂದೆ ತೀರಿದ ಮೇಲೆ ತಂಗಿಯ ಮದುವೆಯ ಜವಾಬ್ದಾರಿಗಳನ್ನು ನಾನೇ ನಿಭಾಯಿಸಿದ್ದೇನೆ. ಒಟ್ಟು ಎಂಟು ಜನ

ಮಕ್ಕಳಿದ್ದಾರೆ. ಬಿ.ಎಸ್.ಸಿ., ಬಿ.ಕಾಂ, ಮುಗಿಸಿ ಪದವೀಧರರಾಗಿದ್ದಾರೆ. ಇನ್ನೂಳಿದವರು ಸಹ ಓದುತ್ತಿದ್ದಾರೆ. ಮಕ್ಕಳಿಗೆ ಸುಶಿಕ್ಷಿತವಾಗಿಸುವಲ್ಲಿ ಅಹಮ್ಮದ್ ಆಸಕ್ತಿ ವಹಿಸಿದ್ದಾರೆ.

ಅಹಮ್ಮದ್ ಹಸನಮಿಯಾ:

ಖಾಸಿಂಮಿಯಾ ಹಾಗೂ ಹಸೀನಬಾನು ದಂಪತಿ ಮಗನಾದ ಹಸನಮಿಯಾ ಹುಟ್ಟಿದ್ದು ಚನ್ನಪಟ್ಟಣದಲ್ಲಿ ಶಿಕ್ಷಣ ೫ನೇ ತರಗತಿಯವರೆಗೆ ಓದಿದ್ದಾರೆ. ನಾವು ಚಿಕ್ಕವರಿರುವಾಗ ಚನ್ನಪಟ್ಟಣ ಸುತ್ತ–ಮುತ್ತ ಗೊಂಬೆಯ ತಯಾರಿಕೆ ಕೆಲಸವನ್ನು ನಮ್ಮ ಮುಸ್ಲಿಂ ಜನಾಂಗದವರು ಹೆಚ್ಚಾಗಿ ಮಾಡುತ್ತಿದ್ದರು. ನಾನು ಚಿಕ್ಕವನಿರುವಾಗಲೇ ನೋಡುತ್ತಾ ಗೊಂಬೆ ಕೆಲಸವನ್ನು ಕಲಿತುಕೊಂಡೆ ನಮ್ಮ ಮನೆಯಲ್ಲಿ ನನ್ನ ತಾಯಿಯವರು ಪಟ್ಟಿ ಪದ್ಧತಿಯಿಂದ ಸಣ್ಣ–ಸಣ್ಣ ಮಣಿಗಳನ್ನು ಮಾಡುತ್ತಿದ್ದರು. ಭರತ್ ಹ್ಯಾಂಡಿ ಕ್ರಾಫ್ಟ್‌ನಲ್ಲಿ ಸುಮಾರು ೮ ವರ್ಷ ಕಾಲ ಬಿಡಿಭಾಗಗಳನ್ನು ನಿರ್ಮಿಸುವ ಕೆಲಸ ಮಾಡಿದೆ. ತದನಂತರ ಸ್ವಂತ ವಿದ್ಯುತ್ ಚಾಲಿತಯಂತ್ರವನ್ನು ಅಳವಡಿಸಿಕೊಂಡು ೬ ಜನ ನನ್ನ ಹತ್ತಿರ ಕೆಲಸ ನಿರ್ವಹಿಸುತ್ತಿದ್ದಾರೆ. ಬೇಡಿಕೆಯೆನೋ ಜಾಸ್ತಿ ಇದೆ. ಆದರೆ ಸರಿಯಾದ ಸಮಯದಲ್ಲಿ ಅಲೆ ಮರ ಸಿಗುವುದಿಲ್ಲ. ಸಿಕ್ಕರು ಅರಣ್ಯ ಇಲಾಖೆಯವರು ತೊಂದರೆಯಿಂದ ನಮಗೆ ಬೇಕಾಗುವಷ್ಟು ಆಲೆ ಮರ ಸಿಗುವುದಿಲ್ಲ. ಕೆಲವೊಂದು ಸಮಯದಲ್ಲಿ ಕಾರ್ಮಿಕರರೆಲ್ಲ ಸೇರಿ ಅವರಿಗೆ ದುಡ್ಡುಕೊಟ್ಟು ಕೆಲಸಕ್ಕೆ ಮರವನ್ನು ಹೊಂದಿಸಿಕೊಳ್ಳುತ್ತೇವೆ. ಚನ್ನಪಟ್ಟಣದ ಕುಶಲಕರ್ಮಿ ಮಕ್ಕಳಿಗೆ ಶಿಕ್ಷಣ ಸಹಾಯ ಮಾಡಬೇಕು. ಇನ್ನೂ ಸಾಕಷ್ಟು ಕುಶಲಕರ್ಮಿಗಳಿಗೆ ವಾಸಿಸಲು ಮನೆಗಳಿಲ್ಲ. ಗೊಂಬೆ ತಯಾರಿಕೆಗೆ ಆಲೆ ಮರವನ್ನು ನೇರವಾಗಿ ಕಲಾವಿದರಿಗೆ ದೊರೆಯುವಂತೆ ಸರಕಾರ ಮಾಡಿಕೊಡಬೇಕು ಎನ್ನುತ್ತಾರೆ.

ನಕ್ಷಾಚಿತ್ರ ಕಲಾವಿದ ಜುಮಲ್ ಬೈಗ್:

ತಂದೆ ಖಾಸಿಂ ತಾಯಿ ನಾಸೀಮಾ ಈ ದಂಪತಿಗೆ ಒಟ್ಟು ಐದು ಜನ ಮಕ್ಕಳು. ಈ ಕುಟುಂಬದಲ್ಲಿ ಇಬ್ಬರು ಗಂಡು ಮಕ್ಕಳು, ಜುಮಲ್ ಬೈಗ್‌ರ ಅಣ್ಣ ಗೊಂಬೆ ತಯಾರಿಕೆ ಕೆಲಸವನ್ನು ಬೇರೆಯವರ ಫ್ಯಾಕ್ಟರಿಯಲ್ಲಿ ದಿನಕೂಲಿಯಂತೆ ಮಾಡುತ್ತಾರೆ. ನಾನು ಸುಮಾರು ಇಪ್ಪತ್ತು ವರ್ಷಗಳಿಂದ ಬಳೆಗಳಿಗೆ ವಿವಿಧ ಬಗೆಯ ನಕ್ಷಾಚಿತ್ರಗಳನ್ನು ಬಿಡಿಸುವ ಕೆಲಸವನ್ನು ಮಾಡುತ್ತಿದ್ದೇನೆ. ಒಂದು ಬಳೆಗೆ ಒಂದು ರೂಪಾಯಿಯನ್ನು ನೀಡುತ್ತಾರೆ. ಒಂದು ದಿನಕ್ಕೆ ೧೦೦ ರಿಂದ ೨೦೦ ಬಳೆಗಳನ್ನು ಪೂರ್ಣಗೊಳಿಸುತ್ತೇನೆ. ಚನ್ನಪಟ್ಟಣದ ಅರ್ಧದಷ್ಟು ಕಲಾವಿದರು

ಗೊಂಬೆ ತಯಾರಿಕೆಯ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಕೆಲವು ಯುವಕರು ಮಾತ್ರ ಬೆಂಗಳೂರು ಮೈಸೂರು ಕಡೆ ಕಂಪನಿಗಳತ್ತ ಮುಖ ಮಾಡುತ್ತಿದ್ದಾರೆ. ಮೊದಲಿನಿಂದಲೂ ಇದೇ ಕೆಲಸದಲ್ಲಿ ತೊಡಗಿಸಿಕೊಂಡು ಬಂದ ಹಿರಿಯ ಕುಶಲಕರ್ಮಿಗಳು ಮಾತ್ರ ಬೊಂಬೆ ತಯಾರಿಕೆ ಕೆಲಸವನ್ನು ನಿರ್ಮಿಸುವುದರಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಾರೆ. ಈ ಹಿರಿಯ ಕಲಾವಿದರ ನಂತರ ಚನ್ನಪಟ್ಟಣದಲ್ಲಿ ಗೊಂಬೆ ತಯಾರಿಸುವವರು ಸಿಗುವುದಿಲ್ಲ. ಅದ್ದರಿಂದ ಸರಕಾರ ಧನ ಸಹಾಯ ನೀಡಬೇಕು. ಯುವಕರಿಗೂ ಉತ್ತೇಜನ ನೀಡಿ ಗೊಂಬೆ ತಯಾರಿಕೆ ಕೆಲಸವನ್ನು ಉಳಿಸಿ ಬೆಳೆಸಬೇಕು ಎನ್ನುತ್ತಾರೆ ನಕ್ಷಾ ಚಿತ್ರಕಾರ ಜಮಲ್ ಬೈಗ್ ನವರು.

ಪುಟ್ಟಯ್ಯ:

ತಂದೆ ತೊಡಯ್ಯ ತಾಯಿ ತೆನ್ನಮ್ಮ ಈ ದಂಪತಿಗಳಿಗೆ ಐದು ಜನ ಮಕ್ಕಳು ಪುಟ್ಟಯ್ಯನವರು ಬಾಲ್ಯದಿಂದಲೇ ಗೊಂಬೆ ತಯಾರಿಕೆ ಕೆಲಸವನ್ನು ಆಸಕ್ತಿಯಿಂದ ಕಲಿತು ೩೫ ವರ್ಷಗಳಿಂದ ಗೊಂಬೆ ತಯಾರಿಕೆ ಕಾರ್ಯವನ್ನು ಮಾಡುತ್ತಿದ್ದಾರೆ. ಈಗಾಗಲೇ ೨೦೦-೩೦೦ರವರೆಗೆ ವಿವಿಧ ಬಗೆ-ಬಗೆಯ ಗೊಂಬೆಗಳನ್ನು ತಯಾರಿಸಿದ್ದಾರೆ. ಬೇರೆಯವರು ವಿದ್ಯುತ್ ಯಂತ್ರವನ್ನು ಬಾಡಿಗೆ ಪಡೆದು ಅಲ್ಲಿ ತಮಗೆ ಸಿಕ್ಕಂತಹ ಕೆಲಸವನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ. ಬ್ಯಾಂಕಿನಿಂದ ಯಾವ ರೀತಿಯ ಸಾಲವು ಸಿಕ್ಕಿಲ್ಲ, ಸ್ವಂತ ಮನೆಯುಯಿಲ್ಲ ದಿನವಿಡಿ ಕೆಲಸ ಮಾಡಿದ್ದಾರೆ. ಮಾತ್ರ ನಾವು ದುಡ್ಡು ನೋಡುತ್ತೇವೆ. ರಜೆ ಮಾಡಿದ್ದಾರೆ. ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ. ಚನ್ನಪಟ್ಟನದಲ್ಲಿ ಎಲ್ಲಾ ಕಾರ್ಮಿಕರಿಗೂ ವಿದ್ಯುತ್ ಯಂತ್ರಗಳಿಲ್ಲ. ಸ್ವಲ್ಪ ಅನುಕೂಲಸ್ಥದವರಿಗೆ ಮಾತ್ರವಿದೆ. ೮ ರಿಂದ ೨೦ ಕಲಾವಿದರು ಕುಳಿತುಕೊಂಡು ಕೆಲಸ ಮಾಡುವಂತಹ ವಿದ್ಯುತ್ ಯಂತ್ರಗಳನ್ನು ಅಳವಡಿಸಿಕೊಂಡಿದ್ದಾರೆ. ಅಂತಹ ಕಡೆಗಳಲ್ಲಿ ಜಾಸ್ತಿ ಜನ ಕೆಲಸ ಮಾಡುತ್ತಾರೆ. ಗೊಂಬೆ ತಯಾರಿಕೆ ಕೆಲಸ ಬಿಟ್ಟ ಬೇರೆ ಕೆಲಸ ಗೊತ್ತಿಲ್ಲ. ಲಾಭವಾದರೂ ಇದೇ ಕೆಲಸ, ನಷ್ಟವಾದರೂ ಇದೇ ಕೆಲಸ ಮಾಡುತ್ತಿದ್ದಾರೆ. ಇನ್ನೂ ಕೆಲವರು ಮಾರಾಟದ ಅಂಗಡಿ ಹಾಗೂ ಗೊಂಬೆ ಫ್ಯಾಕ್ಟರಿಗಳ ನಿಭಾಯಿಸಿಕೊಂಡು ಉತ್ತಮ ಸ್ಥಿತಿವಂತರಾಗಿದ್ದಾರೆ. ಬೆಂಗಳೂರು, ಮೈಸೂರುಗೆ ಗೊಂಬೆಗಳ ಮಾರಾಟಕ್ಕೆ ಹೋಗಿದ್ದೇನೆ ಎನ್ನುತ್ತಾರೆ.

ರಾಜು.ಆರ್.

೧೦ ನೇ ವಯಸ್ಸಿನಲ್ಲಿ ಗೊಂಬೆ ತಯಾರಿಕೆ ಕೆಲಸಕ್ಕೆ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತಂದೆ ರಾಕಯ್ಯ ತಾಯಿ ಲಕ್ಷ್ಮಮ್ಮ ತಂದೆಯವರು ಇದೇ ಕೆಲಸ ಮಾಡುತ್ತಿದ್ದರು. ಬಹಳ ವರ್ಷಗಳ ಹಿಂದೆ ನಿಧನ ಹೊಂದಿದ್ದಾರೆ. ತಾಯಿಗೆ ಹೃದಯದ ತೊಂದರೆಯಿದೆ. ಇದುವರೆಗೆ ಸ್ವಂತ ಕಾರ್ಖಾನೆಯನ್ನು ಪ್ರಾರಂಭ ಮಾಡಲಿಕ್ಕೆ ಆಗಿಲ್ಲ. ೨೫ ವರ್ಷದಿಂದ ಬೇರೆ-ಬೇರೆ ಕಡೆಯಲ್ಲಿ ಗೊಂಬೆ ತಯಾರಿಕೆ ಕೆಲಸವನ್ನು ಮಾಡುತ್ತಿದ್ದೇವೆ. ನನಗೆ ಮೂರು ಹೆಣ್ಣು ಮಕ್ಕಳು ಎಲ್ಲರನ್ನು ಶಾಲೆಗೆ ಕಳುಹಿಸುತ್ತಿದ್ದೇನೆ. ನಮ್ಮಂತ ಕುಶಲಕರ್ಮಿ ಮಕ್ಕಳಿಗೆ ಓದಲು ಸರಕಾರದ ವತಿಯಿಂದ ಸಹಾಯ ಮಾಡಬೇಕು. ನಮ್ಮ ತಂದೆಯವರ ಕಾಲದಲ್ಲಿ ಸರಕಾರದಿಂದ ವಸತಿಗಳನ್ನು ನೀಡಿದ್ದರು. ಆದರೆ ಈ ಸೌಲಭ್ಯ ಮತ್ತೆ ಯಾರಿಗೂ ದೊರಕಿಲ್ಲ. ಸರಕಾರದಿಂದ ಸಾಕಷ್ಟು ಯೋಜನೆಗಳು ಇವೆ. ಅವನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಲಂಚ ಕೊಡಬೇಕು, ನಮ್ಮ ಕುಟುಂಬದಲ್ಲಿ ನಾನೊಬ್ಬನೆ ದುಡಿದು ಕುಟುಂಬ ನಿರ್ವಹಣೆಯನ್ನು ನಡೆಸಬೇಕು, ಸರಕಾರದ ಸವಲತ್ತುಗಳನ್ನು ದೊರಕಿಸಿಕೊಳ್ಳಬೇಕಾದರೆ ೧ ತಿಂಗಳಿನಿಂದ ೬ ತಿಂಗಳು ನಮ್ಮನ್ನು ಓಡಾಡಿಸುತ್ತಾರೆ. ನಾವು ಮಾಡುವ ಕೆಲಸ ಬೆಳಿಗ್ಗೆಯಿಂದಲೇ ಪ್ರಾರಂಭ ಮಾಡಬೇಕು ಮಧ್ಯಾಹ್ನ ಬಂದರೆ ಕೆಲಸ ಕೊಡುವುದಿಲ್ಲ. ಹಾಗಾಗೀ ಇದುವರೆಗೆ ನಾವು ಯಾವ ಸವಲತ್ತುಗಳನ್ನು ತೆಗೆದಕೊಂಡಿಲ್ಲ. ಸ್ಥಳಿಯವಾಗಿ ಎಷ್ಟು ವಿಷಯಗಳನ್ನು ಬೇರೆ ಕಾರ್ಮಿಕರೂ ಮತ್ತೊಬ್ಬರಿಗೆ ತಿಳಿಸುವುದಿಲ್ಲ. ನನ್ನ ಆರೋಗ್ಯದಲ್ಲಿ ಏರುಪೇರುಗಳಾಗಿ, ಬೆನ್ನು ನೋವು, ಕಾಣಿಸಿಕೊಳ್ಳುತ್ತಿದೆ. ಜಾಸ್ತಿ, ಹೊತ್ತು ಕುಳಿತುಕೊಂಡು ಕೆಲಸ ಮಾಡುವದಕ್ಕೆ ಆಗೋಲ್ಲಾ ಮಾಡದಿದ್ದರೆ ಕುಟುಂಬ ನಿರ್ವಹಣೆ ಕಷ್ಟ ಆಗುತ್ತದೆ. ನಮ್ಮಂತಹ ಕಾರ್ಮಿಕರಿಗೆ ಆರೋಗ್ಯ ಸೌಲಭ್ಯವನ್ನು ಕಲ್ಪಿಸಿಕೊಡಬೇಕು. ನನಗೆ ವಯಸ್ಸಾದಾಗ ಯಾರು ನೋಡಿಕೊಳ್ಳುತ್ತಾರೆ. ಕಾರ್ಮಿಕರಿಗೆ ಪಿಂಚಣಿ ಸೌಕರ್ಯ ಮಾಡಿಕೊಡಬೇಕು ಎನ್ನುತ್ತಾರೆ. ಕಲಾವಿದ ರಾಜುರವರು ಮೈಸೂರು, ಬೆಂಗಳೂರು ಗೊಂಬೆಗಳನ್ನು ಮಾರಾಟ ಮಾಡಿದ್ದೇವೆ. ಜಾಸ್ತಿ ಷೋಕೆಸಿನ ಸಾಮಾನುಗಳನ್ನು ತಯಾರಿಸುತ್ತೇನೆ ಎನ್ನುತ್ತಾರೆ ರಾಜುರವರು.

ಚೌಡಯ್ಯ:

ಇವರು ಒಟ್ಟು ಮೂರು ಜನ ಅಣ್ಣ-ತಮ್ಮಂದಿರು ಮನೆಯ ಎಲ್ಲಾ ಸದಸ್ಯರು ಗೊಂಬೆಗಳ ತಯಾರಿಕೆಯ ಕೆಲಸವನ್ನು ಮಾಡುತ್ತಾರೆ. ಕಲಾವಿದ ಚೌಡಯ್ಯ ಚಂದ್ರು ಹಾಗೂ ನಾಗರಾಜು ಸ್ವಂತ ವಿದ್ಯುತ್‌ಚಾಲಿತ ಕಾರ್ಖಾನೆಯನ್ನು ಹೊಂದಿದ್ದಾರೆ. ಪ್ರೌಢಶಾಲೆಯವರಿಗೆ ಶಿಕ್ಷಣವನ್ನು ಮುಗಿಸಿರುವ ಇವರು ಒಟ್ಟಿಗೆ ಗೊಂಬೆ ತಯಾರಿಕೆ ಕೆಲಸವನ್ನು ಮಾಡುತ್ತಾರೆ. ಬುಗರಿ, ಬಳೆ, ಕೀಟ್‌ಕೀಟೆ, ಕೀಬಂಚ್, ಹೀಗೆ ಬೇಡಿಕೆ ಬಂದಂತಹ ಸಾಮಾನುಗಳನ್ನು ಮಾಡಿಕೊಡುತ್ತೇವೆ. ತಂದೆಯವರು ಪಟ್ರಿ ಕೆಲಸವನ್ನು ಮಾಡುತ್ತಿದ್ದರು. ಸುಮಾರು ವರ್ಷಗಳಿಂದ ಇದೇ ಕೆಲಸವನ್ನು ನೆಚ್ಚಿಕೊಂಡು ಇಡೀ ಕುಟುಂಬ ಬದುಕುತ್ತಿದೆ. ಕೆಲವು ಕಾರ್ಮಿಕರಿಗೆ ಸರಕಾರದ ಕಡೆಯಿಂದ ವಾಸಿಸಲು ಮನೆಗಳನ್ನು ದೊರೆತಿವೆ. ಆದರೆ ನಮಗೆ ಯಾವುದೇ ರೀತಿಯ ಸಹಾಯ ಅನುಗ್ರಹವಾಗಿಲ್ಲ. ಸ್ಥಳೀಯವಾಗಿ ಸಾಮಾನುಗಳನ್ನು ಮಾರಾಟ ಮಾಡಿದರೆ ಅರ್ಧದಷ್ಟು ಲಾಭ ಮಧ್ಯವರ್ತಿಗಳ ಪಾಲಾಗುತ್ತದೆ. ಕಾವೇರಿ ಎಪೋರಿಯಂ ಹೋಗಿ ಮಾರಾಟ ಮಾಡಿದ್ದಾರೆ. ತೆರಿಗೆ ಅದು ಇದು ಎನ್ನುತ್ತಾ ಸ್ಥಳೀಯವಾಗಿ ಮಾರಾಟ ಮಾಡಿದಷ್ಟೇ ಲಾಭ ಬರುತ್ತದೆ. ಒಂದು ದಿನದ ಕೆಲಸವನ್ನು ಬಿಟ್ಟು ಬೆಂಗಳೂರಿಗೆ ಹೋದರೆ, ದಿನಕ್ಕೆ ರೂ.೩೦೦ ಖರ್ಚು ಸೇರಿಸಿದರೆ ಮತ್ತೆ ಅಷ್ಟೇ ಲಾಭ ಬರುತ್ತದೆ. ಆದ್ದರಿಂದ ಚನ್ನಪಟ್ಟಣದಲ್ಲಿಯೇ ಅಂಗಡಿಗಳಿಗೆ ನಮ್ಮ ಸಾಮಾನುಗಳ ಮಾರಾಟ ಮಾಡುತ್ತೇವೆ ಎನ್ನುತ್ತಾರೆ ಕಲಾವಿದರ ಚೌಡಯ್ಯ, ಚಂದ್ರು ಹಾಗೂ ನಾಗರಾಜು.

ಗೊಂಬೆ ತಯಾರಿಕೆ ಕಲೆ ಇಲ್ಲಿ ಯಾವುದೇ ಜಾತಿಗಾಗಲೀ ಮತಕ್ಕಾಗಲೀ, ಸೀಮಿತವಾಗಿಲ್ಲ. ಜೀವನೋಪಾಯಕ್ಕಾಗಿ ಮತ್ತು ಅಪಾರ ಬಂಡವಾಳ ತೊಡಗಿಸಿ ಲಾಭ ಸಂಪಾದನೆ ಮಾಡುವ ಸಲುವಾಗಿ ಜಾತಿ, ಮತ ಬೇಧವಿಲ್ಲದೆ ಹಲವಾರು ಈ ಕಲೆಗಾರಿಕೆಯಲ್ಲಿ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಚನ್ನಪಟ್ಟಣ ಟೌನ್‌ನಲ್ಲಿರುವ ಗೊಂಬೆ ಕಾರ್ಮಿಕರಲ್ಲಿ ಶೇ. ೬೦ರಷ್ಟು ಮುಸ್ಲಿಂರಿದ್ದಾರೆ. ಇನ್ನುಳಿದವರು ಹಿಂದುಗಳು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಹಿಂದೂ ಕಾರ್ಮಿಕರ ಸಂಖ್ಯೆ ಹೆಚ್ಚು. ಈ ಗೊಂಬೆ ಮಾರಾಟದ ಹಂತವನ್ನು ಜಾಸ್ತಿಯಾಗಿ ಅಂಗಡಿಗಳನ್ನು ಹೊಂದಿರುವ ಸಂಖ್ಯೆ ಮುಸ್ಲಿಂರದ್ದು. ನೀಲಸಂದ್ರದಲ್ಲಿ ಈಗಲೂ ಸಹ ಹಳೆದಾದ ಪಟ್ರಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಈಗಲೂ ಒಂದು ವಿದ್ಯುತ್ ಯಂತ್ರ ಕಾರ್ಖಾನೆಗಳ ಸದ್ದು ಕೇಳಿ ಬರುವುದಿಲ್ಲ.

ಮಾಯಾ ಆರ್ಗ್ಯಾನಿಕ್ ಟ್ರಸ್ಟ್‌ನಲ್ಲಿ ಕೆಲಸ ಮಾಡುತ್ತಿರುವ ಕುಶಲಕರ್ಮಿಗಳು







ಶಿಲ್ಪಾ ಟ್ರಸ್ಟ









ಕಲಾವಿದೆ ಸಿದ್ದಮ್ಮ



ಕಲಾವಿದೆ ದೊಡ್ಡಮ್ಮ

ಧರ್ಮಪತ್ನಿ ಜೊತೆ ಕೆಂಚಪ್ಪನವರು ಮತ್ತು ಗೌರವ ಪ್ರಶಸ್ತಿಗಳು





KARNATAKA STATE HANDICRAFTS DEVELOPMENT CORPORATION LTD., BANGALORE

STATE AWARD CERTIFICATE



Kala Shri

To K. KENCHAIAH

of KARNATKA

for his / her outstanding contribution towards

LACQUERWARE TOYS





ಕುಟುಂಬದ ಜೊತೆ ಕಲಾವಿದ ಪರಮಶಿವಯ್ಯ ಮತ್ತು ಕಲಾಕೃತಿಗಳು









ಸಿದ್ಧರಾಮಯ್ಯ ಮತ್ತು ಅವರ ಕಲಾಕೃತಿಗಳು







ಕಲಾವಿದ ಕುಲಾವ್‌ರವರ ಮಕ್ಕಳು ಹಾಗೂ ಅವರ ಕಲಾಕೃತಿಗಳು









ಕಲಾವಿದ ದಶರಥರವರ ಕಲಾಕೃತಿಗಳು







ಕಲಾವಿದ ಹಸನಮಿಯಾ ಅವರ ಕಲಾಕೃತಿಗಳು









ನಕ್ಷಾ ವಿನ್ಯಾಸ ಕಲಾವಿದ ಚಂದ್ರು



ಬಳೆ ವಿನ್ಯಾಸಕಾರ ಕಲಾವಿದ ಜಮಾಲ್ ಬೈಗ್



ಕಲಾವಿದ ಪುಟ್ಟಯ್ಯ ಅವರ ಕಲಾಕೃತಿಗಳು







ಕಲಾವಿದ ರಾಜು.ಆರ್. ಅವರ ಕಲಾಕೃತಿಗಳು










ಕಲಾವಿದ ಚೌಡಯ್ಯ ಅವರ ಕಲಾಕೃತಿಗಳು









ಅಧ್ಯಾಯ–೬

ಚನ್ನಪಟ್ಟಣ ಚಿತ್ತಾರ ಗೊಂಬೆಗಳ ಮಾರಾಟ ವ್ಯವಸ್ಥೆ

ಅಧ್ಯಾಯ-೬

ಚನ್ನಪಟ್ಟಣ ಚಿತ್ತಾರ ಗೊಂಬೆಗಳ ಮಾರಾಟ ವ್ಯವಸ್ಥೆ

ರಭಸವಾಗಿ ತಿರುಗುವ ಪುಟ್ಟ ಚಕ್ರ ಅಥವಾ ತಿರುಪಿನ ಸಿದ್ಧವಾಗುವ ಆಕೃತಿಯನ್ನು ಒಡ್ಡಿ ಅದನ್ನು ಅರೆಯುವ, ಕೊರೆಯುವ, ಸೀಳುವ, ಹಳ್ಳವಾಗಿಸುವ, ಉಬ್ಬಾಗಿಸುವ ಕೆಲಸವನ್ನು ನುರಿತ ಕುಶಲಕರ್ಮಿ ತನ್ನ ಕೈಗಳನ್ನು ನವಿರಾಗಿ ಆಡಿಸುವ ಮೂಲಕವಾಗಿಯೇ ಮಾಡುತ್ತಾ ಹೋಗುತ್ತಾನೆ. ಕೆಲವೊಮ್ಮೆ ಹೀಗೆ ರಭಸವಾಗಿ ತಿರುಗುವ ಪ್ರಕಿಯೆಯಲ್ಲಿ ಅಗತ್ಯ ಬಣ್ಣಗಳನ್ನು ತುಂಬುವ ಕೆಲಸ ನಡೆಯಬಹುದು ಅಥವಾ ಅದನ್ನು ಯಂತ್ರದಿಂದ ಬೇರ್ಪಡಿಸಿ ಪ್ರತ್ಯೇಕವಾಗಿಯೇ ಬಣ್ಣವನ್ನು ಬಳಸಿ ಕೆಲಸ ಮಾಡಿ ಚೆಂದದ ಚನ್ನಪಟ್ಟಣದ ಗೊಂಬೆಗಳು ತಯಾರಾಗುತ್ತವೆ. ಇಲ್ಲಿ ನಡೆಯುವ ಒಟ್ಟಾರೆ ಕೆಲಸಗಳು ಟರ್ನಿಂಗ್ (ಆಕೃತಿ ನಿರ್ಮಾಣ), ಪೇಂಟಿಂಗ್ (ಬಣ್ಣ ತುಂಬುವುದು), ಪಾಲಿಷಿಂಗ್ (ಪಾಲೀಷ್ ಮಾಡುವುದು), ಪ್ಯಾಕಿಂಗ್ (ರವಾನೆಗೆ ಸಿದ್ಧಪಡಿಸುವುದು) ಒಟ್ಟಾರೆಯಾಗಿ ನಾಲ್ಕು ಭಾಗಗಳಾಗಿ ತಯಾರಿಕೆ ಕಾರ್ಯ ಇಲ್ಲಿ ನಡೆಯುವುದು ನೋಡಬಹುದಾಗಿದೆ. ೬.೬ ಮೀ. ವ್ಯಾಸದ ಸಣ್ಣ-ಸಣ್ಣ ಮಣಿಗಳಿಂದ ಹಿಡಿದು ವಿವಿಧ ಗಾತ್ರದ ನಿಲುವಿನ ಗೊಂಬೆಗಳು ತಯಾರಾಗುತ್ತವೆ.

ಚನ್ನಪಟ್ಟಣ ಚಿತ್ತಾರ ಗೊಂಬೆಗಳು ಜಾನಪದ ಮಾದರಿಯಲ್ಲಿನ ವಿವಿಧ ಬಗೆಯ ಬೊಂಬೆಗಳನ್ನು ತಯಾರಿಸುವ ಇಲ್ಲಿನ ಕುಶಲ ಕರ್ಮಿಗಳು ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಮೈಗೂಡಿಸಿಕೊಂಡಿದ್ದಾರೆ. ಚನ್ನಪಟ್ಟಣದ ಪ್ರದೇಶ ಒಂದೇ ಅಲ್ಲದೇ ಈ ತಾಲೂಕಿನ ಸುತ್ತ-ಮುತ್ತ

ಅನೇಕ ಪ್ರದೇಶಗಳಲ್ಲಿ ಈ ವೃತ್ತಿಯನ್ನು ಅವಲಂಬಿಸಿ ಬದುಕಿದ ಕುಟುಂಬಗಳು ಒಂದು ಅಂದಾಜಿನ ಪ್ರಕಾರ ೩೦೦೦ ರಿಂ ೪೦೦೦ ಕುಶಲ ಕರ್ಮಿಗಳಿದ್ದಾರೆ. ೪೦೦ ರಿಂದ ೫೦೦ ಮಂದಿ ಪರಿಣಿತರೂ ಇದ್ದಾರೆ. ಉದ್ಯಮವನ್ನು ನೇರ ಮತ್ತು ಪರೋಕ್ಷವಾಗಿ ೧೦ ಸಾವಿರಕ್ಕೂ ಅಧಿಕ ಮಂದಿ ಅವಲಂಬಿಸಿದ್ದಾರೆ. ಹಿಂದಿನ ದಿನಗಳಲ್ಲಿ ೧೦ ರೂಪಾಯಿಗಳಿಗೆ ೧ ಕೆ.ಜಿ. ಬಣ್ಣ ಹಾಗೂ ಜಿಂಕ್ ಪೌಡರ್ ದೊರೆಯುತ್ತಿತ್ತು. ಮತ್ತು ೨೫ ರಿಂದ ೨೬ ರೂ. ಒಂದು ಮಣ ಹಾಲೆ ಮರ ದೊರಕುತ್ತಿತ್ತು. ಆದರೆ ಈಗ ಇದರ ಬೆಲೆ ೪೦೦ ರೂ.ಗಳಿಂದ ೩೦೦ ರೂ.ಗಳವರೆಗೆ ಹೆಚ್ಚಾಗಿದೆ. ಈ ವೃತ್ತಿಯನ್ನು ಮಧ್ಯಮದ ಜನರೆ ಹೆಚ್ಚಾಗಿ ಅವಲಂಬಿಸಿರುವುದರಿಂದ ಕಲಾವಿದರ ಆರ್ಥಿಕ ಪರಿಸ್ಥಿತಿಯು ಅಷ್ಟರ ಮಟ್ಟಿಗೆ ಸುಧಾರಿಸಿಲ್ಲ. ಮನೆಯಲ್ಲಿ ಎಲ್ಲಾ ಸದಸ್ಯರು ಸೇರಿ ಇಡೀ ಗೊಂಬೆಯ ತಯಾರಿಕೆಯ ಕೆಲಸ ಮಾಡಿದರೂ ಸ್ವಲ್ಪ ಮಟ್ಟಿಗೆ ಲಾಭ ಗಳಿಸಲು ಸಾಧ್ಯವಾಗುತ್ತದೆ. ಈ ವೃತ್ತಿಯನ್ನು ನಡೆಸುವ ಕುಶಲ ಕರ್ಮಿಗಳ ಮಕ್ಕಳು ಜಾಸ್ತಿಯೆಂದರೆ ಎಸ್.ಎಸ್.ಎಲ್.ಸಿ ಮಾತ್ರ ಓದಿದ್ದಾರೆ. ಕುಟುಂಬದಲ್ಲಿ ತಂದೆಯೊಬ್ಬನೆ ದುಡಿದರೆ ತಮ್ಮ ಜೀವನದಲ್ಲಿ ಬರುವ ಹಣವು ಸಾಕಾಗುವುದಿಲ್ಲ. ಆದ್ದರಿಂದ ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಈ ವೃತ್ತಿ ಜೀವನದ ಕಡೆ ತಮ್ಮನ್ನು ಹಾಗೂ ಕುಟುಂಬದ ಎಲ್ಲಾ ಸದಸ್ಯರನ್ನು ಗೊಂಬೆ ತಯಾರಿಕೆ ಕೆಲಸಕ್ಕೆ ತೊಡಗಿಸಿಕೊಳ್ಳುತ್ತಿದ್ದಾರೆ.

ಚನ್ನಪಟ್ಟಣದಲ್ಲಿ ದಿನಕ್ಕೆ ೧೫೦ ರೂ. ಮಾತ್ರ ಸಂಪಾದಿಸುವ ನೂರಾರು ಕುಶಲ ಕರ್ಮಿಗಳು ನಡುವೆ ೮೦೦ ಕ್ಕಿಂತ ಜಾಸ್ತಿ ದುಡಿಯಬಲ್ಲರು, ಕೆಲವೇ ಮಂದಿ ಕೆಲವರಷ್ಟೆ ಪರಿಣಿತ ಕುಶಲಕರ್ಮಿಗಳು ಕಲಾ ಸೇವೆ ಜತೆಗೆ ಉತ್ತಮ ಜೀವನ ನಡೆಸುವಷ್ಟು ಹಣ ದುಡಿದುಕೊಳ್ಳಲು ಸಮರ್ಥರಾಗಿದ್ದಾರೆ. ಆದರೆ ಬದಲಾದ ಕಾಲಮಾನ ದಿನೇ ದಿನೇ ಹೆಚ್ಚುತ್ತಿರುವ ಕಚ್ಚಾ ಪದಾರ್ಥಗಳ ಬೆಲೆ, ಕಡ್ಡಾಯ ಶಿಕ್ಷಣ ನೀತಿ ಇವೇ ಮೊದಲಾದ ಕಾರಣಗಳಿಂದ ಕಲಾನಗರದಲ್ಲಿ ಕುಶಲ ಕರ್ಮಿಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ದಶಕದ ಹಿಂದೆ ೮ ಸಾವಿರ ಇದ್ದ ಕುಶಲಕರ್ಮಿಗಳ ಸಂಖ್ಯೆ ಬಹಳ ಕಡಿಮೆಯಾಗುತ್ತಿದೆ. ಸಾಕಷ್ಟು ಯುವ ಕಲಾವಿದರು ಬೆಂಗಳೂರು ಕಡೆಗೆ ಕೆಲಸಕ್ಕೆ ಹೋಗುತ್ತಿದ್ದಾರೆ. ಇನ್ನೂ ಕೆಲವರು ಬೇರೆ–ಬೇರೆ ಕೆಲಸಗಳಿಗೆ ಹೋಗುತ್ತಿದ್ದಾರೆ.

ಗೊಂಬೆಯ ತಯಾರಿಕೆ ಪ್ರಪ್ರಥಮವಾಗಿ ಕರಕುಶಲಕರ್ಮಿ ನಂತರ ಮಧ್ಯವರ್ತಿ (ಬ್ರೋಕರ್) ಕೊನೆಯದಾಗಿ ಅಂಗಡಿ ಮಾಲೀಕ ಅಥವಾ ಎಮ್ಪೊರಿಯಂಗಳು. ಇಲ್ಲಿ ಪ್ರಪ್ರಥಮವಾಗಿ ತಯಾರಿಸುವ ಕಲಾವಿದನಿಗೆ ಗೊಂಬೆ ತಯಾರಿಕೆಗೆ ಬೇಕಾಗುವಂತಹ ಮರ, ಈ ಮರವನ್ನು ಯಂತ್ರಕ್ಕೆ ಕೊಟ್ಟು ಇದನ್ನು ಗೊಂಬೆ ತಯಾರಿಕೆಯ ಕೆಲಸಕ್ಕೆ ಸರಿಯಾದ ರೀತಿಯ ಹದಮಾಡಿಕೊಂಡು, ನಂತರ ಇದಕ್ಕೆ ಬೇಕಾಗುವ ಬಣ್ಣವನ್ನು ಮತ್ತು ವಿದ್ಯುಚಾಲಿತ ಯಂತ್ರದ ವಿದ್ಯುತ್‌ಬಿಲ್ಲು ಇದನ್ನೇಲ್ಲಾ ತಾನು ತಯಾರಿಸುವ ಗೊಂಬೆಗಳ ಮಾರಾಟ ಮಾಡಿ ಈ ಎಲ್ಲಾ ಖರ್ಚುಗಳನ್ನು ಬರುವ ಹಣದಲ್ಲಿಯೇ ವಿಂಗಡಿಸಿ ತೆಗೆದು, ತನ್ನ ಜೊತೆಯಲ್ಲಿಯೇ ದಿನ ಕೂಲಿಯಂತೆ ಕೆಲಸ ಮಾಡಿದ ಕರಕುಶಲ ಕರ್ಮಿಗಳಿಗೆ ದಿನಗೂಲಿಯಂತೆ ಹಣವನ್ನು ಕೊಡಬೇಕಾಗುತ್ತದೆ. ಇದನ್ನೆಲ್ಲಾ ಖರ್ಚನ್ನು ತೆಗೆದು ತನಗೆ ಉಳಿಯುವ ಹಣದಲ್ಲಿ ಉಪಜೀವನ ನಡೆಸುತ್ತಾರೆ.

ಮಧ್ಯವರ್ತಿ (ಬ್ರೋಕರ್) ಕಲಾವಿದರು ತಯಾರಿ ಮಾಡಿದ ಬೊಂಬೆಯನ್ನು ಖರೀದಿಸಿ ತನ್ನ ಅರ್ಧಲಾಭಕ್ಕೆ ಇದನ್ನು ಅಂಗಡಿಗೆ ಇಲ್ಲವೆ ದೊಡ್ಡ ದೊಡ್ಡ ಎಂಪೋರಿಯಮ್‌ಗಳಿಗೆ ಮಾರಾಟ ಮಾಡುತ್ತಾರೆ. ಇಲ್ಲಿ ಮಧ್ಯವರ್ತಿ ಯಾವುದೇ ರೀತಿಯಾಗಿ ಬಂಡವಾಳವಾಗಲಿ ಶ್ರಮವಾಗಲಿ ಹಾಕುವುದಿಲ್ಲ. ಇವನದು ಏನಿದ್ದರೂ ಖರೀದಿಸುವಿಕೆ ಹಾಗೂ ಗೊಂಬೆಗಳನ್ನು ಮಾಲೀಕನಿಗೆ ಮಾರಾಟ ಮಾಡುವುದು ಇದರಿಂದ ಅರ್ಧ ಲಾಭ ಈ ಮಧ್ಯವರ್ತಿಗೆ ಸಿಗುತ್ತದೆ.

ಕೊನೆಯದಾಗಿ ಅಂಗಡಿ ಮಾಲೀಕ (ಎಂಪೋರಿಯಂ) ಮಧ್ಯವರ್ತಿಗಳಿಂದ ಖರೀದಿಸಿದ ಸಾಮಾನುಗಳನ್ನು ತಾವು ನಿಗದಿಪಡಿಸಿದ ದರದಲ್ಲಿ ಪಡೆದುಕೊಂಡು ಇವುಗಳನ್ನು ಕುಶಲಕರ್ಮಿಗಳಿಗೆ ನೀಡಿದ ದರಕ್ಕಿಂತ ೩ ರಿಂದ ೪ ಪಟ್ಟು ಜಾಸ್ತಿಯಾಗಿ ಮಾರಾಟ ಮಾಡಲಾಗುತ್ತದೆ. ಇದಲ್ಲದೆ ಈ ಗೊಂಬೆಗಳಿಗೆ ಅಂತರಾಷ್ಟ್ರೀಯ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡಿದೆ. ಅಲ್ಲದೇ ಗೊಂಬೆಗಳಿಗೆ ವರಮಾನವು ಹೆಚ್ಚಿದೆ ಅಮೇರಿಕಾ, ಜಪಾನ್, ಜರ್ಮನಿ, ಫ್ರಾನ್ಸ್, ಇಂಗ್ಲೇಂಡ್, ಮಲೇಷಿಯಾ ಸೇರಿದಂತೆ ಹಲವೆಡೆಗೆ ಇಲ್ಲಿ ಗೊಂಬೆಗಳನ್ನು ಮತ್ತು ಅಲಂಕಾರಿಕ ವಸ್ತುಗಳನ್ನು ರಫ್ತುಮಾಡಿ ಸಾಕಷ್ಟು ಲಾಭವನ್ನು ಗಳಿಸುತ್ತಿದ್ದಾರೆ.

ರಾಜ್ಯ ಸರ್ಕಾರದ ನೆರವು:

ಚನ್ನಪಟ್ಟಣ ಕರಕುಶಲ ಕೈಗಾರಿಕೆ ಪ್ರಸಿದ್ಧಿ ಪಡೆದಂತೆಲ್ಲಾ ಕಲೆಗಾರರಿಗೆ ಪ್ರೋತ್ಸಾಹ ಹಾಗೂ ಅವರಿಗೆ ಕರಕುಶಲ ಕೈಗಾರಿಕೆಗೆ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಸಲುವಾಗಿ ೧೯೯೭ ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ಚನ್ನಪಟ್ಟಣದಲ್ಲಿ ಅರಗು ಕುಶಲ ಕಲಾ ಸಂಕೀರ್ಣ ಪ್ರಾರಂಭಿಸಿ ಕರಕುಶಲ ಕರ್ಮಿಗಳಿಗೆ ಉತ್ತಮ ತರಬೇತಿ, ವಿನ್ಯಾಸ, ಅಧ್ಯಯನದ ಪ್ರವಾಸ, ಬೊಂಬೆ ತಯಾರಿಗೆ ಬೇಕಾಗುವ ಸಾಮಗ್ರಿಗಳು ಮತ್ತು ಬೊಂಬೆ ತಯಾರಿಕೆಗೆ ಬೇಕಾಗಿರುವ ಮರದ ಪೂರೈಕೆ ಹಾಗೂ ಮರ ಹದ ಮಾಡುವ ಯಂತ್ರದ ಅಳಡಿಕೆ ಮಾಡಿಕೊಟ್ಟು ಕುಶಲ ಕರ್ಮಿಗಳನ್ನು ಪ್ರೋತ್ಸಾಹಿಸಿ ಇವರು ತಯಾರಿಸಿದಂತ ಬೊಂಬೆಗಳನ್ನು ನಿಗಮದಿಂದಲೇ ತೆಗೆದುಕೊಂಡು ಇದಕ್ಕೆ ಉತ್ತಮ ಬೆಲೆಯನ್ನು ನೀಡಿ, ಉತ್ತಮ ಮಾರುಕಟ್ಟೆ ನಿರ್ಮಿಸಿ ಬೊಂಬೆ ತಯಾರಿಕೆ ಉತ್ತಮ ಬೆಲೆ ಸಿಗುವ ಹಾಗೆ ಮಾಡುತ್ತಾ ಬಂದಿರುತ್ತದೆ.

ಚನ್ನಪಟ್ಟಣದಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿಗೆ ನಿಗಮವು ಕೆಲವು ಕಲಾವಿದರನ್ನು ಗುರುತಿಸಿ ಸುಮರು ೨೫೪ ಕುಟುಂಬಗಳಿಗೆ ವಾಸಿಸಲು ಮನೆ ನಿರ್ಮಿಸಿಕೊಟ್ಟು ಕಲಾ ನಗರವೆಂಬ ಬಡಾವಣೆ ನಿರ್ಮಿಸಿದ್ದು, ಅಲ್ಲದೇ ಕಲಾ ನಗರದಲ್ಲಿ ಅರಗು ಕುರಕುಶಲ ಸಂಕೀರ್ಣ ನಿರ್ಮಿಸಿದೆ. ಅಲ್ಲಿ ಕುಶಲ ಕರ್ಮಿಗಳಿಗೆ ತರಬೇತಿ ಹಾಗೂ ಪ್ರೊತ್ಸಾಹ, ಉತ್ತೇಜನವನ್ನು ಕೊಟ್ಟು ಹಾಗೂ ಮರ ಹದಮಾಡುವ ಯಂತ್ರ ನಿರ್ಮಿಸಿ ಕರಕುಶಲ ಕೈಗಾರಿಕೋದ್ಯಮದಲ್ಲಿ ಪ್ರಗತಿಯನ್ನು ಸಾಧಿಸಿದೆ.

'ಶಿಲ್ಪಾ ಟ್ರಸ್ಟ್' ಹಾಗೂ **'ಮಾಯಾ'** ಸ್ವಯಂ ಸೇವಾ ಸಂಘಗಳು ಇಲ್ಲಿನ ಕುಶಲ ಕರ್ಮಿಗಳಿಗೆ ತರಬೇತಿ ನೀಡಿ ಉದ್ಯಮ ಬೆಳವಣಿಗೆ ಶ್ರಮಿಸುತ್ತಿವೆ ಅಲ್ಲದೇ ಕರಕುಶಲ ಕಲಾಗಾರಿಕೆಯನ್ನು ಪ್ರೋತ್ಸಾಹಿಸುವ ಹಾಗೂ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಬಡ ನಿರುದ್ಯೋಗಿಗಳಿಗೆ ಹಾಗೂ ಹೆಚ್ಚಿನದಾಗಿ ಹೆಣ್ಣು ಮಕ್ಕಳಿಗೆ ಕರಕುಶಲತೆಯ ತರಬೇತಿ ನೀಡಿವೆ. ಇದರ ಕಾಲಾವಧಿಯ ೬ ತಿಂಗಳ ಕಾಲ. ಇದಲ್ಲದೇ ತಿಂಗಳಿಗೆ ಸ್ಟೈಫಂಡ್ ರೂಪದಲ್ಲಿ ಹಣ ಕೊಟ್ಟು, ತರಬೇತಿಯನ್ನು ಮುಗಿಸಿದ ನಂತರ ಇದೇ ವೃತ್ತಿಯನ್ನು ಮುಂದುವರೆಸುವಂತೆ ಕರಕುಶಲ ಕರ್ಮಿಗಳಿಗೆ ಈ ಉದ್ಯಮಕ್ಕೆ ಬೇಕಾಗುವ ಎಲ್ಲಾ ರೀತಿಯ ಸವಲತ್ತು ದೊರಕಿಸಿ ಕೊಟ್ಟಿದೆ. ಈ ಸಂಸ್ಥೆಯು ಗೊಂಬೆಗಳನ್ನು ತಯಾರಿಸಿ ಮಾರುಕಟ್ಟೆಗಳಿಗೆ ಮಾರಾಟ ಮಾಡಿ

ಹಾಗೂ ವಿದೇಶಕ್ಕೆ ರಫ್ತು ಮಾಡುತ್ತಾ ಬಂದಿದೆ. ಚನ್ನಪಟ್ಟಣ ನಗರವು ಅಂದವಾದ ರೀತಿಯ ಹಲವು ಗೊಂಬೆ ತಯಾರಿಕೆಯಲ್ಲಿ ವಿಶ್ವದ ಮಟ್ಟದಲ್ಲಿ ಪ್ರಖ್ಯಾತಿಯಾಗಲು ಕರ್ನಾಟಕದ ಕರಕುಶಲ ನಿಗಮವು ಮತ್ತು ಸಂಸ್ಥೆಗಳು ಸಹ ಕೈ ಜೋಡಿಸಿವೆ. ಸ್ವಂತ ಕರಕುಶಲತೆಯಲ್ಲಿ ಕೆಲವು ಕುಟುಂಬಗಳು ಚನ್ನಪಟ್ಟಣ, ಮಂಗಳವಾರಪೇಟೆ, ಕೋಟೆ ಇಂದ್ರಾ ಕಾಲೇಜು, ಟಿಪ್ಪು ನಗರ, ಕರಿಯಪ್ಪನ ದೊಡ್ಡಿ, ಕಲಾನಗರ, ಮುಸ್ಲೀಮ್ ಕಾಲೋನಿ, ನೀಲಕಂಠಹಳ್ಳಿ ಮುಂತಾದ ಕಡೆಗಳಲ್ಲಿ ಸ್ವಂತ ಫ್ಯಾಕ್ಟರಿಯನ್ನು ನಿರ್ಮಿಸಿ ಕರಕುಶಲ ಕೈಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಲವಾರು ನಿರುದ್ಯೋಗಿಗಳಿಗೆ ಕೆಲಸ ಕೊಡುವುದರ ಜೊತೆಗೆ ಗೊಂಬೆ ತಯಾರಿಕೆಯನ್ನು ತಮ್ಮ ಜೀವನದ ವೃತ್ತಿಯನ್ನಾಗಿ ಮಾಡಿಕೊಂಡು ಜೀವನೋಪಾಯಕ್ಕೆ ದಾರಿಮಾಡಿಕೊಟ್ಟಿದೆ.

ಚನ್ನಪಟ್ಟಣದ ಕಲಾನಗರ ತಬ್ಬಿಕೆರೆ ರಸ್ತೆಯಲ್ಲಿರುವ ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತ 'ಅರಗು ಕುಶಲ ಕಲಾ ಸಂಕೀರ್ಣ' ಎಂಬ ಸರ್ಕಾರದಿಂದ ಪ್ರಾರಂಭಿಸಿ ಇಲ್ಲಿ ಹಲವು ಜನ ಕರಕುಶಲ ಕಲಾವಿದರಿಗೆ ವಿದ್ಯುತ್ ಯಂತ್ರಗಳನ್ನು ತಿಂಗಳ ಬಾಡಿಗೆಗೆ ರೂಪದಲ್ಲಿ ನೀಡಿ ಹಲವು ಜನರಿಗೆ ಉದ್ಯೋಗವನ್ನು ನೀಡಿದೆ. ಇದಲ್ಲದೆ ೧೯೮೦ರಲ್ಲಿ ೫೪ ಜನರಿಗೆ 'ಸ್ಯಾಂಡಲವುಡ್ ಕಾರ್ಡ'ನ್ನು ವಿತರಿಸಿದೆ. ಉಚಿತ ರೀತಿಯಲ್ಲಿ ವಾಸಿಸಲು ಮನೆಗಳನ್ನು ನಿರ್ಮಿಸಿ ಕೊಟ್ಟಿದೆ. ಗಂಧದ ಮರದಿಂದ ತಯಾರಿಸುವಂತಹ ವಸ್ತುಗಳಿಗೆ ಕಾವೇರಿ ಭವನ ಬೆಂಗಳೂರು ಇವರು ಕೆಲಸಕ್ಕೆ ಬೇಕಾಗುವ ಮರವನ್ನು ನೀಡಿ ತಿಂಗಳಿಗೊಮ್ಮೆ ಕುಶಲ ಕರ್ಮಿಗಳ ತಯಾರಿಸಿದ ವಸ್ತುಗಳನ್ನು ತಾವೇ ಖರೀದಿಸುತ್ತಾರೆ. ಕಾವೇರಿ ಭವನವು ವಿಜಯ ಬ್ಯಾಂಕಿನಲ್ಲಿ ಜಂಟಿಯಾಗಿ ಖಾತೆಯನ್ನು ತೆರೆದು ಒಬ್ಬ ವ್ಯಕ್ತಿಗೆ ೫೦೦೦ ಸಾವಿರದಿಂದ ೫೦,೦೦೦ ರೂ.ಗಳ ವರೆಗೆ ಕಡಿಮೆ ಬಡ್ಡಿದರದಲ್ಲಿ ಹಣವನ್ನು ಕೊಡುತ್ತಿದೆ. ಇದಲ್ಲದೆ ರಾಜೀವ ಗಾಂಧಿ 'ಶಿಲ್ಪ ಸ್ವಾಸ್ಥ್ಯ ವಿಮಾ ಯೋನೆಯನ್ನು ಸಹ ಜಾರಿಗೊಳಿಸಿದೆ. ಭಾರತ ಸರಕಾರ ಜವಳಿ ಮಂತ್ರಾಲಯದ ಕರಕುಶಲ ಅಭಿವೃದ್ಧಿ ಆಯುಕ್ತರ ಕಛೇರಿಯ ಐ.ಸಿ.ಎ.ಸಿ.ಐ ಲೋಟಾರ್ಚ ಜನರಲ್ ವಿಮಾ ಕಂಪನಿಯ ಸಹಯೋಗದಲ್ಲಿ ಕುಶಲ ಕರ್ಮಿಗಳ ಹಾಗೂ ಅವರ ಕುಟುಂಬದ ಕಲ್ಯಾಣಕ್ಕಾಗಿ "ಸಮಗ್ರ ಆರೋಗ್ಯ ವಿಮಾ ಯೋಜನೆ"ಯನ್ನು ರಾಷ್ಟ್ರ ವ್ಯಾಪ್ತಿ ಜಾರಿಗೊಳಿಸಿದೆ.

ಪ್ರಯೋಜನ:

ಕುಶಲಕರ್ಮಿ ಪತಿ/ಪತ್ನಿ ಮತ್ತು ಅವರ ಇಬ್ಬರು ಮಕ್ಕಳು ಅಥವಾ ತಂದೆ ಮತ್ತು ತಾಯಿ, ನಾಲ್ಕು ಜನ ಹೊರ ಮತ್ತು ಒಳ ರೋಗಿಯಾಗಿ ಚಿಕಿತ್ಸೆ ಪಡೆದರೆ ವಾರ್ಷಿಕ ರೂ. ೫೪,೦೦೦/- ವರೆಗೆ ಗರಿಷ್ಠ ವೆಚ್ಚವನ್ನು ಮರು ಪಾವತಿಸಲಾಗುತ್ತದೆ. ಕುಶಲಕರ್ಮಿ ಅಪಘಾತದಿಂದಾಗಿ ಮರಣ ಹೊಂದಿದರೆ, ಶಾಶ್ವತವಾಗಿ ಊನವಾದರೆ ೧ ಲಕ್ಷ ಪರಿಹಾರ ನೀಡಲಾಗುವುದು. ಜನಶ್ರೀ ಬೀಮಾ ಯೋಜನೆ (ಭಾರತೀಯ ಜೀವವಿಮಾ ನಿಗಮದ ಸಹಯೋಗದೊಂದಿಗೆ) ಅಡಿಯಲ್ಲಿ ಉಚಿತವಾಗಿ ಸದಸ್ಯತ್ವನ್ನು ನೀಡಲಾಗುವುದು. ಈ ಯೋಜನೆಯ ಅಡಿಯಲ್ಲಿ ೯ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ರವರೆಗೆ ಓದುತ್ತಿರುವ ಇಬ್ಬರು ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಕುಶಲಕರ್ಮಿ ಅಕಾಲಿಕ ಮರಣ ಹೊಂದಿದರೆ, ಅಪಘಾತದಲ್ಲಿ ಮರಣ ಹೊಂದಿದರೆ, ನಾಮಿನಿಗೆ ಹಣವನ್ನು ನೀಡಲಾಗುವುದು. ಹಾಗೂ ಶಾಶ್ವತವಾಗಿ ಊನವಾದರೆ ಸಹ ಪರಿಹಾರ ನೀಡಲಾಗುವುದು.

ಮಾರಾಟ ವ್ಯವಸ್ಥೆ:

ಚನ್ನಪಟ್ಟಣದಲ್ಲಿ ಬೊಂಬೆಗಳನ್ನು ಮಾರಾಟ ಮಾಡಲು ಅನೇಕ ದೊಡ್ಡ-ದೊಡ್ಡ ಎಂಪೋರಿಯಮ್‌ಗಳನ್ನು ಮೈಸೂರು ಬೆಂಗಳೂರು ರಸ್ತೆಯಲ್ಲಿ ಕಾಣಸಿಗುತ್ತವೆ. ಸ್ಥಳೀಯ ಕುಶಲ ಕರ್ಮಿಗಳು ದಿನವು ತಾವು ತಯಾರು ಮಾಡಿದಂತಹ ಗೊಂಬೆಗಳನ್ನು ಇಲ್ಲಿಯೇ ಮಾರಾಟ ಮಾಡುತ್ತಾರೆ. ಇನ್ನೂ ಕೆಲವರು ವಾರಕೊಮ್ಮೆ ಮಾರಾಟ ಮಾಡುತ್ತಾರೆ. ಮೈಸೂರು ಬೆಂಗಳೂರು ಅಲ್ಲದೇ ಕೆಲವು ಪ್ರವಾಸಿ ತಾಣಗಳಿಗೆ ಗೊಂಬೆಗಳನ್ನು ಮಾರಾಟ ಮಾಡುತ್ತಾರೆ. ಚನ್ನಪಟ್ಟಣದಲ್ಲಿ ಕರಕುಶಲ ಕರ್ಮಿಗಳು ಗೊಂಬೆಗಳನ್ನು ಎರಡು ರೀತಿಯಾಗಿ ತಯಾರು ಮಾಡುವ ವರ್ಗದವರಿದ್ದಾರೆ. ಗೊಂಬೆಗಳಿಗೆ ಬೇಕಾಗುವ ಕೆಲವು ಬಿಡಿ ಭಾಗಗಳು ಮಾತ್ರ ತಯಾರಿಸುತ್ತಾರೆ. ಉದಾ: ಗೊಂಬೆಗಳ ಕೈಗಳು, ಕಿವಿಗಳು, ಆಟಿಕೆ ರೈಲು ಗಾಲಿಗಳು, ಮಣಿಗಳು, ಪಕ್ಷಿ ಮತ್ತು ಪ್ರಾಣಿಗಳ ವಿವಿಧ ರೀತಿಯ ಕೊಕ್ಕುಗಳು, ಬಾಲಗಳು, ಕಿವಿಗಳು, ಹೀಗೆ ಅನೇಕ ಸಣ್ಣ-ಪುಟ್ಟ ಜೋಡಣೆಗೆ ಬೇಕಾಗುವಂತಹ ಸಾಮಾನುಗಳನ್ನು ನಿರ್ಮಿಸುತ್ತಾರೆ. ಈ ಬಿಡಿ ಭಾಗಗಳನ್ನು ನೇರವಾಗಿಯೇ ಹೋಗಿ ಅಂಗಡಿಗಳಿಗೆ ಕೊಡುತ್ತಾರೆ. ಇವುಗಳನ್ನು ಸಂಗ್ರಹಿಸಿದ ಅಂಡಗಿಯವರು ಹಾಗೂ ಮಧ್ಯವರ್ತಿಗಳು ದಿನ ಕೂಲಿಯ ದರದಲ್ಲಿ ಇವುಗಳ ಜೋಡಣೆಯನ್ನು

ಮಾಡಿಸಿರುತ್ತಾರೆ. ಇದಲ್ಲದೆ ಪೂರ್ಣಗೊಂಡಂತಹ ಗೊಂಬೆಗಳನ್ನು, ಆಟಿಕೆಗಳನ್ನು ಇತ್ಯಾದಿಗಳನ್ನು ಸಹ ಖರೀದಿಸಿ ಭಾರತವಲ್ಲದೆ ನೆರೆಯ ರಾಷ್ಟ್ರಗಳಿಗೆ ರಫ್ತು ಮಾಡುತ್ತಾರೆ.

ಕೆಲವು ಮಧ್ಯವರ್ತಿಗಳು ಮಾರುಕಟ್ಟೆಯಲ್ಲಿ ಹೆಚ್ಚಾಗಿ ಬೇಡಿಕೆಯಿರುವಂತಹ ವಸ್ತುಗಳನ್ನು ಅವಲೋಕನ ಮಾಡಿ ನೇರವಾಗಿ ಗೊಂಬೆ ತಯಾರಿಸುವವರ ಬಳಿ ಹೋಗಿ ತಮಗೆ ಬೇಕಾಗುವಂತಹ ಗೊಂಬೆಗಳಿಗೆ ಮುಂಗಡವಾಗಿ ಹಣ ಪಾವತಿಸಿ ಗೊಂಬೆಗಳನ್ನು ಸಿದ್ಧಪಡಿಸಿಕೊಳ್ಳುತ್ತಾರೆ. ಇಂತಹ ಗೊಂಬೆಗಳನ್ನು ಬೇರೆ ಬೇರೆ ರಾಜ್ಯ ದೇಶ, ರಾಷ್ಟ್ರಗಳಲ್ಲಿ ಇರುವಂತಹ ಮಧ್ಯವರ್ತಿಗಳನ್ನು ಸಂಪರ್ಕಿಸಿ ಮಾರಾಟ ಮಾಡುವ ವ್ಯವಸ್ಥೆಯನ್ನು ಇಲ್ಲಿ ಕಾಣಬಹುದಾಗಿದೆ. ಇನ್ನೂ ಕೆಲವು ಗೊಂಬೆ ತಯಾರಿಕಾ ಕುಶಲ ಕರ್ಮಿಗಳು ತಮ್ಮ ಬುದ್ಧಿ ಜಾಣ್ಮೆಯನ್ನು ಉಪಯೋಗಿಸಿ ಕೆಲವು ಗೊಂಬೆಗಳನ್ನು, ಶೋಕೇಸಿನ ಸಾಮಾನುಗಳನ್ನು ಮಾದರಿ ಗೊಂಬೆಗಳನ್ನು ಮಾಡಿಕೊಂಡು ಅಂಗಡಿಗೆ ಹೋಗಿ ತೋರಿಸುತ್ತಾರೆ. ಅಂಗಡಿಯವರು ಇಂತಹ ಗೊಂಬೆಗಳನ್ನು ನೋಡಿ ಬೇಕೆಂದು ಹೇಳಿದಾಗ ದೊಡ್ಡ ಪ್ರಮಾಣದಲ್ಲಿ ತಯಾರಿಸಿಕೊಡುತ್ತಾರೆ. ಮಧ್ಯವರ್ತಿಗಳು ಹಾಗೂ ಅಂಗಡಿಯವರಿಗೆ ಗ್ರಾಹಕರು ಯಾವ ರೀತಿಯ ವಸ್ತುಗಳನ್ನು ತೆಗೆದುಕೊಳ್ಳುತ್ತಾರೆ ಎಂಬ ಸಾಕಷ್ಟು ವರ್ಷಗಳಿಂದ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವುದರಿಂದ ಅಂದಾಜಿಸಿ ಅಂತಹ ಗೊಂಬೆಗಳನ್ನು ಖರೀದಿಸಿ ಕುಶಲ ಕರ್ಮಿಗಳಿಗೆ ಕೆಲಸವನ್ನು ನೀಡುತ್ತಾರೆ. ಇಲ್ಲಿ ಕ್ರಿಯಾತ್ಮಕವಾದ ಮಕ್ಕಳ ಆಟಿಕೆಗಳೇ ಹೆಚ್ಚಿನದಾದ ಬೇಡಿಕೆಯಿರುವುದನ್ನು ಗಮನಿಸಬಹುದು.

ಬದಲಾಗುತ್ತಿರುವ ಆಧುನಿಕ ಜಗತ್ತಿನೊಂದಿಗೆ ಕುಶಲ ಕರ್ಮಿಯು ಗೊಂಬೆಗಳ ತಯಾರಿಕೆಯಲ್ಲಿ ಬದಲಾವಣೆಯನ್ನು ಅಳವಡಿಸಿಕೊಳ್ಳುತ್ತಾ ಈ ಕ್ಷೇತ್ರಕ್ಕೆ ಇಡೀ ತಮ್ಮ ಜೀವನವನ್ನು ಮುಡುಪಾಗಿಟ್ಟು, ಜೀವನ ಸಾಗಿಸಿದಂತಹ ಎಷ್ಟೋ ಹಿರಿಯ ಜೀವಿಗಳು ಚನ್ನಪಟ್ಟಣದ ಸುತ್ತ ಮುತ್ತ ಕಾಣಸಿಗುತ್ತಾರೆ. ನಿಜವಾದ ಕುಶಲ ಕರ್ಮಿಯು ಮಧ್ಯವರ್ತಿಗಳ ಹಾವಳಿಗಳಿಂದ ಕುಟುಂಬದ ಸ್ಥಿತಿ ಅಷ್ಟೇನೂ ಚೆನ್ನಾಗಿಲ್ಲ. ಸಾಕಷ್ಟು ಕುಟುಂಬಗಳು ಗೊಂಬೆಗಳ ತಯಾರಿಕೆಯನ್ನು ಬಿಟ್ಟು ಬೇರೆ ಬೇರೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಿವೆ. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಚನ್ನಪಟ್ಟಣದ ಗೊಂಬೆಗಳ ಬೇಡಿಕೆ ಸಾಕಷ್ಟು ಲಾಭ ತರುವಂತಿದೆ. ಇದನ್ನು ಮುಂದುವರೆಸಿಕೊಂಡು ಹೋಗಬಹುದಲ್ಲ? ನೀಡಿದ ಪ್ರಶ್ನೆಗೆ ಬಂದಂತಹ ಉತ್ತರ ಮನೆ ಕಟ್ಟುವ ಗಾರೆ ಕೆಲಸಕ್ಕೆ ಒಂದು ದಿನಕ್ಕೆ ೪೦೦ ರೂ. ಗಳು ಗಳಿಸಬಹುದು. ದಿನವಿಡೀ ಹಗಲು

ರಾತ್ರಿಯೆನ್ನದೇ ಕುಳಿತುಕೊಂಡು ಗೊಂಬೆ ತಯಾರಿಕೆ ಕೆಲಸ ಮಾಡಿದರೆ ಮರ, ಬಣ್ಣ, ವಿದ್ಯುತ್ ವೆಚ್ಚ ಈ ಎಲ್ಲಾ ಖರ್ಚುಗಳನ್ನು ತೆಗೆದು ನಮಗೆ ಉಳಿಯುವುದು ದಿನಕ್ಕೆ ೧೦೦ ರಿಂದ ೧೫೦ ರೂ. ಗಳ ಲಾಭ ದೊರೆಯುತ್ತದೆ. ಅದಕ್ಕಾಗಿ ಗೊಂಬೆ ತಯಾರಿಕೆಯಲ್ಲಿ ಆಸಕ್ತಿ ಕಳೆದುಕೊಂಡು ಎಷ್ಟೋ ಯುವಕರು ದುಡಿಯಲು ಬೆಂಗಳೂರುಂತಹ ಮಹಾನಗರಗಳ ಕಡೆ ಮುಖ ಮಾಡಿದ್ದಾರೆ.

ಚನ್ನಪಟ್ಟಣದಲ್ಲಿ ಎಂಪೋರಿಯಮ್ ಮಾಲೀಕರು ಮತ್ತು ಮಧ್ಯವರ್ತಿಗಳು ಮಾತ್ರ ಗೊಂಬೆಗಳ ಮಾರಾಟದಿಂದ ಸಾಕಷ್ಟು ಹಣವನ್ನು ಗಳಿಸಿ ಸ್ಥಿತಿವಂತ ಜೀವನ ನಡೆಸುತ್ತಿದ್ದಾರೆ. ಕುಶಲ ಕಾರ್ಮಿಕರಿಂದ ತಾವು ಖರೀದಿಸಿದ ಗೊಂಬೆಗಳಿಗೆ ತಮಗೆ ಇಷ್ಟ ಬಂದಷ್ಟು ಹಣವನ್ನು ನಿಗದಿಪಡಿಸಿ ಗ್ರಾಹಕರಿಗೆ ಮಾರುತ್ತಾರೆ. ಸ್ಥಳೀಯ ಕುಶಲ ಕರ್ಮಿಗಳಿಗೂ ಇಂತಹ ವಿಚಾರಗಳನ್ನು ಗೊತ್ತಿದ್ದರೂ ಸಹ ನೀವು ಏಕೆ ಇವರಿಗೆ ಮಾರುತ್ತೀರಾ? ಎಂದು ಕ್ಷೇತ್ರಕಾರ್ಯ ಸಂದರ್ಭದಲ್ಲಿ ನಾನು ಪ್ರಶ್ನಿಸಿದಾಗ ಮೊದಲು ಬಂದ ಉತ್ತರ ಹಣದ ಕೊರತೆ, ಸಾಕಷ್ಟು ಗೊಂಬೆಗಳನ್ನು ತಯಾರಿಸಿ ಸಂಗ್ರಹ ಮಾಡಲು ಸಾಧ್ಯವಿಲ್ಲ. ಇಂತಹ ಗೊಂಬೆಗಳನ್ನು ಮಾರಾಟ ಮಾಡಲು ಸೂಕ್ತ ಸ್ಥಳವಾಗಲಿ, ಸ್ವಂತ ಅಂಗಡಿಯಾಗಲಿ ಇಲ್ಲ. ಕುಟುಂಬದ ನಿರ್ವಹಣೆಗೆ ಪ್ರತಿದಿನ ಹಣದ ಅವಶ್ಯಕತೆ ಇರುವುದರಿಂದ ಇದೂ ಸಾಧ್ಯವಿಲ್ಲ. ಮಧ್ಯವರ್ತಿಗಳು ನಿಗದಿ ಪಡಿಸಿದ ಹಣಕ್ಕೆ ಕೊಟ್ಟರೆ ಮತ್ತೆ ನಮಗೆ ಗೊಂಬೆ ತಯಾರಿಸುವ ಕೆಲಸಗಳನ್ನು ಕೊಡುತ್ತಾರೆ. ನಾವು ಚೌಕಾಸಿ ಮಾಡಿದರೆ ನಮಗಿಂತ ಕಡಿಮೆ ದರದಲ್ಲಿ ತಯಾರಿ ಮಾಡುವವರನ್ನು ಸೃಷ್ಟಿಸಿಕೊಳ್ಳುತ್ತಾರೆ. ಆಗ ನಮ್ಮ ಪಾಡು ಕೇಳುವರ್‍ಯಾರು? ಎನ್ನುತ್ತಾರೆ. ಗೊಂಬೆ ತಯಾರಿಸುವ ಕಲಾವಿದರು ಪ್ರತಿಯೊಂದು ನೀರ ಹನಿಗೂ ಸಮುದ್ರ ನೀರಿನ ಸಂಪೂರ್ಣ ಗುಣವಿದೆ ಎಂಬಂತೆ ಚನ್ನಪಟ್ಟಣದ ಕುಶಲಕರ್ಮಿಯು ಅಪರಿಮಿತ ಗೊಂಬೆ ತಯಾರಿಸುವ ಶಕ್ತಿ ಇದೆ. ಕೇವಲ ಸಮಸ್ಯೆ ಇದೆಯೆಂದು ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳದೇ ಇಂತಹ ಕ್ಲಿಷ್ಟವಾದ ಪರಿಸ್ಥಿತಿಯಲ್ಲಿ ನಮ್ಮ ಕರ್ನಾಟಕದ ವಿಶ್ವಪ್ರಸಿದ್ಧ ಚನ್ನಪಟ್ಟಣದ ಚಿತ್ತಾರದ ಗೊಂಬೆ ತಯಾರಿಕೆಯನ್ನು ಕೆಲವು ಕಲಾವಿದರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಆಶ್ಚರ್ಯಕರವಾದ ವಿಷಯವೆನೆಂದರೆ ತಾವು ನಿರ್ಮಾಣ ಮಾಡುವ ಎಷ್ಟೋ ಗೊಂಬೆಗಳ ಹೆಸರುಗಳೇ ಇಲ್ಲಿಯ ಕುಶಲಕರ್ಮಿಗಳಿಗೆ ತಿಳಿದಿರುವುದಿಲ್ಲ. ಇವರಿಗೆ ಕ್ರಿಯಾತ್ಮಕವಾಗಿ, ಸುಂದರವಾಗಿ, ಕಾಲ್ಪನಿಕವಾಗಿ

ನಿರ್ಮಿಸುತ್ತಾರೆ ಅಷ್ಟೇ. ಇಂತಹ ಗೊಂಬೆಗಳಿಗೆ ಇವರು ಕೊಡುವ ಹೆಸರು 'ಶೋಕೆಸಿನ ಸಾಮಾನು'ಗಳು ಎನ್ನುತ್ತಾರೆ.

ರಾಜ್ಯ ಕುಶಲ ನಿಗಮ ಇಲ್ಲಿ ಕುಶಲ ಕರ್ಮಿಗಳಿಗೆ ವೇದಿಕೆ ನಿರ್ಮಿಸಿ ತರಬೇತಿ ನೀಡುತ್ತಿದೆ. ಬರುವ ಬೇಡಿಕೆಯನ್ನು ಆಧರಿಸಿ ಕುಶಲ ಕರ್ಮಿಗಳಿಂದ ಗೊಂಬೆಗಳನ್ನು ಪಡೆದುಕೊಳ್ಳುತ್ತಿದೆ. ತಿಂಗಳಿಗೆ ಐದು ಲಕ್ಷದಷ್ಟು ವಹಿವಾಟನ್ನು ನಡೆಸುತ್ತಿದೆ ಎಂದು ಕೇಂದ್ರ ಯೋಜನಾಧಿಕಾರಿ ತಿಳಿಸುತ್ತಾರೆ. ಸ್ವಯಂ ಸೇವಾ ಸಂಘಗಳಿಂದ ಇಲ್ಲಿನ ಕುಶಲಕರ್ಮಿಗಳಿಗೆ ತರಬೇತಿ ಉದ್ಯಮ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಎಷ್ಟೋ ತರಬೇತಿ ಕೇಂದ್ರಗಳು ಸಹ ಮುಚ್ಚುವ ಹಂತಕ್ಕೆ ತಲುಪಿವೆ. ಏಕೆಂದರೆ ಸ್ಥಳೀಯ ಜನರು ಗೊಂಬೆಗಳ ತಯಾರಿಕೆ ಮೇಲಿನ ಆಸಕ್ತಿಯನ್ನು ಕಳೆದುಕೊಂಡಿದ್ದಾರೆ.

ಕಲಾವಿದರ ಸುಧಾರಣೆ:

ಚನ್ನಪಟ್ಟಣದ ಬಣ್ಣದ ಗೊಂಬೆಗಳ ತಯಾರಿಕೆಯಲ್ಲಿ ಬಹಳ ಪ್ರಸಿದ್ಧಿಯನು ಪಡೆದಿದೆ. ಇಲ್ಲಿ ಕಲಾವಿದರು ತಮ್ಮ ಜಾಣ್ಮೆಯ ಕಲಾ ಕೌಶಲ್ಯವನ್ನು ಎತ್ತಿ ಹಿಡಯುವಲ್ಲಿ ತಮ್ಮ ಜೀವನವನ್ನು ಮುಡುಪಾಗಿ ಇಟ್ಟಿದ್ದಾರೆ. ಅನೇಕ ಕಲಾವಿದರು ತಮ್ಮ ಕುಟುಂಬದಲ್ಲಿ ತಲೆ–ತಲಾಂತರದಿಂದ ಬಂದ ಈ ಕಲೆಯನ್ನು ಮುಂದುವರೆಸಿಕೊಂಡು ಉಳಿಸಿ ಬೆಳೆಸುವಲ್ಲಿ ಶ್ರಮಿಸಿದ್ದಾರೆ.

ಗೊಂಬೆಯ ಉದ್ಯಮಕ್ಕೆ ದಶಕದಿಂದೀಚೆಗೆ ಚೀನಾಗೊಂಬೆ, ಪ್ಲಾಸ್ಟೀಕ್ ಗೊಂಬೆ, ಪಿಂಗಾಣಿ ಆಟಿಕೆ ಅಲಂಕಾರಿಕ ಸಾಮಗ್ರಿಗಳ ದಾಳಿಯಿಂದ ಕುಶಲಕರ್ಮಿಗಳು ಸಂಕಷ್ಟಕ್ಕೊಳಗಾಗಿದ್ದಾರೆ. ಚನ್ನಪಟ್ಟಣದ ಬೊಂಬೆ ಮಾರಾಟ ಮಳೀಗೆಗಳಲ್ಲಿಯೇ ಚೀನಾಗೊಂಬೆಗಳ ಮಾರಾಟ ತಿಂಗಳಿಗೆ ೫ ಲಕ್ಷ ರಷ್ಟಿದೆ. ೪೦೦ಕ್ಕೂ ಹೆಚ್ಚು ಬಗೆಯ ಚೀನಾ ಗೊಂಬೆಗಳು ಲಗ್ಗೆ ಇಟ್ಟಿವೆ ಎನ್ನುತ್ತಾರೆ. ಚನ್ನಪಟ್ಟಣದ ಗೊಂಬೆ ವ್ಯಾಪಾರಿಗಳು ಈ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಲು ಕಾಲಕ್ಕೆ ತಕ್ಕಂತೆ ಬದಲಾವಣೀ ಮೈಗೂಸಿಕೊಳ್ಳುತ್ತಿರುವ ಕುಶಲ ಕರ್ಮಿಗಳು, ಸಾಂಪ್ರದಾಯಿಕ ಬೊಂಬೆಗಳು, ಮರದ ಆಭರಣಗಳು, ಪಿಠೋಪಕರಣ ತಯಾರಿಕೆ ಮೂಲತಃ ಬೊಂಬೆ ನಾಡಿನ ಅಸ್ತಿತ್ವ ಉಳಿಸಲು ಶ್ರಮಿಸುತ್ತಿದ್ದಾರೆ. ಆದರೆ ಬೊಂಬೆಗಳಿಗೆ ಬೇಕಾಗುವ ಕಚ್ಚಾ ಸಾಮಗ್ರಿಗಳಾದ ಮರ, ಬಣ್ಣಗಳನ್ನು ಮತ್ತು ವಿದ್ಯುತ್ ದರವು ದಿನೇ–ದೀನೇ ಹೆಚ್ಚಾಗುತ್ತಿರುವುದನ್ನು ಸರಕಾರ ತಡೆಯಬೇಕಾಗಿದೆ. ಕಡ್ಡಾಯ ಶಿಕ್ಷಣ ನೀತಿಯ ಜಾರಿಗೊಳಿಸಿ ಇನ್ನೂ ಹೆಚ್ಚು ಯುವಕರಿಗೆ

ಗೊಂಬೆಯ ತಯಾರಿಕೆಯ ತರಬೇತಿಯನ್ನು ನೀಡಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತೆ ಅವರಿಗೆ ಬ್ಯಾಂಕ್‌ಗಳ ಮುಖಾಂತರ ಇನ್ನೂ ಹೆಚ್ಚಿನ ಧನ ಸಹಾಯವನ್ನು ಮಾಡಬೇಕಾಗಿದೆ. ಇದರಿಂದ ಅನೇಕ ಯುವಕರು ಬೇರೆ ಬೇರೆ ಕೆಲಸಕ್ಕೆ ವಲಸೆ ಹೋಗುವುದನ್ನು ತಡೆಗಟ್ಟಬಹುದಾಗಿದೆ. ರಾಜ್ಯ ಸರಕಾರವು ಸಾಕಷ್ಟು ಅನುಕೂಲಗಳನ್ನು ಈ ಉದ್ಯಮ್ಮಕೆ ನೀಡಿದೆ ನಿಜ, ಆದರೆ ಎಷ್ಟು ಕಲಾವಿದರಿಗೆ ಯೋಜನೆಗಳ ಪ್ರಯೋಜನಗಳೆ ಗೊತ್ತಿಲ್ಲವಾಗಿದೆ. ನೀಲಸಂದ್ರ ಕ್ಷೇತ್ರ ಕಾರ್ಯಕ್ಕೆ ಹೋದಾಗ ಇಲ್ಲಿ ಯಾವ ಮನೆಯಲ್ಲೂ ಒಂದು ವಿದ್ಯುತ್ ಯಂತ್ರವನ್ನು ಅಳವಡಿಸಿಕೊಂಡಿಲ್ಲ. ಈಗಲೂ ಹಳೆಯ ಪಟ್ರಿ (ಹ್ಯಾಡ್ ಲೇತ್) ಪದ್ಧತಿಯಿಂದಲೇ ಸಣ್ಣ-ಪುಟ್ಟ ಗೊಂಬೆಗಳನ್ನು, ಮಣಿಗಳನ್ನು ಮಾತ್ರ ತಯಾರಿಸುತ್ತಾರೆ. ಇಂತಹವರಿಗೆ ಸರಕಾರದ ವತಿಯಿಂದ ಸಹಾಯವಾಗಬೇಕಾಗಿದೆ.

ಕಲಾವಿದನು ತಯಾರಿಸುವಂತಹ ಸಾಮಾಗ್ರಿಗಳಿಗೆ ಸ್ವಲ್ಪಮಟ್ಟಿಗೆ ಲಾಭದ ರೀತಿಯಲ್ಲಿ ಬೆಲೆಗಳನ್ನು ನಿಗದಿಪಡಿಸಬೇಕಾಗಿದೆ. ಚನ್ನಪಟ್ಟಣ ಗೊಂಬೆ ತಯಾರಿಕೆ ಕಲಾವಿದರು ವಿದ್ಯುತ್ ಯಂತ್ರಗಳನ್ನು ನಂಬಿಕೊಂಡು ಕೆಲಸವನ್ನು ಅವಲಂಬಿಸಿದ್ದಾರೆ. ಆದರೆ ಇಲ್ಲಿ ವಿದ್ಯುತ್ ಕಡಿತ ಹೆಚ್ಚಾಗಿ ಕಂಡುಬರುತ್ತದೆ. ಇಂತಹ ಸಮದರ್ಭದಲ್ಲಿ ದಿನವೀಡಿ ಕೆಲಸವಿಲ್ಲದೆ ಕುಳಿತುಕೊಳ್ಳಬೇಕಾಗಿದೆ. ಈ ಪ್ರದೇಶಕ್ಕೆ ಹೆಚ್ಚಾಗಿ ವಿದ್ಯುತ್‌ನ್ನು ನೀಡಬೇಕಾಗಿ ಸರ್ಕಾರವು ಗಮನಹರಿಸಬೇಕಾಗಿದೆ. ಸ್ವಯಂ ಸೇವಾ ಸಂಘಗಳು ತರಬೇತಿ ನೀಡಿ ಉದ್ಯಮ ಬೆಳವಣಿಗೆ ಶ್ರಮಿಸಬೇಕಾಗಿದೆ. ಇದರಿಂದ ವಾರ್ಷಿಕ ಕೋಟಿ ರೂಪಾಯಿಗಳ ವಹಿವಾಟು ನಡೆಸಬಹುದಾಗಿದೆ. ಇನ್ನೊಂದೆಡೆ ಅಗ್ಗದ ಚೀನಾ ಗೊಂಬೆಗಳು ಲಗ್ಗೆ ಇಟ್ಟಿರುವುದುನ್ನು ಸರಕಾರ ತಡೆಯಬೇಕಾಗಿದೆ. ಕುಶಲಕರ್ಮಿಗಳಿಗೆ ಮನೆ ಹಾಗೂ ಸಾಲ ಸೌಲಭ್ಯ ಇನ್ನೂ ಹೆಚ್ಚಾಗಬೇಕಾಗಿದೆ. ಈ ಕ್ಷೇತ್ರದಲ್ಲಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಹಿರಿಯ ಕಲಾವಿದರನ್ನು ಗೌರವಿಸಿ ಸನ್ಮಾನಗಳು ರಾಜ್ಯ ಸರಕಾರದಿಂದ ಮಾಡಬೇಕಾಗಿದೆ. ಗೊಂಬೆಗಳ ಚೆಲುವಿನ ಬೀಡಾದ ಚನ್ನಪಟ್ಟಣದ ಗೊಂಬೆಯ ಗಾಥೆ ವಿಶ್ವದ ತುಂಬೆಲ್ಲಾ ಹರಡಿ ಮೊದಲು ಗೊಂಬೆಗಳ ಸಂಗ್ರಹ ಮನೆ-ಮನೆಗೆ ಸೀಮಿತವಾಗಿತ್ತು. ಆದರೆ ಇದೀಗ ದೇಶದ ತುಂಬೆಲ್ಲಾ ಗೊಂಬೆ ಸಂಗ್ರಹಾಲಯಗಳು ಮೈದಳೆಯ ತೊಡಗಿವೆ. ಇಂತಹ ಗೊಂಬೆಗಳ ನಾಡನ್ನು ಕಲಾವಿದರನ್ನು, ಗೊಂಬೆಗಳನ್ನು ಸಂಪ್ರದಾಯವನ್ನು ಉಳಿಸಿ-ಬೆಳೆಸುವ ಜವಾಬ್ದಾರಿಯು ಸರಕಾವು ಮತ್ತು ನಾವುಗಳು ಕೈ ಜೋಡಿಸಿ ಬೆಳೆಸುವಲ್ಲಿ ಶ್ರಮಿಸಬೇಕಾಗಿದೆ.



ಗೊಂಬೆಗಳಿಗೆ ಬಣ್ಣ ಹಚ್ಚುತ್ತಿರುವ ಕುಶಲಕರ್ಮಿಗಳು



ಗೊಂಬೆಗಳಿಗೆ ನಕ್ಷಾ ಚಿತ್ರಗಳನ್ನು ಹಾಕುತ್ತಿರುವ ಮಹಿಳೆ



ಮಾರಾಟಕ್ಕೆ ಸಿದ್ಧವಾಗುತ್ತಿರುವ ಬುಗುರಿಗಳು



ಬಳೆಗಳಿಗೆ ಜಲವರ್ಣದಲ್ಲಿ ನಕ್ಷೆ ಚಿತ್ರಗಳನ್ನು ಹಾಕುತ್ತಿರುವ ವ್ಯಕ್ತಿ



ಗೊಂಬೆಗಳ ಬಿಡಿ ಭಾಗಗಳ ಜೋಡಣೆ



ಜಾಮಿತಿಕ ಉಪಕರಣಗಳನ್ನು ತಯಾರು ಮಾಡುತ್ತಿರುವುದು.



ಮಾರಾಟಕ್ಕೆ ಸಿದ್ಧವಾಗುತ್ತಿರುವ ಗೊಂಬೆಗಳು



ಮಾರಾಟಕ್ಕೆ ಸಿದ್ಧಗೊಂಡಿರುವ ಗೊಂಬೆಗಳು



ಘೂಹಳ್ಳಿ ಪುಟ್ಟಸ್ವಾಮಿ ನಿವೃತ
ಉಪನ್ಯಾಸಕರೊಂದಿಗೆ ಸಂಶೋಧಕರು
ಚರ್ಚಿಸುತ್ತಿರುವುದು



ಚನ್ನಪಟ್ಟಣ ಗೊಂಬೆಗಳ ಮಾರಾಟ ಮಳಿಗೆ



ಚನ್ನಪಟ್ಟಣದ ಅರಮನೆಯ ಅವಶೇಷ



ಚನ್ನಪಟ್ಟಣದ ಗೊಂಬೆಗಳ ಮಾರಾಟ ಮಳಿಗೆ

ಮಾರಾಟ ಮಳಿಗೆಯಲ್ಲಿ ಗೊಂಬೆಗಳು







ಅಧ್ಯಾಯ – ಏಳು

ಸಮಾರೋಪ

ಅಧ್ಯಾಯ– ಏಳು

ಸಮಾರೋಪ

ಕಲೆ ಮತ್ತು ಕಲಾ ಪ್ರಕಾರಗಳು ಹಲವಾರು ರೀತಿಯಲ್ಲಿ ಮನುಷ್ಯನ ಮನಸ್ಸು ರಂಜಿಸುತ್ತ ಬಂದಿವೆ. ಚಿತ್ರದ ಮೂಲಕ ಶಿಲ್ಪದ ಮೂಲಕ, ನೃತ್ಯದ ಮೂಲಕ, ಸಂಗೀತದ ಮೂಲಕ, ನಾಟಕದ ಮೂಲಕ ಹೀಗೆ ಅನೇಕ ಕಲಾ ಪ್ರಕಾರಗಳು ತಮ್ಮದೇ ಆದ ನಿಟ್ಟಿನಲ್ಲಿ ಮನುಕುಲಕ್ಕೆ ಸಂತೋಷವನ್ನುಂಟುಮಾಡುವ ಹಿನ್ನೆಲೆ ಹೊಂದಿವೆ. ಇದರಲ್ಲಿ ಚಿತ್ರಕಲೆ ಮತ್ತು ಮೂರ್ತಿಕಲೆಗಳ ಸಂಗಮವಾದ ಗೊಂಬೆಗಳ ಕಲಾ ಪ್ರಕಾರದಲ್ಲಿ ವಿಶಿಷ್ಟಪಾತ್ರ ವಹಿಸುತ್ತದೆ. ಇಲ್ಲಿ ಗೊಂಬೆಗಳಲ್ಲಿ ಹಲವಾರು ರೀತಿಯ ಪ್ರಕಾರಗಳನ್ನು ನಾವು ನೋಡಬಹುದಾಗಿದೆ. ಇವುಗಳಲ್ಲಿ ಗೋಕಾಕ್ ಕಲೆ, ಕಲಘಟಗಿ, ಕಿನ್ನಾಳ ಕಲೆ, ತೊಗಲು ಗೊಂಬೆ, ಸೂತ್ರದ ಗೊಂಬೆ, ಆಟಿಕೆ ಗೊಂಬೆ ಹೀಗೆ ವಿಂಗಡಿಸುತ್ತ ಹೋಗಬಹುದಾಗಿದೆ. ಕೆಲವು ಗೊಂಬೆಗಳ ಪ್ರದರ್ಶನದ ಸಂದರ್ಭದಲ್ಲಿ ದೃಶ್ಯಾತ್ಮಕ ಹಾಗೂ ಶ್ರವ್ಯ ಮಾಧ್ಯಮದ ಮೂಲಕ ಮನಸ್ಸಿಗೆ ಮನೋರಂಜನೆ ಉಲ್ಲಾಸ ದೊರಕುತ್ತದೆ. ಆದರೆ ಆಟಿಕೆಯ ಗೊಂಬೆಗಳಿಂದ ಸೌಂದರ್ಯ ಮತ್ತು ಮಕ್ಕಳ ಮನೋವಿಕಾಸದಂತಹ ಕಾರ್ಯ ಚಟುವಟಿಕೆಗಳನ್ನು ಪೂರಕವಾಗಿ ಇವು ಬೆಳೆಸುತ್ತವೆ. ಈ ಹಿನ್ನೆಲೆಯಲ್ಲಿ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಕುರಿತಾದ ಪ್ರಸ್ತುತ ಅಧ್ಯಯನವು ವಿವಿಧ ಅಧ್ಯಯನಗಳಲ್ಲಿ ವಿಶ್ಲೇಷಣೆಗೊಂಡು ವಿಷಯ ನಿರೂಪಿಸಲ್ಪಟ್ಟಿವೆ. ಇಲ್ಲಿ ಚರ್ಚಿತಗೊಂಡ ಸಂಗತಿಗಳು ಕೆಳಗಿನಂತಿವೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ವ್ಯಾಪ್ತಿಗಳನ್ನು ಕುರಿತು ಹೇಳಲಾಗಿದೆ. ಈ ಅಧ್ಯಾಯವನ್ನು ಯಾವ ಕಾರಣಗಳಿಗಾಗಿ ಕೈಗೊಳ್ಳಲಾಯಿತು. ಇದರ ಮಹತ್ವವೇನು ಎಂಬಂತಹ ಸಂಗತಿಗಳನ್ನು ತಿಳಿಸಲಾಗಿದೆ. ಈ

ಅಧ್ಯಯನದಿಂದ ಕಲಾ ಕ್ಷೇತ್ರಕ್ಕೆ, ಅದರಲ್ಲಿ ವಿಶೇಷವಾಗಿ ಚಿತ್ರಕಲಾ ಕ್ಷೇತ್ರಕ್ಕೆ ಶಿಲ್ಪಕಲಾ ಕ್ಷೇತ್ರಕ್ಕೆ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಾಮಾಜಿಕ ಕ್ಷೇತ್ರಕ್ಕೆ ಯಾವ ರೀತಿಯಿಂದ ಉಪಯೋಗವಾಗುತ್ತದೆ. ಎಂಬುದನ್ನು ತಿಳಿಸಲಾಗಿದೆ. ಸಮಕಾಲೀನ ಬದುಕಿನಲ್ಲಿ ಈ ಅಧ್ಯಯನದ ಮಹತ್ವ ಮತ್ತು ಪ್ರಸ್ತುತತೆಯನ್ನು ಉದ್ದೇಶದ ಹಿನ್ನೆಲೆಯಲ್ಲಿ ಹೇಳಲಾಗಿದೆ. ಜೊತೆಗೆ ಈ ಅಧ್ಯಾಯದಲ್ಲಿ ಯಾವ ರೀತಿಯ ಸ್ವರೂಪವನ್ನು ಪಡೆದು ಯಾವ ಯಾವ ಅಧ್ಯಾಯಗಳಲ್ಲಿ ವಿಷಯದ ಮಾಹಿತಿಯನ್ನು ವಿಂಗಡಿಸಲಾಗಿದೆಯೆಂದು ಹೇಳಲಾಗಿದೆ. ಅಲ್ಲಲ್ಲೆ ಯಾವ ರೀತಿಯ ಆಕಾರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳಿಂದ ಹೇಗೆ ವಿಷಯ ಸಂಗ್ರಹಿಸಿಕೊಳ್ಳಲಾಗಿದೆ. ಹಾಗೂ ಅಧ್ಯಯನಕ್ಕಾಗಿ ಯಾವ ವಿಧಾನಗಳನ್ನು ಅನುಸರಿಸಲಾಗಿದೆ. ಎಂಬುದನ್ನು ತಿಳಿಸಿಕೊಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಚನ್ನಪಟ್ಟಣದ ಸಾಂಸ್ಕೃತಿಕ ಪರಿಸರ ಮತ್ತು ಕಲಾ ಹಿನ್ನೆಲೆಗಳನ್ನು ಕುರಿತು ತಿಳಿಸಲಾಗಿದೆ. ಚನ್ನಪಟ್ಟಣದ ರಾಜಕೀಯ ಆಡಳಿತ ವ್ಯವಸ್ಥೆ ಈ ಪ್ರದೇಶವನ್ನು ಆಳಿದ ಪ್ರಮುಖ ದೊರೆಗಳು, ನಿರ್ಮಿಸಿರುವ ಕಲಾತ್ಮಕ ದೇವಾಲಯಗಳು, ಕೆರೆಗಳು, ನದಿಗಳು ಹಾಗೂ ಗಣ್ಯವ್ಯಕ್ತಿಗಳ ಕುರಿತು ವಿವರಿಸಲಾಗಿದೆ. ಚನ್ನಪಟ್ಟಣದ ಮಸೀದಿಗಳು, ಪಾಳೇಗಾರ ಆಳ್ವಿಕೆ ಈ ಭಾಗದ ಸಂಗೀತ ಸಾಹಿತ್ಯ ನೃತ್ಯ ಮತ್ತು ನಾಟಕದಂತಹ ಕಲಾ ಪ್ರಕಾರಗಳನ್ನು ಕುರಿತು ವಿವರಿಸಲಾಗಿದೆ. ಇದರ ಜೊತೆಗೆ ಚನ್ನಪಟ್ಟಣದ ಕಲಾತ್ಮಕ ಗೊಂಬೆಗಳು ತಯಾರಿಕೆ ಪರಂಪರೆಯೂ ಬೆಳೆದು ಬಂದ ಐತಿಹಾಸಿಕ ಹಿನ್ನೆಲೆ ಕಟ್ಟಿಕೊಡಲು ಪ್ರಯತ್ನಿಸುವ ಮೂಲಕ ಚನ್ನಪಟ್ಟಣದ ಒಟ್ಟು ಕಲಾ ಹಿನ್ನೆಲೆಯನ್ನು ಬಿಂಬಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಚನ್ನಪಟ್ಟಣದ ಬಣ್ಣದ (ಚಿತ್ತಾರದ) ಗೊಂಬೆಗಳ ಪರಿಕರಗಳು ಮತ್ತು ರಚನಾ ವಿಧಾನವನ್ನು ಕುರಿತು ಹೇಳಲಾಗಿದೆ. ಇಲ್ಲಿ ಚನ್ನಪಟ್ಟಣದ ಗೊಂಬೆಗಳ ತಯಾರಿಕೆಯಲ್ಲಿ ಬೇಕಾಗುವ ಪರಿಕರಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಇಲ್ಲಿ ಬೇಕಾಗುವ ಪರಿಕರಗಳಲ್ಲಿ ಮರ (ಕಟ್ಟಿಗೆ) ಅದರಲ್ಲಿ ವಿಶೇಷವಾಗಿ ಆಲೆಮರ, ರೋಸ್‌ವುಡ್, ಟೀಕ್ ವುಡ್, ಸಿಲ್ವಾರ್ ಟ್ರೀ, ರೆಕ್ ಸಿಟಾರ್, ಸಾಗವಾನಿ, ಮರಗಳನ್ನು ಬಳಸಲಾಗುತ್ತದೆ. ಆದರೂ ಅತಿಹೆಚ್ಚು ಬಳಕೆಯಾಗುವುದು ಆಲೆಮರವಾಗಿದೆ. ಇದರ ಜೊತೆಗೆ ಬೇರೆ ಬೇರೆ ರೀತಿಯ ಬಣ್ಣಗಳು ಅಂಟು ದ್ರಾವಕಗಳು, ಕೆತ್ತುವ, ಕೊರೆಯುವ ಮತ್ತು ನುಣುಪುಗೊಳಿಸುವ ಸಾಧನಗಳನ್ನು ಬಳಸಲಾಗುತ್ತವೆ.

ಈ ಎಲ್ಲಾ ಪರಿಕರಗಳನ್ನು ಬಳಸಿಕೊಂಡು ಗೊಂಬೆಗಳನ್ನು ತಯಾರಿಸುವುದು ಒಂದು ಕುತೂಹಲಕರವಾದ ಮತ್ತು ಶ್ರಮದಾಯಕವಾದ ಕೆಲಸವಾಗಿದೆ. ಈ ಗೊಂಬೆಗಳ ತಯಾರಿಕೆಯಲ್ಲಿ ಮುಖ್ಯವಾಗಿ ಆಕಾರಗಳನ್ನು ರೂಪಿಸುವುದು (ಕೆತ್ತುವುದು) ಬಣ್ಣ ತುಂಬುವುದು ಮತ್ತು ಪಾಲಿಶ್ ಮಾಡುವುದು ಈ ಮೂರು ಹಂತದಲ್ಲಿ ನಡೆಯುತ್ತದೆ ಈ ರೀತಿಯ ಕಠಿಣವಾದ ತಯಾರಿಕೆ ವಿಧಾನವು ಪಟ್ರೆಯಿಂದ ಹಾಗೂ ಇತ್ತಿಚ್ಚಿಗೆ ವಿದ್ಯುತ್ ಯಂತ್ರಗಳ ಸಹಾಯದಿಂದ ಬಹಳ ಬೇಗನೆ ಮತ್ತು ಪಟ್ರೆಗಿಂತಲೂ ಹೆಚ್ಚಿನ ಶ್ರಮವಲ್ಲದೆ ನಡೆಯುತ್ತದೆ. ಕೆತ್ತುವುದು ಕೊರೆಯುವುದು, ಪಾಲಿಶ್ ಮಾಡುವುದು ಮುಂತಾದ ಎಲ್ಲಾ ವಿಧಾನಗಳನ್ನು ಆಧುನಿಕ ಯಂತ್ರಗಳ ಸಹಾಯದಿಂದ ಇತ್ತೀಚಿಗೆ ರಚನೆ ಮಾಡಲಾಗುತ್ತದೆ. ಹೀಗೆ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ಪರಿಕರಗಳು ಮತ್ತು ರಚನಾ ವಿಧಾನಗಳನ್ನು ಪಾರಂಪರಿಕ ಹಿನ್ನೆಲೆಯ ಜೊತೆಗೆ ಆಧುನಿಕ ಸ್ವರೂಪದಲ್ಲಿಯೇ ಹೇಳಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಚನ್ನಪಟ್ಟಣದ ಚಿತ್ತಾರದ ಗೊಂಬೆಗಳ ವಸ್ತು ವೈವಿಧ್ಯತೆಯ ಬಗ್ಗೆ ಹೇಳಲಾಗಿದೆ. ಇಲ್ಲಿ ರಚನೆ ಮಾಡುವ ಗೊಂಬೆಗಳಲ್ಲಿ ವಿವಿಧ ರೀತಿಯ ಮಾನವಾಕರಗಳು ಅದರಲ್ಲಿ ಸ್ತ್ರೀ ಪುರುಷರ ಗೊಂಬೆಗಳು ದೇವರುಗಳು ಗೊಂಬೆಗಳು, ವಿವಿಧ ಬಗೆಯ ಪ್ರಾಣಿಗಳು, ಪಕ್ಷಿಗಳು, ರೈಲು, ವಿಮಾನ, ಬಸ್ಸು, ಬ್ಯಾಟಗಳು, ಟ್ರೋಫಿಗಳು, ಆಭರಣ ಪೆಟ್ಟಿಗೆಗಳು, ಮೇಣದ ಬತ್ತಿ ಸ್ಟ್ಯಾಂಡಗಳು, ಶಾಲಾ ಕಲಿಕೆ ಸಾಮಗ್ರಿಗಳಲ್ಲದೆ ಇನ್ನೂ ಹತ್ತು ಹಲವು ಮಾದರಿಯ ಸಾಮಾನುಗಳು ಇಲ್ಲಿ ರಚನೆಯಾಗುತ್ತವೆ. ಆಧುನಿಕ ಮಕ್ಕಳ ವಿವಿಧ ಬಗೆಯ ಆಟಿಕೆ ಸಾಮಾನುಗಳು ಕೊರ ಹಾರಗಳು ವಿವಿಧ ಗಾತ್ರದ ಮಣಿಮುತ್ತುಗಳು ಅಲಂಕಾರಿಕ ಹೂಜಿಗಳು ಹೀಗೆ ವ್ಯಾಪಕವಾಗಿ ಇಲ್ಲಿ ಗೊಂಬೆಗಳ ವಸ್ತು ವೈವಿಧ್ಯತೆಯೂ ಹರಡಿಕೊಳ್ಳುತ್ತದೆ. ಹೀಗೆ ಪ್ರತಿಯೊಂದು ವಿಷಯಗಳನ್ನು ವಿಷಯನುಸಾರ ವಿಂಗಡಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇಲ್ಲಿ ವಸ್ತು ವಿಷಯಗಳನ್ನು ಹೇಳುವಾಗ ಆಯಾ ಗೊಂಬೆಗಳ ಆಕರ ಭಾವ ಭಂಗಿಗಳ ರಚನಾ ಶೈಲಿ ವರ್ಣ ವಿನ್ಯಾಸ ಪ್ರಭಾವ ಪ್ರೇರಣೆ ತಂತ್ರಗಾರಿಕೆ ಮುಂತಾದ ಅಂಶಗಳನ್ನು ಹೇಳಲಾಗಿದೆ.

ಐದನೇಯ ಅಧ್ಯಾಯದಲ್ಲಿ ಶಿಲ್ಪಾ ಟ್ರಸ್ಟ್ ಮಾಯಾ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಹಾಗೂ ಚನ್ನಪಟ್ಟಣದ ಕೆಲವು ಹಿರಿಯ ಹಾಗೂ ಕಿರಿಯ ಕಲಾವಿದರ ಪರಿಚಯ, ಸ್ಥಿತಿಗತಿ ಮತ್ತು ಅವರ ಕಲಾಕೃತಿಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಚನ್ನಪಟ್ಟಣದ ಬಣ್ಣದ ಗೊಂಬೆಗಳ ಮಾರಾಟ ವ್ಯವಸ್ಥೆ ಈ ಹಿನ್ನೆಲೆಯಲ್ಲಿ ಕಲಾವಿದರ ಪಾತ್ರವೇನು, ಗೊಂಬೆಗಳ ತಯಾರಿಕೆಗೆ ಅವರು ಯಾವ ರೀತಿಯ ಪರಿಕರಗಳನ್ನು ಬಳಸುತ್ತಾರೆ. ಅವುಗಳನ್ನು ಯಾವ ಮೂಲದಿಂದ ಸಂಗ್ರಹಿಸುತ್ತಾರೆ ಎಂಬುವಂತಹ ಸಂಗತಿಗಳನ್ನು ತಿಳಿಸಲಾಗಿದೆ. ಅಲ್ಲದೆ ಇವರ ಆರ್ಥಿಕ ಸ್ಥಿತಿಗತಿಗಳು, ಗೊಂಬೆಗಳ ತಯಾರಿಕೆ ಮತ್ತು ಮಾರಾಟದಿಂದ ಅವರ ಕೌಟುಂಬಿಕ ಜೀವನವು ಪಡೆದಕೊಂಡಂತಹ ಪ್ರಯೋಜನಗಳು ಮುಂತಾದ ಸಂಗತಿಗಳನ್ನು ಚರ್ಚಿಸಲಾಗಿದೆ. ಇದರ ಜೊತೆಗೆ ಗೊಂಬೆಗಳ ಮಾರಾಟ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದ ಮಾರಾಟ ಪದ್ಧತಿಯನ್ನು ತಿಳಿಸುತ್ತಾ ಆ ಕಾಲದಲ್ಲಿ ಈ ಗೊಂಬೆಗಳ ಮಾರುಕಟ್ಟೆ ಎಲ್ಲೆಲ್ಲಿ ಉತ್ತಮವಾಗಿತ್ತು ಎಂಬುದನ್ನು ಗಮನಿಸಲಾಗಿದೆ. ಅಲ್ಲದೇ ಇತ್ತೀಚಿನ ದಿನಗಳಲ್ಲಿ ಗೊಂಬೆಗಳ ಆರ್ಥಿಕ ವಹಿವಾಟು ಹೇಗಿದೆ ಎನ್ನುವ ನಿಟ್ಟಿನಲ್ಲಿ ಇನ್ನೂ ಎಷ್ಟು ಪ್ರಖ್ಯಾತಗೊಂಡಿವೆ. ಎಂಬುದನ್ನು ತಿಳಿಸಲಾಗಿದೆ. ಸ್ಥಳೀಯರು ಸಂಘ ಸಂಸ್ಥೆಗಳು, ಸಹಕಾರಿ ಮಂಡಳಿಗಳು, ಸರಕಾರಗಳು ಈ ಗೊಂಬೆಗಳ ಕಲಾತ್ಮಕ ಉದ್ದಿಮೆಗೆ ಯಾವ ರೀತಿಯ ಪ್ರೋತ್ಸಾಹಗಳನ್ನು ಕೊಟ್ಟಿವೆ. ಮತ್ತು ಕೊಡಬೇಕಾಗಿದೆ. ಎಂಬುದನ್ನು ಚರ್ಚಿಸಲಾಗಿದೆ. ಹೀಗೆ ಹಲವಾರು ಅಧ್ಯಯನಗಳಲ್ಲಿ ನಿರೂಪಿತಗೊಂಡಿದೆ. ಈ ನಿಟ್ಟಿನಲ್ಲಿ ಮುಂದಿನ ಅಧ್ಯಯನ ಕಾರರಿಗೆ ಮಾರ್ಗಸೂಚಿಯಾಗಿ ಈ ಕಿರು ಪ್ರಬಂಧವನ್ನು ಪ್ರಮುಖ ಪಾತ್ರ ವಹಿಸಬಲ್ಲದು ಎಂಬುದನ್ನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಏಳನೆಯ ಅಧ್ಯಾಯದಲ್ಲಿ ಎಲ್ಲಾ ಅಧ್ಯಯನಗಳ ಸಮೀಕ್ಷೆ ಇದೆ.

ಅಧ್ಯಯನದ ಫಲಿತಾಂಶಗಳು:

- ಇದುವರೆಗೆ ಚನ್ನಪಟ್ಟಣ ಚಿತ್ತಾರ ಗೊಂಬೆಗಳ ಬಗೆಗೆ ಯಾವುದೇ ಸಂಶೋಧನ ಅಧ್ಯಯನಗಳು ನಡೆದಿರಲಿಲ್ಲ ಪ್ರಸ್ತುತ ಅಧ್ಯಯನವು ಈ ಕೊರತೆಯನ್ನು ತಕ್ಕಮಟ್ಟಿಗೆ ಹೋಗಲಾಡಿಸಲು ಪ್ರಯತ್ನ ಮಾಡಲಾಗಿದೆ.
- ಚನ್ನಪಟ್ಟಣ ಚಿತ್ತಾರ ಗೊಂಬೆ ಶಿಲ್ಪಕಲಾ ಕ್ಷೇತ್ರದಿಂದ ತುಂಬಾ ನಿರ್ಲಕ್ಷಿಸಲ್ಪಟ್ಟ ಮತ್ತು ಅಷ್ಟೇ ಸಮಕಾಲೀನ ಸಂದರ್ಭದಲ್ಲಿ ಪ್ರಸ್ತುತವಿರುವ ಹಾಗೂ ಪ್ರಭಾವಿಕಾರಿಯಾದ ಈ ಕಲಾ ಪ್ರಕಾರವನ್ನು ಮಂಚೂಣಿಯಲ್ಲಿ ಅಧ್ಯಯನ ಮಾಡುವ ಸಾಕಷ್ಟು ಅವಕಾಶವಿರುವದುನ್ನು ಪ್ರಸ್ತುತ ಅಧ್ಯಯನವು ಕಂಡುಕೊಂಡಿದೆ.
- ಅಜ್ಞಾತವಾಗಿದ್ದ ಅನೇಕ ಚನ್ನಪಟ್ಟಣದ ಗೊಂಬೆ ತಯಾರಿಕೆ ಕುಶಲ ಕರ್ಮಿಗಳು ಇಲ್ಲಿ ಅವರನ್ನು ಪ್ರಥಮಬಾರಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

- ಸುಮಾರು ೨ ಶತಮಾನಗಳಿಂದ ಕರ್ನಾಟಕ ಚನ್ನಪಟ್ಟಣದಲ್ಲಿ ಅಸ್ತಿತ್ವದಲ್ಲಿರುವ ಪಾರಂಪರಿಕ ನೆಲೆಯ ಚಿತ್ತಾರಗೊಂಬೆಗಳು ಬಹುತೇಕವಾಗಿ ಬೇರೆ ರಾಜ್ಯ, ರಾಷ್ಟ್ರ ಮತ್ತು ವಿದೇಶದ ಇದರ ವಹಿವಾಟು ನೋಡಲು ಸಿಗುತ್ತದೆ. ಆದರೆ ಇಲ್ಲಿಯೇ ಹುಟ್ಟಿ ಬೆಳೆದ ಪ್ರಾಚೀನವೆನ್ನಬಹುದಾದ ಚಿತ್ತಾರ ಗೊಂಬೆ ಕಲೆಯನ್ನು ಕರ್ನಾಟಕದಲ್ಲಿ ಪೋಷಿಸಲು ಅಷ್ಟರಮಟ್ಟಿಗೆ ಸ್ಥಾನವನ್ನು ಕೊಟ್ಟಿಲ್ಲ.
- ಚಿತ್ತಾರ ಗೊಂಬೆ ತಯಾರಿಕೆ ಹೆಣ್ಣು-ಗಂಡು ಬೇಧವಿಲ್ಲದೇ ಮಾಡುವಂತಹ ಕೆಲಸವಿದಾಗಿದೆ. ಚನ್ನಪಟ್ಟಣದಲ್ಲಿ ಯಾವ ಹೆಣ್ಣುಮಕ್ಕಳು ಸ್ವಂತದಾಗಿ ನಡೆಸುವ ಕಾರ್ಖಾನೆಗಳನ್ನು ಸಿಗುವುದಿಲ್ಲ. ಸರಕಾರ ಸಂಘ ಸಂಸ್ಥೆಗಳು ಉತ್ತೇಜನವನ್ನು ಕೊಡಬೇಕಾಗಿದೆ.
- ಚನ್ನಪಟ್ಟಣದ ಗೊಂಬೆ ತಯಾರಿಕೆಯಲ್ಲಿ ಕಾರ್ಮಿಕರಿಗೆ ವೃದ್ಯಾಪ್ಯ ಪಿಂಚಣಿ, ಆರೋಗ್ಯ ಸೌಲಭ್ಯ, ಬ್ಯಾಂಕಗಳಿಂದ ಹಣಕಾಸಿನ ನೆರವು, ಕಾರ್ಮಿಕ ಮಕ್ಕಳಿಗೆ ಇನ್ನೂ ಸೌಲಭ್ಯಗಳನ್ನು ಹೆಚ್ಚಿಸಿ, ವಿದ್ಯಾವಂತರನ್ನಾಗಿ ಮಾಡಿ, ಗೊಂಬೆ ತಯಾರಿಕೆ ಕೆಲಸಕ್ಕೆ ಅವರಿಗೆ ಉತ್ತೇಜನವನ್ನು ಕೊಡುವಲ್ಲಿ ಎನ್.ಜಿ.ಓಗಳು ಸರಕಾರಗಳು ಗಮನ ಹರಿಸಬೇಕು.
- ವರ್ಷದ ಎಲ್ಲಾ ದಿನಗಳಲ್ಲೂ ಗೊಂಬೆ ತಯಾರಿಕೆ ಕೆಲಸ ಇದ್ದೆ ಇರುತ್ತದೆ. ಚನ್ನಪಟ್ಟಣದದಲ್ಲಿ ಆಲೆ ಮರ ಬೆಳೆಯುತ್ತವೆಯಾದರೂ ಅಪಾರ ಬೇಡಿಕೆಯನ್ನು ಪೂರೈಸುವ ಮಟ್ಟಕ್ಕೆ ಸಿಗುವುದಿಲ್ಲ. ಸರಕಾರಿ ಜಮೀನಿಗಳಲ್ಲಿ ಅಗತ್ಯವಾಗುವಷ್ಟು ಆಲೆ ಮರಗಳನ್ನು ಬೆಳೆಸಿ ಉದ್ಯಮಕ್ಕೆ ನೆರವಾಗುವಂತೆ ಮಾಡಬೇಕೆಂದು ಶಿಫಾರಸ್ಸು ಮಾಡುತ್ತೇನೆ.
- ತಮಿಳುನಾಡು, ರಾಜಸ್ಥಾನ, ಗುಜರಾತ್‌ನಂತಹ ರಾಜ್ಯಗಳಲ್ಲಿ ಗೊಂಬೆ ತಯಾರಿಕೆಯನ್ನು ಮತ್ತು ಉದ್ಯಮವನ್ನು ಬೆಳೆಸಿ, ಪ್ರೋತ್ಸಾಹಿಸಲು ತೆರಿಗೆಯನ್ನು ಹಾಕದಿರುವುದು ಔದಾರ್ಯವನ್ನು ಕರ್ನಾಟಕ ಸರಕಾರವು ತೋರಬೇಕು.
- ಯಾವುದೋ ಜಾಗದ ಅನಾಕರ್ಷಕವಾಗಿರುವ ಕಾರ್ಖಾನೆಗಳಿಗೆ ಜನ ಬಂದು ಗೊಂಬೆಗಳನ್ನು ಖರೀದಿಸುವುದು ಕಡಿಮೆ. ತಾವು ತಯಾರಿಸಿದ ಗೊಂಬೆಗಳು ಚನ್ನಪಟ್ಟಣ ಒಂದರಲ್ಲಿಯೇ ಮಾರಾಟ ಮಾಡಲು ಸಾಧ್ಯವಿಲ್ಲದ್ದರಿಂದಲೂ, ದೊಡ್ಡ

ಬಂಡವಾಳದಾರರು ಮಾತ್ರ ನಗರಗಳಿಂದಲೂ, ವಿದೇಶಗಳಿಂದಲೂ ಬೇಡಿಕೆ ರಫ್ತು ಮಾಡುವ ಸಾಹಸಕ್ಕೆ ಕೈ ಹಾಕಿ ಲಕ್ಷಾಂತರ ಸಂಪಾದಿಸಬಲ್ಲರು, ಆದರೆ ಸಣ್ಣ ಗೊಂಬೆ ತಯಾರಿಕೆ ಕೆಲಸಗಾರರು ಇಂಥ ಅವಕಾಶಗಳಿಂದ ಹಲವು ರೀತಿಯ ಸಾಕಷ್ಟುಗಳಿಗೆ ಒಳಗಾಗುತ್ತಾರೆ. ಸರಕಾರವು ಮಧ್ಯಸ್ಥಿಕೆ ವಹಿಸಿ ಇಂತಹ ಅವಕಾಶಗಳಿಂದ ಎಲ್ಲರಿಗೂ ಸಿಗದಿದರ, ಸಮಾನ ಅವಕಾಶಗಳನ್ನು ದೊರಕಿಸುವಂತೆ ಮಾಡಬೇಕಾಗಿದೆ.

- ಚನ್ನಪಟ್ಟಣ ಹಾಗೂ ಸುತ್ತ-ಮುತ್ತಲಿನ ಸೌಲಭ್ಯಗಳು ಗೊಂಬೆ ತಯಾರಿಕೆ ಕುಶಲಕರ್ಮಿಗಳಿಗೆ ಸರಿಯಾದ ಸ್ಥಾನಮಾನಗಳು, ಸರಕಾರದಿಂದ ಸಿಗಬೇಕಾದ ಪ್ರಶಸ್ತಿ ಪುರಸ್ಕಾರಗಳು ಸಿಗುವಂತಾಗಲ ಪ್ರಸ್ತುತ ಅಧ್ಯಯನವು ಶಿಫಾರಸ್ಸುಗಳನ್ನು ಮಾಡಿದೆ.
- ಬಹುಮುಖ್ಯವಾದ ಚನ್ನಪಟ್ಟಣದ ಚಿತ್ತಾರ ಗೊಂಬೆಗಳು ಇಂದೂ ಪಠ್ಯಕ್ರಮದಲ್ಲಿ ಮತ್ತು ಶಾಲಾ ಕಾಲೇಜುಗಳನ್ನು ಅಧ್ಯಾಯನ ಮಾಡುತ್ತಿರುವ ಕಲಾವಿದ್ಯಾರ್ಥಿಗಳಿಗೆ ಸರಿಯಾದ ತಿಳುವಳಿಕೆಗೋಸ್ಕರ ಅಧ್ಯಯನದ ಶಿಬಿರಗಳು, ಕಲಾ ಕಮ್ಮಟ, ಕಲಾ ಪ್ರಾತ್ಯಕ್ಷಿಕೆಗಳು, ವಿಚಾರ ಸಂಕೀರ್ಣಗಳು ನಡೆಯುವುದರ ಅವಶ್ಯಕತೆಗಳನ್ನು ಪ್ರಸ್ತುತ ಪ್ರಸ್ತಾಪಿಸಲಾಗಿದೆ.
- ಗೊಂಬೆ ಕಲಾಕೃತಿಗಳು ದಾಖಲಾತಿಕರಣ ಅಧ್ಯಾಯಗಳು ವ್ಯವಸ್ಥಿತವಾದ ಅಧ್ಯಯನ ನಡೆಸಲು ಮತ್ತು ಅವುಗಳ ಗೊಂಬೆಗಳ ಪ್ರದರ್ಶನ ಮಾಡಲು ಸ್ವತಂತ್ರವಾದ ಮಳಿಗೆಗಳು ನಮ್ಮ ಕರ್ನಾಟಕ ಹಾಗೂ ಹೊರರಾಜ್ಯಗಳಲ್ಲಿ ಅವಶ್ಯಕತೆ ಇರುವುದನ್ನು ಪ್ರಸ್ತು ಅಧ್ಯಯನವು ಗಮನ ಹರಿಸಿದೆ.
- ಅಧ್ಯಯನದ ವ್ಯಾಪ್ತಿಗೆ ಪೂರಕವಾಗಿ ಎಲ್ಲಾ ಗೊಂಬೆಯ ಕಲಾಕೃತಿಗಳನ್ನು ಇಲ್ಲಿ ಅಧ್ಯಯನದಲ್ಲಿ ಒಳಪಡಿಸಿಲ್ಲ. ಸಾವಿರಾರು ಗೊಂಬೆ ಕಲಾಕೃತಿಗಳು ಈಗಲೂ ಇದ್ದು ಮುದ್ದಿನ ಪೀಳಿಗೆಯ ಉತ್ಸಾಹಿ ಸಂಶೋಧಕರಿಗೆ ಪ್ರಮುಖ ಆಕಾರಗಳಾಗಿ ಲಭ್ಯವಾಗಲಿದೆ. ಇದೊಂದು ಪ್ರಾಥಮಿಕವಾದ ಮತ್ತು ಕಾಲಬದ್ಧವಾದ ಅಧ್ಯಯನವಾಗಿರುತ್ತದೆ. ಇನ್ನೂ ಈ ಕ್ಷೇತ್ರದಲ್ಲಿ ವ್ಯಾಪಕವಾದ ಅಧ್ಯಯನಕ್ಕೆ ವಿಫಲವಾದ ಅವಕಾಶಗಳು ಇವೆ ಎಂದು ಹೇಳುತ್ತಾ ಅಧ್ಯಯನವನ್ನು ಸಮಾಪ್ತಿಗೊಳಿಸಲಾಗಿದೆ.

ಗ್ರಂಥಋಣ

೧. ಕನ್ನಡ ವಿಶ್ವಕೋಶ ಕರ್ನಾಟಕ (ಪರಿಷ್ಕೃತ) ಸಂಪುಟ (೧) ಡಾ.ಹಾ.ನಾಯಕ ಮೈಸೂರು ವಿಶ್ವವಿದ್ಯಾಲಯ, ೨೦೦೫.

೨. ವರ್ಣ ಸಂಚಯ, ಡಾ.ಎಸ್.ಸಿ. ಪಾಟೀಲ್, ವಿಜಯ ಚಿತ್ರಕಲಾ ಮಹಾವಿದ್ಯಾಲಯ, ೨೦೦೧

೩. ಕರ್ನಾಟಕದ ಚಿತ್ರಕಲೆ, ಡಾ.ಶಿವರಾಮ ಕಾರಂತ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨.

೪. ದೃಶ್ಯ ಕಲಾವಿದರು, ಎನ್ ಮರಿಶಾಮಾಚಾರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ೨೦೦೩.

೫. ಭಾರತೀಯ ಚಿತ್ರಕಲೆ, ಲೇ.ಸಿ. ಶಿವರಾಮಮೂರ್ತಿ ಅನುವಾದ ಪಿ.ಆರ್. ತಿಪ್ಪೆಸ್ವಾಮಿ ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ, ೧೯೯೮.

೬. ಕರಕುಶಲ ಕಲೆಗಳು, ಸಂಪಾದಕರು, ಡಾ.ಕರೀಗೌಡ ಬೀಚನಹಳ್ಳಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೭. ಕಲಾನುಭವ ಸೀತಾರಾಮಯ್ಯ, ಬೆಂಗಳೂರು ವಿಶ್ವವಿದ್ಯಾಲಯ, ೧೯೭೬.

೮. ಕಲಾಕೋಶ, ತಿಪ್ಪೇಸ್ವಾಮಿ. ಪಿ.ಆರ್ ಕರ್ನಾಟಕ, ಲಲಿತಕಲಾ ಅಕಾಡೆಮಿ, ೧೯೯೪.

೯. ಕಲಾ ವಿಶೇಷಗಳು, ವಾಸುದೇ ವ ಕಾಣಿಮಾರ್, ಭಾರದ್ವಾಜ, ಪ್ರಕಾಶನ, ಕದಿರೆ. ೨೦೦೧.

೧೦. ಚಿತ್ರಕಲೆ ಮತ್ತು ಪೂರಕ ಕ್ಷೇತ್ರಗಳು. ಎಸ್.ಸಿ.ಪಾಟೀಲ ಸ್ಕೂಲ್ ಆಫ್ ಆರ್ಟ ವಜ್ರಮಹೋತ್ಸವ ಸಮಿತಿ, ಧಾರವಾಡ.

೧೧. ಚಿತ್ರತರಂಗ, ಶಂಕರ ಪಾಟೀಲ, ಪ್ರಗತಿ ಪ್ರಕಾಶನ, ೧೯೯೫.

೧೨. ಚಿತ್ರಕಲಾ ಪ್ರಪಂಚ, ಸಂ.ತಿಪ್ಪೇಸ್ವಾಮಿ ಪಿ.ಆರ್. ಕರ್ನಾಟಕ ಲಲಿತಕಲಾ ಅಕಾಡೆಮಿ ೧೯೯೩.

೧೩. ನಿಜದ ನೆಲೆ (ಸಂ)., ಹಿರೇಮಠ ಬಿ.ಆರ್, ಡಾ.ಬಿ.ಕೆ ಹಿರೇಮಠರ ಅಭಿನಂದನಾ ಗ್ರಂಥ, ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ೨೦೦೩.

೧೪. ಗೌರವ ಪ್ರಶಸ್ತಿ ಪುರಸ್ಕೃತರು, ಕೃಷ್ಣಶೆಟ್ಟಿ,ಚಿ.ಸು. ಕರ್ನಾಟಕ ಶಿಲ್ಪಕಲಾ ಅಡಾಡೆಮಿ, ಬೆಂಗಳೂರು. ೨೦೦೮.

೧೫. ದೃಶ್ಯಕಲಾ ಪ್ರಶಸ್ತಿ ಪುರಸ್ಕೃತರು, ಅಂದಾನಿ.ವ್ಹಿ.ಜಿ. ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೧೬. ಕರ್ನಾಟಕದ ಜನಪದ ಚಿತ್ರಕಲೆ ಪಾಟೀಲ. ಎಸ್.ಸಿ.ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೯೩.

೧೭. ಲೇಖಾವರಣ. ಮಲ್ಲಿಕಾರ್ಜುನ ಬಾಗೋಡಿ, ಸರಚಂದ್ರ ಪ್ರಕಾಶನ, ಚಿತ್ತಾಪುರ, ೨೦೦೯.

೧೮. ಕರ್ನಾಟಕ ಜನಪದ ಕಲೆಗಳ ಕೋಶ, ಬೋರಲಿಂಗಯ್ಯ ಹಿ.ಚಿ.(ಸಂ) ಪ್ರಸಾರಾಂಗ. ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೬.

೧೯. ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಷಯಕೋಶ, ಲಲಿತಕಲೆಗಳ ಸಂಪುಟ. ಡಾ.ಪಿ.ಕೆ.ಖಂಡೋಬಾ., ಡಾ.ಎಸ್.ಸಿ.ಪಾಟಿಲ್ ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ. ೨೦೧೨.

೨೦. ದೃಶ್ಯಕಲಾವಿದರು. ಎಚ್. ಮರಿಶಾಮಾಚಾರ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೩.

೨೧. ಚಿತ್ತಾರದ ಗೊಂಬೆ ಲೇ.ಸಾ.ಕೃ ರಾಮಚಂದ್ರರಾವ್, ೨೦೦೪.

೨೨. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಲೇ. ಡಾ.ಎಚ್.ತಿಪ್ಪೇರುದ್ರಸ್ವಾಮಿ. ಕೇಂದ್ರ ಸ್ವಾಮಿ ಅಕಾಡೆಮಿ. ೨೦೧೧.

೨೩. ಕಲೆ ಮತ್ತು ರಸಾಸ್ವಾದನೆ, ಪ್ರೊ.ಎಂ. ಎಚ್. ಕೃಷ್ಣಯ್ಯ., ಕರ್ನಾಟಕ ಲಲಿತಕಲಾ ಅಕಾಡೆಮಿ. ಬೆಂಗಳೂರು.

೨೪. ಕಲಾಕೋಶ ಎನ್.ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪.

೨೫. ಬಿದ್ರಿಕಲೆ, ಕಲಾಕೋಶ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪.

೨೬. ಬಿದರಿ ಕಲೆಗಗಳು. ಕರಕುಶಲ ಕಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಶಿವರಾಮ ಕಾರಂತರ ಸಾಹಿತ್ಯಶ್ರೇಣಿ, ಕಲಾ ಪ್ರಬಂಧಗಳು–೨, ಬಿ.ಮಾಲಿನಿ ಮಲ್ಯ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೨೦೦೭.

೨೮. ಕಲಾ ಚರಿತ್ರೆ ಎನ್.ಮರಿಶಾಮಾಚಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೨೦೦೩.

೨೯. Cambridge History of India Vol-1, p.600.

೩೦. G.N.Pant, Indo-Islamic Arms and Armour in An Age of Splendour – Islamic Art in India, Margo Publication Bombay 1983.

೩೧. Indian Craft., Surat D.N. Development and Potential, Vikas Publication house, New Delhi 1982.

೩೨. Nandagopal Choodamani. Edited by M.L Nigam. The Traditional Jewellary of Karnataka, in Decorative Art of India – Salar Jung Museum, Hyderabad. 1987.

೩೩. Pal M.K. Crafts and Craftsman in Traditional Indian Kanak Publication, New Delhi, 1978.

೩೪. Shanti Swarup "Mughal Art A Study In handicraft" Agam Kala Prakashan, New Delhi 1996.

ಪ್ರಬಂಧಗಳು:

೧. ಡಾ.ಎಸ್.ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಎಚ್.ಡಿ ಮಹಾ ಪ್ರಬಂಧ ಕರ್ನಾಟಕ ವಿ.ವಿ.

೨. ಡಾ. ಮಲ್ಲಿಕಾರ್ಜುನ.ಸಿ. ಬಾಗೋಡಿ : ಸುರುಪುರದ ಶೈಲಿಯ ಚಿತ್ರಕಲೆ ಒಂದು ಅಧ್ಯಯನ ಪಿಎಚ್.ಡಿ ಮಹಾಪ್ರಬಂಧ ಗುಲಬರ್ಗಾ ವಿವಿ. ೨೦೦೭.

೩. ಡಾ. ಮೋಹನ್ ಪಂಚಾಳ: ಕಲಾವಿದ ಎಸ್.ಎಂ. ಪಂಡಿತ ಬದುಕು ಮತ್ತು ಕಲೆ ಪಿಎಚ್.ಡಿ ಮಹಾ ಪ್ರಬಂಧ.

೪. ಡಾ. ಶಶಿಕಲಾ ಹೂಗಾರ್: ತೊಗಲು ಗೊಂಬೆ ಚಿತ್ರಕಲೆ, ಪಿಎಚ್.ಡಿ ಮಹಾಪ್ರಬಂಧ ಕನ್ನಡ ವಿ.ವಿ. ೨೦೦೪.

ವಕ್ತೃಗಳು

ಕ್ರಸಂ	ಹೆಸರು	ವಯಸ್ಸು	ಕಾರ್ಯ ಅವಧಿ	ಶಿಕ್ಷಣ	ಊರು
೦೧	ಕೃಷ್ಣ	೫೫	೩೦	ಎಸ್.ಎಸ್.ಎಲ್.ಸಿ	ಮುನಿಯಪ್ಪನದೊಡ್ಡಿ
೦೨	ಮುನಿಯಪ್ಪ	೬೫	೫೦	ಐದನೇ ತರಗತಿ	ಮುನಿಯಪ್ಪನದೊಡ್ಡಿ
೦೩	ಕೃಷ್ಣಸಿಂಗ್	೫೦	೩೫	ಬಿ.ಎ	ಮೈಸೂರು ರಸ್ತೆ ಚನ್ನಪಟ್ಟಣ
೦೪	ಸಂಜಯ	೨೫	೧೫	ಪಿ.ಯು.ಸಿ	ಚೆನ್ನಪಟ್ಟಣ
೦೫	ಉಮೇಶ	೫೦	೩೦	ಏಳನೇ ತರಗತಿ	ಚೆನ್ನಪಟ್ಟಣ
೦೬	ಸುರೇಶ	೩೦	೨೦	ನಾಲ್ಕನೇ ತರಗತಿ	ನೀಲಸಂದ್ರ
೦೭	ದುಂಡಮ್ಮ	೨೫	೧೦	ಅನಕ್ಷರಸ್ಥ	
೦೮	ಸತ್ಯ	೨೫	೧೦	ಎಸ್.ಎಸ್.ಎಲ್.ಸಿ	ನೀಲಸಂದ್ರ
೦೯	ರಾಜ	೨೫	೧೦	ಎಸ್.ಎಸ್.ಎಲ್.ಸಿ	ನೀಲಸಂದ್ರ
೧೦	ಪುಟ್ಟಸ್ವಾಮಿ	೭೦	೫೦	ಅನಕ್ಷರಸ್ಥ	ನೀಲಸಂದ್ರ
೧೧	ಶೇಷಯ್ಯ	೫೦	೩೫	ಅನಕ್ಷರಸ್ಥ	ನೀಲಸಂದ್ರ
೧೨	ಅಬ್ದುಲ್ ಪಾಶಾ	೫೦	೨೫	ಬಿ.ಎ	ಕ್ವಾಟರ್ಸ ಸುಲ್ತಾನಪುರ
೧೩	ನಿಜಾಮ್	೪೦	೨೫	ಎಸ್.ಎಸ್.ಎಲ್.ಸಿ	ಕ್ವಾಟರ್ಸ ಸುಲ್ತಾನಪುರ
೧೪	ವಾಜೀದ್ ಖಾನ್	೩೫	೨೫	ಏಳನೇ ತರಗತಿ	ಕ್ವಾಟರ್ಸ ಸುಲ್ತಾನಪುರ
೧೫	ರಿಯಾಜ್	೪೦	೩೦	ಎಸ್.ಎಸ್.ಎಲ್.ಸಿ	ಕ್ವಾಟರ್ಸ ಸುಲ್ತಾನಪುರ

•

೧೬	ಪಾಪಣ್ಣ	೫೪	೪೦	ಏಳನೇ ತರಗತಿ	ಚನ್ನಪಟ್ಟಣ ಕಲಾನಗರ
೧೭	ರುಕ್ಕಮ್ಮ	೩೮	೨೮	ಅನಕ್ಷರಸ್ಥ	ಚನ್ನಪಟ್ಟಣ ಕಲಾನಗರ
೧೮	ಮುಜೀಬಾ	೪೮	೩೦	ಎಸ್.ಎಸ್.ಎಸ್.ಸಿ	ಕಲಾನಗರ
೧೯	ಸೈಯದ್ ಸಮಿವುಲ್ಲಾ	೫೦	೩೦	ಏಳನೇ ತರಗತಿ	ಕಲಾನಗರ
೨೦	ಅಬೀಬ್ ಪಾಷಾ	೫೪	೨೦	ಎಸ್.ಎಸ್.ಎಲ್.ಸಿ	ಕೋಟೆ
೨೧	ಹಲಿಯಾಜ್ ಪಾಶಾ	೫೬	೪೦	ಏಳನೇ ತರಗತಿ	ಕೋಟೆ
೨೨	ಮಹಮ್ಮದ ಫಕರ್	೪೫	೩೦	ಎಸ್.ಎಸ್.ಎಲ್.ಸಿ	ಏಲೆಕೋಟೆ
೨೩	ನರಹರಿ	೫೦	೪೦	ಅನಕ್ಷರಸ್ಥ	ಕೋಟೆ
೨೪	ಮಹಮ್ಮದ	೩೫	೨೦	ಎಸ್.ಎಸ್.ಎಲ್.ಸಿ	ಎಲೆಕೋಟೆ
೨೫	ಜಾವೀದ್	೩೭	೨೦	೪ನೇ ತರಗತಿ	ಚನ್ನಪಟ್ಟಣ
೨೬	ಪದ್ಮ	೪೦	೨೦	ಅನಕ್ಷರಸ್ಥ	ನೀಲಸಂದ್ರ
೨೭	ಪುಷ್ಪ	೪೦	೨೦	ಅನಕ್ಷರಸ್ಥ	ಕರಿಯಪ್ಪನ ದೊಡ್ಡಿ
೨೮	ಸಮೀರ ಅಬ್ದುಲ್	೪೦	೨೦	೮ ನೇ ತರಗತಿ	ಮುಸ್ಲಿಂ ಕಾಲೋನಿ
೨೯	ಸೈಯದ್ ಖಾಸಿಂ	೫೦	೩೫	ಅನಕ್ಷರಸ್ಥ	ಮಲ್ಲಯ್ಯನ ದೊಡ್ಡಿ
೩೦	ಕೃಷ್ಣಪ್ಪ	೫೫	೪೦	ಅನಕ್ಷರಸ್ಥ	ತಟ್ಟಿಕೆರೆ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ ಮೇಲ್ಮನೆ, ಚಾಲುಕ್ಯ ವಿಭಾಗ

ಜೆ. ಸಿ. ರಸ್ತೆ ಬೆಂಗಳೂರು

೨೦೧೮